بِسْمِ اللّٰهِ الرَّحْمٰنِ الرَّحِيْم     نَحْمَدُهٗ وَنُصَلِّى عَلٰى رَسُوْلِهِ الْكَرِيْمِ     وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 21

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

27 ಮೇ 2021, 27 ಹಿಜ್ರತ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
14 ಶವ್ವಾಲ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمْرِهٖ وَاَمْرِهٖ

## ಅಲ್ಲಾಹನ ಉಪದೇಶ

يٰۤاَهْلَ الْكِتٰبِ قَدْ جَآءَكُمْ رَسُوْلُنَا يُبَيِّنُ
لَكُمْ كَثِيْرًا مِّمَّا كُنْتُمْ تُخْفُوْنَ مِنَ الْكِتٰبِ
وَيَعْفُوْا عَنْ كَثِيْرٍ ۬ؕ قَدْ جَآءَكُمْ مِّنَ اللّٰهِ نُوْرٌ
وَّكِتٰبٌ مُّبِيْنٌ (المائدہ:16)

**(ಅಲ್‌ಮಾಇದ: 16)**

ಅಂದರೆ: ಎಲೈ ಗ್ರಂಥದವರೇ, ಗ್ರಂಥದಲ್ಲಿ ನೀವು ಮರೆಮಾಚಿಟ್ಟಿದ್ದ ಅನೇಕ ವಿಚಾರಗಳನ್ನು ನಿಮಗೆ ಬಹಿರಂಗಪಡಿಸುವ ಮತ್ತು ಹಲವು ಸಂಗತಿಗಳನ್ನು (ನಿಮಗೆ) ಕ್ಷಮಿಸಿಕೊಡುವ ನಮ್ಮ ಸಂದೇಶವಾಹಕ ನಿಮ್ಮೆಡೆಗೆ ಬಂದಿದ್ದಾರೆ. ನಿಶ್ಚಯವಾಗಿಯೂ ಅಲ್ಲಾಹನಿಂದ ಒಂದು ಪ್ರಕಾಶ ಮತ್ತು ಸ್ಪಷ್ಟವಾದೊಂದು ಗ್ರಂಥ ನಿಮಗೆ ಬಂದಿರುತ್ತದೆ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಶವಸಂಸ್ಕಾರ (ತದ್‌ಫೀನ್) ನಂತರ ಗೋರಿಯ ಹತ್ತಿರ ನಮಾಝ್ ಜನಾಝಾ ಕುರಿತು

(1247) ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ. ಒಬ್ಬರು ತೀರಿ ಹೋಗಿದ್ದರು. ರಸೂಲುಲ್ಲಾಹ್(ಸ) ರವರು ಅವನ ಇಯಾದತ್ (ರೋಗಿಯನ್ನು ಭೇಟಿಯಾಗುವಕ್ರಿಯೆ) ಹೋಗುತ್ತಿದ್ದರು. ಅವನು ರಾತ್ರಿ ವೇಳೆಯಲ್ಲಿ ತೀರಿಕೊಂಡನು. ಜನರು ರಾತ್ರಿಯೇ ಅವನ ಶವಸಂಸ್ಕಾರ ಮುಗಿಸಿಬಿಟ್ಟರು. ಮುಂಜಾನೆ ವೇಳೆಯಲ್ಲಿ ಜನರು ಹುಝೂರ್(ಸ) ರವರ ಮುಂದೆ ಈ ಸುದ್ದಿ ಹೇಳಿದರು. ಹುಝೂರ್(ಸ) ಹೇಳಿದರು. ನನಗೆ ತಿಳಿಸುವುದರಿಂದ ನಿಮ್ಮನ್ನು ಯಾರು ತಡೆದಿದ್ದರು. ಅವರು ಹೇಳಿದರು. ರಾತ್ರಿಯಾಗಿತ್ತು, ಕತ್ತಲೆಯಾಗಿತ್ತು. ಆದುದರಿಂದ ನಿಮಗೆ ತೊಂದರೆ ಕೊಡಲು ಇಷ್ಟಪಡಲಿಲ್ಲ. ಅವರು ಅವನ ಗೋರಿಯ ಹತ್ತಿರ ಬಂದು ಜನಾಝಾ ನಮಾಝ್ ನಿರ್ವಹಿಸಿದರು.

### ಸಣ್ಣ ಮಗು ತೀರಿ ಹೋದವನ ವ್ಯಕ್ತಿಯ ಮಹಾನತೆ

(1248) ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ. ನಬಿ(ಸ) ಹೇಳಿದರು. ಜನರಲ್ಲಿ ಯಾವ ಮುಸಲ್ಮಾನನ ಮೂರು ಸಣ್ಣ ಮಕ್ಕಳು (ಇನ್ನು ಅವರಿಗೆ ಪಾಪ ಯಾವುದು, ಪುಣ್ಯ ಯಾವುದು ತಿಳಿದಿರಲಿಲ್ಲ.) ಮರಣ ಹೊಂದಿದರೆ ಅವಶ್ಯವಾಗಿ ಅಲ್ಲಾಹನು ತನ್ನ ದಯೆಯಿಂದ ಅವನಿಗೆ ಸ್ವರ್ಗಕ್ಕೆ ಪ್ರವೇಶ ನೀಡುವನು.

(1249) ಹಝ್ರತ್ ಅಬೂ ಸಯೀದ್(ರ) ವರದಿ ಮಾಡುತ್ತಾರೆ. ಮಹಿಳೆಯರು ನಬಿ(ಸ) ರೊಡನೆ ಹೇಳಿದರು. ನಮಗಾಗಿಯೂ (ಉಪದೇಶಕ್ಕಾಗಿ) ಒಂದು ದಿನವನ್ನು ನಿಗದಿಗೊಳಿಸಿರಿ. ಹಾಗೆ ಪ್ರವಾದಿ(ಸ) ಉಪದೇಶ ನೀಡುತ್ತಾ ಹೇಳಿದರು. ಯಾವ ಸ್ತ್ರೀಯ ಮೂರು ಸಣ್ಣ ಮಕ್ಕಳು ಮರಣ ಹೊಂದುವರು. ಅವರು ನಿಮಗೆ ನರಕಾಗ್ನಿಯಿಂದ ರಕ್ಷಣೆ ನೀಡುವರು. ಆಗ ಮಹಿಳೆಯೊಬ್ಬಳು ಕೇಳಿದಳು. ಇಬ್ಬರು ತೀರಿ ಹೋದರೆ? ಪ್ರವಾದಿ (ಸ) ಹೇಳಿದರು. ಅವರು ಸಹ. **(ಸಹೀಹ್ ಬುಖಾರಿ, ಸಂಪುಟ–2, ಕಿತಾಬುಲ್ ಜನಾಏಝ್, ಮುದ್ರಣ ಖಾದಿಯಾನ್)**

**ನಮ್ಮ ಅಭಿಲಾಷೆಯೇನೆಂದರೆ ನಾವು ಪಡೆದಂತಹ ಮತ್ತು ಸಂದರ್ಶಿಸಿದಂತಹ ಅಲ್ಲಾಹನ ಸುಳಿವು ಜನರೂ ಪಡೆಯಬೇಕು, ಅವನು ತೋರಿಸಿದಂತಹ ಸಾನಿಧ್ಯದ ಮಾರ್ಗಗಳಿಂದ ಮನುಷ್ಯನು ಶೀಘ್ರ ಅತಿ ಶೀಘ್ರದಲ್ಲಿ ದೇವ ಮಾನವನಾಗುತ್ತಾನೆ.**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ದೈವಿಕ ಸಾನಿಧ್ಯ ಪಡೆದವರ ಸ್ಥಾನಮಾನ

ಈ ಮಾತು ನೆನಪಿಡಿರಿ. ಅಲ್ಲಾಹನು ತನ್ನ ದಾಸನನ್ನು ಅವಮಾನಿತನಾಗಿ ನಿರ್ನಾಮವಾಗುವ ಸ್ಥಿತಿಗೆ ತಲುಪಲು ಎಂದೂ ಬಿಡುವುದಿಲ್ಲ. ಬದಲು ಅವನು ಹೇಗೆ ಏಕನಾಗಿದ್ದಾನೆಯೋ ಅವನ ಹೊರತು ಯಾರೂ ಆರಾಧ್ಯನಿಲ್ಲವೋ ಅವನು ತನ್ನ ದಾಸನನ್ನು ಸಹ ಒಬ್ಬಂಟಿಯಾಗಿ, ಏಕನನ್ನಾಗಿ ಮಾಡಿಬಿಡುತ್ತಾನೆ. ಈ ಭೂಮಂಡಲದಲ್ಲಿ ಯಾರಿಗೂ ಸಹ ಅವನನ್ನು ಎದುರಿಸಲು ಸಾಧ್ಯವಾಗುವುದಿಲ್ಲ. ಎಲ್ಲ ಕಡೆಯಿಂದ ಅವನು ಆಕ್ರಮಣಗಳಿಗೆ ಒಳಗಾಗುತ್ತಾನೆ. ಆಕ್ರಮಣಗಾರರು ಅವನ ಶಕ್ತಿಯನ್ನು ಅಂದಾಜಿಸದೇ ಅವನನ್ನು ನಾಶಗೊಳಿಸಬಹುದು ಎಂದು ಭಾವಿಸುತ್ತಾರೆ. ಆದರೆ ಅಂತಿಮವಾಗಿ ಅವನು ತಿಳಿಯುತ್ತಾನೆ. ಅವನು ರಕ್ಷಿಸಲ್ಪಟ್ಟಿದ್ದು ಮಾನವ ಶಕ್ತಿಯಿಂದ ವಿಹಿತವಾದದ್ದಾಗಿದೆ. ಏಕೆಂದರೆ ಅವನಿಗೆ ಮೊದಲೇ ತಿಳಿದಿದ್ದರೆ ಅವನು ಆಕ್ರಮಣವೇ ಮಾಡುತ್ತಿರಲಿಲ್ಲ. ಅಂದ ಹಾಗೆ ಅಲ್ಲಾಹನ ಸಾನಿಧ್ಯ ಪಡೆದವರು ಈ ಲೋಕದಲ್ಲಿ ಅಲ್ಲಾಹನ ಅಸ್ತಿತ್ವ ತೋರ್ಪಡಿಸಲು ಒಂದು ನಿದರ್ಶನವಾಗಿರುತ್ತಾರೆ. ನೋಡಲು ಮಾತ್ರ ಪ್ರತಿಯೊಬ್ಬನು ಇವನು ನಮ್ಮಿಂದ ರಕ್ಷಿಸಲ್ಪಡಲು ಸಾಧ್ಯವಿಲ್ಲ ಎಂದು ಭಾವಿಸುತ್ತಾನೆ. ಏಕೆಂದರೆ ಎಲ್ಲ ಈ ರೀತಿಯ ತಂತ್ರಗಳು ಮತ್ತು ಪ್ರಯತ್ನಗಳು ಅದೇ ಪರಿಣಾಮ ನಿರೀಕ್ಷಿಸುತ್ತದೆ. ಆದರೆ ಇವುಗಳೆಲ್ಲದರಿಂದ ಅವನು ಮಾನ ಮರ್ಯಾದೆಯಿಂದ ಸುರಕ್ಷಿತವಾಗಿ ಹೊರ ಬಂದಾಗ ಅಚ್ಚರಿಪಡುವಂತೆ ಅವನಿಗೆ ಅರಿವಾಗುತ್ತದೆ ಇದು ಮಾನವ ಶಕ್ತಿಯಿಂದ ಹೊರತದುದು, ಇಲ್ಲದಿದ್ದಲ್ಲಿ ಅವನ ಉಳಿವು ಸಾಧ್ಯವಿರಲಿಲ್ಲ, ಆದರೆ ಇದೀಗ ಅವನು ಸುರಕ್ಷಿತವಾಗಿ ಉಳಿದದ್ದು, ಮನುಷ್ಯನ ಕೆಲಸದಿಂದಲ್ಲ. ಬದಲು ಅಲ್ಲಾಹನ ಕೆಲಸವಾಗಿದೆ. ಅಂದ ಹಾಗೆ ಅದರಿಂದ ತಿಳಿದು ಬರುವುದೇನೆಂದರೆ ಅಲ್ಲಾಹನ ಪ್ರಿಯರ ಮೇಲೆ ಏನು ಆಕ್ರಮಣಗಳಾಗುತ್ತವೆಯೋ ಅದು ಏಕೆ ಆಗುತ್ತದೆ? ಆಧ್ಯಾತ್ಮಿಕ ಜ್ಞಾನದಿಂದ ವಂಚಿತರಾದ ಜನರು ಇಂತಹ ವಿರೋಧವನ್ನು ಅವರ ಅವಮಾನ ಎಂದು ತಿಳಿಯುತ್ತಾರೆ. ಆದರೆ ಅಲ್ಲಾಹನು ಅವರನ್ನು ಈ ಅವಮಾನಗಳಿಂದ ರಕ್ಷಿಸಿ ಒಂದು ಗೌರವ ಮತ್ತು ಪವಾಡ ಪುರುಷರನ್ನಾಗಿ ಹೊರ ತರುತ್ತಾನೆ. ಅವರು ಅಲ್ಲಾಹನ ಅಸ್ತಿತ್ವದ ಮೇಲೆ ಒಂದು ದೃಷ್ಟಾಂತವಾಗಿರುತ್ತಾರೆ. ಅದುದರಿಂದ ಅವರು "ಆಯಾತುಲ್ಲಾಹ್" (ದೈವಿಕ ಪುರುಷರು) ಎಂದು ಕರೆಯಲ್ಪಡುತ್ತಾರೆ.

ಅಂತೂ ನಾವು ಜಾಹೀರಾತುಗಳನ್ನು ನೀಡುತ್ತಾ ಜನರನ್ನು ಆಹ್ವಾನಿಸುವ ಉದ್ದೇಶ ಮತ್ತು ನಮ್ಮ ಅಭಿಲಾಷೆವೇನೆಂದರೆ ನಾವು ಪಡೆದಂತಹ ಮತ್ತು ಸಂದರ್ಶಿಸಿದಂತಹ ಅಲ್ಲಾಹನ ಸುಳಿವು ಜನರೂ ಪಡೆಯಬೇಕು, ಅವನು ತೋರಿದಂತಹ ಸಾನಿಧ್ಯದ ಮಾರ್ಗಗಳಿಂದ ಮನುಷ್ಯನು ಶೀಘ್ರ ಅತಿ ಶೀಘ್ರದಲ್ಲಿ ದೇವಮಾನವನಾಗುತ್ತಾನೆ.

*(ಪುಟ 08 ರಲ್ಲಿ ಮುಂದುವರಿಸಲಾಗಿದೆ)*

**ಯಾವ ರೀತಿ ರಾಜರುಗಳಿಗೆ ರಕ್ಷಕ ದಳಗಳಿರುತ್ತವೆಯೋ ಅದೇ ರೀತಿ ಹಝ್ರತ್ ರಸೂಲುಲ್ಲಾಹ್(ಸ) ರವರ ಹಿಂದೆ ಮುಂದೆ "ಮುಅಖ್ಖಿಬಾತ್" (ರಕ್ಷಕರು) ಇರುತ್ತವೆ. ಸಹಾಬರು ಸಹ ನನ್ನ ದೃಷ್ಟಿಯಲ್ಲಿ ಆ "ಮುಅಖಿಬಾತ್" ರಕ್ಷಕರಾಗಿದ್ದರೂ ಅವರನ್ನು ಅಲ್ಲಾಹನು ಹಝ್ರತ್ ರಸೂಲುಲ್ಲಾಹ್(ಸ) ರವರ ರಕ್ಷಣೆಗೋಸ್ಕರ ನಿಯೋಜಿಸಿದರು.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರ: ರಅದ್ ವಚನ 12 **ಲಹೂ ಮುಅಖ್ಖಿಬಾತುಮ್ಮಿಮ್ ಬೈನಿ ಯದೈಹಿ ವ ಮಿನ್ ಖಲ್‌ಫಿಹೀ ಯಹ್ ಫಝೂನಹೂ ಮಿನ್ ಅಮರಿಲ್ಲಾಹಿ** ವ್ಯಾಖ್ಯಾನದಲ್ಲಿ ನುಡಿಯುತ್ತಾರೆ: **ಲಹೂ ಮುಅಖ್ಖಿಬಾತುಮ್ಮಿಮ್ ಬೈನಿ ಯದೈಹಿ ವ ಮಿನ್ ಖಲ್‌ಫಿಹೀ. ಐ ಮಲಾಇಕತುನ್ ಯತಾಖಬೂನ ಅಲೈಹಿ ಹಾಫಿಝೀನ್** ನಲ್ಲಿ ರಕ್ಷಣೆಗೋಸ್ಕರ ಒಂದರ ಹಿಂದೆ ಇನ್ನೊಂದು ಬರುವ ಆ ಮಲಕ್‌ಗಳ (ದೇವದೂತರ) ಒಂದು ಜಮಾಅತ್ ಆಗಿದೆ.

ಅವರು ಹೇಳುತ್ತಾರೆ: **ಲಹೂ** ಪದವು ನನ್ನ ದೃಷ್ಟಿಯಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರವರ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرَّ السُّمُوْمِ عَدَاوَۃُ الصُّلَحَاءِ

## ಮುಹಮ್ಮದ್ ಹುಸೇನ್ ಬಾಟೌಲ್ವಿ ಅವರಿಗೆ "ಸಿರ್‍ರುಲ್ ಖಿಲಾಫ್," ಎದುರಾಗಿ ಗ್ರಂಥ ಬರೆಯಲು 27 ರೂಪಾಯಿಗಳ ಬಹುಮಾನ.

ಹಿಂದಿನ ಸಂಚಿಕೆಯಲ್ಲಿ ನಾವು ಮುಹಮ್ಮದ್ ಹುಸೇನ್ ಬಾಟೌಲ್ವಿ ಸಯ್ಯಿದ್‌ನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಅರಬಿ ಭಾಷೆಯ ಜ್ಞಾನ ಹೊಂದಿರುವುದಿಲ್ಲ ಎಂಬ ಕುರಿತು ಜನರಲ್ಲಿ ಬೇರೂರಿಸಿದ್ದರು ಎಂಬುದನ್ನು ವಿವರಿಸಿದೆವು. ಅದಕ್ಕೆ ಉತ್ತರವಾಗಿ ಹಝ್‌ರತ್ ಮಸೀಹ್ ಮೌಊದ್(ಅ) ಮುಹಮ್ಮದ್ ಹುಸೇನ್ ಬಟೌಲ್ವಿ ಅವರು ಹಲವು ಸಲ ಸಭೆಯಲ್ಲಿ ಭಾಗವಹಿಸಿ ಲಿಖಿತ ಅರಬಿ ಸಾಹಿತ್ಯವನ್ನು ತೋರಿಸಲು ಆಹ್ವಾನಿಸಿದ್ದರು. ಮೊದಲು ಪವಿತ್ರ ಖುರ್‌ಆನ್‌ನ ವ್ಯಾಖ್ಯಾನ (ತಫ್ಸೀರ್) ಬರೆಯಲು ಕರೆ ನೀಡಿದರು. ಅನಂತರ ಅವರು ತಮ್ಮ ಗ್ರಂಥ "ಕರಾಮತುಸ್ಸಾದಿಖೀನ್" ಎದುರಾಗಿ ಗ್ರಂಥ ಬರೆಯಲು ಕರೆ ನೀಡಿದರು. ಇದರಂತೆ ಗ್ರಂಥ ರಚಿಸಿ ತೋರಿಸಿದರೆ ಒಂದು ಸಾವಿರ ರೂಪಾಯಿ ಬಹುಮಾನ ನಿಗದಿಪಡಿಸಿದ್ದರು. ಅನಂತರ ಅವರು ನೂರುಲ್ ಹಖ್ ಅರೆಬಿ ಸಾಹಿತ್ಯ ಬರೆದರು. ಅದರಂತೆ ಗ್ರಂಥ ಬರೆದು ತೋರಿಸಿದರೆ ಐದು ಸಾವಿರ ರೂಪಾಯಿ ಬಹುಮಾನದ ವಾಗ್ದಾನ ನೀಡಿದರು. ಆದರೆ ಯಾವ ಕರೆಗೂ ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಒಗ್ಗೂಡಲಿಲ್ಲ. ಅದಕ್ಕೆ ಕಾರಣ ಸ್ವಯಂ ಮುಹಮ್ಮದ್ ಹುಸೇನ್ ಅವರಿಗೆ ಅರಬಿ ಬರುತ್ತಿರಲಿಲ್ಲ. ಅವರು ಅರಬಿಯಲ್ಲಿ ಎಂದೂ ಒಂದು ಪ್ರಬಂಧವಾಗಲಿ, ಕವನವಾಗಲಿ ಬರೆದದ್ದು ಇಲ್ಲ. ಅನಂತರ ಸಯ್ಯಿದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) "ಸಿರ್‍ರುಲ್ ಖಿಲಾಫ" ಗ್ರಂಥ ಅರಬಿಯಲ್ಲಿ ಬರೆದರು. ಅದರ ಎದುರಾಗಿ ಬರೆಯಲು ಮುಹಮ್ಮದ್ ಹುಸೇನರಿಗೆ ಕರೆ ನೀಡಿದರು.

**ಸಿರ್‍ರುಲ್ ಖಿಲಾಫ್ ಸ್ಪರ್ಧೆಗೋಸ್ಕರ ಆಹ್ವಾನ ಮತ್ತು 27 ರೂಪಾಯಿ ಬಹುಮಾನ ಒಬ್ಬ ಅರಬಿ ಬಲ್ಲವನು ಏಳು ದಿನಗಳಲ್ಲಿ ಇಂತಹ ಗ್ರಂಥ ಸುಲಭವಾಗಿ ಬರೆಯಬಹುದಾಗಿದೆ.**

ಸಯ್ಯಿದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳಿದರು.

ಇದೀಗ ಕರಾಮತುಸ್ಸಾದಿಖೀನ್ ಮತ್ತು ನೂರುಲ್ ಹಖ್ ಎರಡು ಗ್ರಂಥಗಳ ನಂತರ ಸಿರ್‍ರುಲ್ ಖಿಲಾಫ್ ಗ್ರಂಥ ಬರೆದಿರುತ್ತೇನೆ, ಅದು ತುಂಬ ಸಂಕ್ಷಿಪ್ತವಾಗಿದೆ. ಕವನವು ಸಣ್ಣದಾಗಿದೆ, ಒಬ್ಬ ಅರಬಿ ಬಲ್ಲ ವ್ಯಕ್ತಿಗೆ ಇಂತಹ ಗ್ರಂಥವು ಏಳು ದಿನಗಳಲ್ಲಿ ತುಂಬ ಸುಲಭವಾಗಿ ಬರೆಯಬಹುದಾಗಿದೆ ಮತ್ತು ಮುದ್ರಣಕ್ಕಾಗಿ ಹತ್ತು ದಿನಗಳು ಸಾಕಾಗುತ್ತವೆ. ಆದರೆ ನಾವು ಶೇಖ್ ಸಾಹಿಬರ ಸ್ಥಿತಿ ಮತ್ತು ಅವರ ಸಂಗಡಿಗರ ಅಸಹಾಯಕತೆ ನೋಡಿ ಅವರ ಮೇಲೆ ಕರುಣೆ ತೋರುತ್ತ ಇನ್ನು ಹತ್ತು ದಿನ ಹೆಚ್ಚಿನ ಅವಕಾಶ ಕೊಡುತ್ತೇವೆ. ಹೀಗೆ ಒಟ್ಟು 27 ದಿನಗಳಾಗುತ್ತವೆ. ಅಂದ ಹಾಗೆ ನಾವು ದಿನ ಒಂದಕ್ಕೆ ಒಂದು ರೂಪಾಯಿಯಂತೆ 27 ರೂಪಾಯಿಗಳ ಬಹುಮಾನದೊಂದಿಗೆ ಈ ಗ್ರಂಥ ಮುದ್ರಿಸುತ್ತೇವೆ. ಶೇಖ್ ಸಾಹಿಬ್ ಮತ್ತು ಅವರ ಸಂಗಡಿಗ ಮೌಲ್ವಿಯವರೊಂದಿಗೆ ವಿನಂತಿಸಿಕೊಳ್ಳುತ್ತೇನೆ. ಆದರೂ ದೌರ್ಭಾಗ್ಯದಿಂದ ಒಂದು ಸಾವಿರ ರೂಪಾಯಿ ಬಹುಮಾನ ಪಡೆಯಲಾಗಲಿಲ್ಲ. ಮತ್ತೆ ಐದು ಸಾವಿರ ರೂಪಾಯಿಗಳ ಬಹುಮಾನ ಪ್ರಸ್ತುತಪಡಿಸಲಾಯಿತು. ಆ ಸಮಯವು ಅವರ ಅಸಮರ್ಥತೆಯಿಂದ ಅವರ ಕೈಯಿಂದ ಜಾರಿ ಹೋಯಿತು. ಮತ್ತು ನಿಗದಿತ ದಿನಾಂಕ ಮುಗಿದು ಹೋಯಿತು. ಇದೀಗ ಅವರು 27 ರೂಪಾಯಿಯಾದರು, ಬಿಡದಿರಲಿ, ಇತ್ತೀಚೆಗೆ ಅವರು ತುಂಬ ಕಷ್ಟಕಾಲದಲ್ಲಿ ಇದ್ದಾರೆ ಎಂದು ನಾವು ಕೇಳಿದ್ದೆವು. ಯಾವ ಮಿತ್ರರು ಸಹ ಈ ಕಷ್ಟಕಾಲದಲ್ಲಿ ಸಹಾಯಕ್ಕೆ ಬರಲಿಲ್ಲ ಎಂದು ಸಹ ಕೇಳಿದ್ದೇವೆ. ಹೀಗಾಗಿ ಇಂತಹ ದಿನಗಳಲ್ಲಿ ಅವರಿಗೆ ಒಂದು ರೂಪಾಯಿ ಒಂದು ಚಿನ್ನದ ನಾಣ್ಯದ ಸಮಾನವಾಗಿದೆ. ಅಂದರೆ ಈ 27 ರೂಪಾಯಿ 27 ಚಿನ್ನದ ನಾಣ್ಯವಿದ್ದಂತೆ ಅದರಿಂದ ಬೇಕಾದಷ್ಟು ಸಾಧಿಸಬಹುದು. ನಾವು ಸತ್ಯ ಮನಸ್ಸಿನಿಂದ ವಾಗ್ದಾನ ನೀಡುತ್ತೇವೆ. ನೀವು ಸಿರ್‍ರುಲ್ ಖಿಲಾಫ್ ಗ್ರಂಥ ಎದುರಾಗಿ ಶೇಖ್ ಸಾಹಿಬ್ ಬರೆದು ನಿಗದಿತ ಅವಧಿಯ ಒಳಗೆ ಮುದ್ರಿಸಿಬಿಟ್ಟರೆ, ಆ ಗ್ರಂಥ ನಮ್ಮ ಮಟ್ಟಕ್ಕೆ ಸರಿ ಹೊಂದಿದರೆ ಕೇವಲ ನಿಮಗೆ 27 ರೂಪಾಯಿ ಕೊಡುವುದು ಮಾತ್ರವಲ್ಲ ಲಿಖಿತ ಪ್ರಮಾಣ ಪತ್ರವನ್ನೂ ನೀಡುತ್ತೇವೆ. ಶೇಖ್ ಸಾಹಿಬ್ ಅರಬಿ ಬಲ್ಲವರಾಗಿದ್ದಾರೆ. ಮೌಲ್ವಿ ಅಂದುಕೊಳ್ಳಲು ಅರ್ಹರು ಎಂದು. ಇನ್ನು ಮುಂದೆ ಮೌಲ್ವಿ ಹೆಸರಿನಿಂದಲೇ ನಿಮ್ಮನ್ನು ಕರೆಯಲಾಗುವುದು. ಅಂದ ಹಾಗೆ ಈ ಸಲ ಶೇಖ್ ಸಾಹಿಬ್ ಧೈರ್ಯ ಬಿಡಬಾರದು. ಈ ಗ್ರಂಥವು ತುಂಬ ಚಿಕ್ಕದಾಗಿದೆ. ಹೆಚ್ಚೇನಿಲ್ಲ. ದಿನಕ್ಕೆ ಒಂದೊಂದು ಪುಟ ಗೀಚಿದರೂ ನಾಲ್ಕೈದು ದಿನಗಳಲ್ಲಿ ಅದನ್ನು ಮುಗಿಸಬಹುದಾಗಿದೆ.

(ಸಿರ್‍ರುಲ್ ಖಿಲಾಫ, ರೂಹಾನಿ ಖಝಾಯಿನ್ ಸಂಪುಟ–8, ಪುಟ–400)

**ಗ್ರಂಥದ ರಚನೆಯಲ್ಲಿ ನಿಸ್ಸಂಶಯವಾಗಿ ಅವರು ಇಡೀ ಲೋಕದ ಜನರ ಸಹಾಯ ಬೇಕಾದರೆ ಪಡೆಯಲಿ.**

**ಮುಹಮ್ಮದ್ ಹುಸೇನ್ ಒಂದು ಸತ್ತ ಆತ್ಮದಂತಿದ್ದಾರೆ. ಅವರಲ್ಲಿ ಎದುರಿಸುವಂತಹ ಯಾವ ಶಕ್ತಿಯೂ ಇಲ್ಲ.**

ಸಯ್ಯಿದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಮೌಲ್ವಿ ಮುಹಮ್ಮದ್ ಹುಸೇನ್ ಅವರನ್ನು ಸಂಬೋಧಿಸಿ ಹೇಳುತ್ತಾರೆ. ಸ್ವಯಂ ನಿಮ್ಮಲ್ಲಿ ಯಾವುದೇ ಜೀವವಿಲ್ಲದಿದ್ದರೆ, ಆ ನಿಮ್ಮ ನೂರು, ನೂರಾ ಐವತಕ್ಕಿಂತ ಹೆಚ್ಚಿನ ಮೌಲ್ವಿಗಳ ಸಹಾಯ ಪಡೆಯಿರಿ. ಅವರು ಯಾವ ಯೋಚನೆಯಿಲ್ಲದೆ ಮುಸಲ್ಮಾನರಿಗೆ ಕಾಫಿರ್ ಮತ್ತು ನರಕವಾಸಿಗಳು ಎನ್ನುತ್ತಾರೆ ಮತ್ತು ಅಹಂಕಾರದಿಂದ ತನ್ನನ್ನು ತಾನು ಮೌಲ್ವಿಗಳು ಅಂದುಕೊಳ್ಳುತ್ತಾರೆ. ಅವರು ಒಂದೊಂದು ಪುಟ ಬರೆದುಕೊಟ್ಟರೆ, ಶೇಖ್ ಸಾಹಿಬ್ ಈ ಗ್ರಂಥ ಎದುರಾಗಿ ನೂರು, ನೂರಾ ಐವತ್ತು ಪುಟಗಳು ಬರೆದು ಮುದ್ರಿಸಬಹುದು. ಆದರೂ ಶೇಖ್ ಸಾಹಿಬ್ ಮಾಡಿ ತೋರಿಸಲಿಲ್ಲ ಎಂದಾದರೆ ಅದು ಮುಂದೆ ಮೌಲ್ವಿ ಅಂದುಕೊಳ್ಳಲು ತುಂಬ ನಾಚಿಕೆಯ ವಿಷಯವಾಗುವುದು. ಹಾಗಾದರೆ ಇನ್ನು ಮುಂದಾದರೂ ಸುಳ್ಳು ಹೇಳುವುದರಿಂದ ಮತ್ತು ಸುಳ್ಳುಗಾರರಿಂದ ದೂರವಿರಬೇಕು. ನಿಮಗೆ ಶೇಖ್ ಎಂಬ ಹೆಸರೇ ಸಾಕು. ಅದು ನಿಮ್ಮ ತಂದೆ ತಾತರಿಂದ ಬಂದ ಹೆಸರಾಗಿದೆ. ಅಥವಾ ಮುನ್ಷಿ ಎಂದರೂ ಆದೀತು. ಆದರೆ ನೀವು ಮುನ್ಷಿ ಎನ್ನಲು ಸಹ ಅರ್ಹರೋ ಇಲ್ಲವೋ ಎಂಬುದಕ್ಕೆ ಇನ್ನು ಪರೀಕ್ಷೆ ಬಾಕಿಯಿದೆ. ಮುನ್ಷಿ ಎನ್ನಲು ಪರ್ಶಿಯನ್ ಭಾಷೆಯಲ್ಲಿ ಪಾಂಡಿತ್ಯ ಪಡೆದಿರಬೇಕಾಗುತ್ತದೆ. ಆದರೆ ನನ್ನ ದೃಷ್ಟಿಯಲ್ಲಿ ಇಲ್ಲಿಯವರೆಗೆ ಯಾವ ಪರ್ಶಿಯನ್ ಗ್ರಂಥವು ನಿಮ್ಮಿಂದ ಕಾಣಲಿಲ್ಲ. ಏನೇ ಆಗಲಿ ನಿಮ್ಮ ಮೇಲೆ ರಿಯಾಯಿತಿ ತೋರುತ್ತ, ಕಣ್ಣು ಮುಚ್ಚಿಕೊಂಡು ನಿಮಗೆ ಮುನ್ಷಿ ಎಂದು ಮಾನ್ಯ ಮಾಡಿಕೊಂಡರು, ನೀವು ಮುನ್ಷಿ ಎಂದೇ ಭಾವಿಸಿದರೂ, ನಿಮ್ಮಲ್ಲಿ ಮುನ್ಷಿಯ ಅರ್ಹತೆಗಳೇನು ಇಲ್ಲ. ಆ ಮಾತು ಬೇರೆ, ಆದರೂ ಅದೆಲ್ಲ ನಮಗೆ ಬೇಡ, ಏಕೆಂದರೆ ಮುನ್ಷಿ ಪದವಿಗೂ ಮತ್ತು ಧರ್ಮಕ್ಕೂ ಯಾವ ಸಂಬಂಧ ಇಲ್ಲ. ಆದರೆ ಯಾವ ಕಾರಣಕ್ಕೂ ಇಂತಹ ಮೂಢರನ್ನು ಮೌಲ್ವಿ ಎಂಬ ಬಿರುದು ನೀಡಲು ಸಾಧ್ಯವಿಲ್ಲ. ನಿಮಗೆ ನಾವು ಐದು ಸಾವಿರ ರೂಪಾಯಿ ಬಹುಮಾನ ಕೊಡುತ್ತೇವೆ ಎಂದರೂ, ನಿಮ್ಮ ಸತ್ತ ಆತ್ಮದಲ್ಲಿ ಏನೂ ಶಕ್ತಿ ಕಾಣುತ್ತಿಲ್ಲ. ಸಾವಿರ ಶಾಪ ಹಾಕಿದರೂ ಸ್ವಾಭಿಮಾನ ತೋರಿಸುವುದಿಲ್ಲ. ಇಡೀ ಲೋಕದ ಜನರನ್ನು ತಮ್ಮ ಸಹಾಯಕ್ಕಾಗಿ ಕರೆಯಿಸಿಕೊಳ್ಳಿ ಎಂದು ಅನುಮತಿ ನೀಡಿದರೂ, ಬಾಯಿ ಮಾತುಗಳು ಹೌದು ಎನ್ನುವುದಿಲ್ಲ ಎಂದಾದರೆ ಇಂತಹವರನ್ನು ಮೌಲ್ವಿ ಎಂಬ ಬಿರುದುಕೊಟ್ಟರೆ ಇವರು ಮುಸಲ್ಮಾನರಿಗೆ ಕಾಫಿರ್ ಮಾಡುವ ಹೊರತು ಏನೂ ಮಾಡಿಯಾರು. ಏನು ಮಾಡಲಿಕ್ಕೆ ಸಾಧ್ಯವಿಲ್ಲ. ನಾಲ್ಕು ಹದೀಸುಗಳನ್ನು ಪಠಿಸಿ ಶೈಖುಲ್ಕುಲ್ ಅಂದುಕೊಳ್ಳುತ್ತಾರೆ. **ನವೂಝುಬಿಲ್ಲಾಹಿ ಮಿನ್ ಫಿತನಿ ಃಆಝುದ್ದಹ್‌ರಿ ವ ಅಹ್‌ಲಿಹಾ ವನಊಝುಬಿಲ್ಲಾಹಿ ಮಿನ್ ಜುಹಲಾತಿಲ್ ಜಾಹಿಲೀನ್** (ಅದೇ ಪುಟ 401)

ಸಯ್ಯಿದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಮೌಲ್ವಿ ಮುಹಮ್ಮದ್ ಹುಸೇನರನ್ನು ಉದ್ದೇಶಿಸಿ ಹೇಳಿದರು. "ನಿಮಗೆ ಅಲ್ಲಾಹನ ಆಣೆಯಿದೆ. ನಿಮಗೆ ಕಿಂಚಿತ್ತೂ ಅರಬಿ ಭಾಷೆಯ ಜ್ಞಾನವಿದ್ದರೆ, ಸ್ವಲ್ಪವಾದರೂ ಜ್ಞಾನವಿದ್ದರೆ ಈ ಸಂದರ್ಭದಲ್ಲಿ ಮುಖ ತಿರುಗಿಸಬಾರದು. 25 ಜುಲೈ 1894 ರವರೆಗೆ ಕಾಲವಧಿ ನೀಡಲಾಗಿದೆ. ಒಂದು ವೇಳೆ ನೀವು 25 ಜೂನ್ 1894 ರ ವರೆಗೆ ಈ ಅರ್ಜಿ ಮುದ್ರಿಸಿ ಜಾಹೀರಾತು ಮೂಲಕ ಪ್ರಕಟ ಪಡಿಸಲಿಲ್ಲವಾದರೆ ನೀವು ಪಲಾಯನ ಮಾಡಿದ್ದೀರಿ ಎಂದು ಭಾವಿಸಲಾಗುವುದು. (ಸಿರ್‍ರುಲ್ ಖಿಲಾಫ್. ರೂಹಾನಿ ಖಝಾಯಿನ್ ಸಂಪುಟ 8, ಪುಟ 418).

**ಶೇಖ್ ಸಾಹಿಬರಿಗೆ ಎದುರಿಸಲು ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ.**

ಸಯ್ಯಿದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ನಾನು ಹಲವು ಸಲ ಹೇಳಿರುತ್ತೇನೆ. ಈ ಪತ್ರಿಕೆಗಳೆಲ್ಲ ದೈವಿಕ ಸಹಾಯದಿಂದ ಬರೆದಿರುತ್ತೇನೆ. ನಾನು ಅದರ ಹೆಸರು ವಹೀ ಅಥವಾ ದೇವವಾಣಿ ಎಂದು ಹೆಸರಿಸುವುದಿಲ್ಲ. ಆದರೆ ಅವಶ್ಯವಾಗಿ ಹೇಳುವೆನು. ಅಲ್ಲಾಹನ ವಿಶೇಷವಾದ ಮತ್ತು ಪವಾಡದಿಂದ ಅದೃಶ್ಯ ರೀತಿಯಲ್ಲಿ ಈ ಪತ್ರಿಕೆಗಳು ನನ್ನಿಂದ ಬರೆಯಲ್ಪಟ್ಟಿವೆ. ನಾನು ಎಷ್ಟೋ ಸಲ ಜಾಹೀರಾತುಗಳಲ್ಲಿ ಸ್ಪಷ್ಟಪಡಿಸಿದ್ದೇನೆ. ಶೇಖ್ ಸಾಹಿಬರಿಗೆ ನನ್ನ ಬಗ್ಗೆ ಗುಮಾನಿ ಇದೆ ಮತ್ತು

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಪ್ರವಾದಿ ಮುಹಮ್ಮದ್(ಸ) ಹೇಳಿದರು: ನಿಸ್ಸಂಶಯವಾಗಿಯೂ ಅಲ್ಲಾಹನು ಸತ್ಯವನ್ನು ಉಮರರ ನಾಲಗೆ ಮತ್ತು ಹೃದಯದಲ್ಲಿ ಸ್ಥಿರಗೊಳಿಸಿದ್ದಾನೆ. ಅವರು ಫಾರೂಖ್ ಆಗಿರುವರು. ಏಕೆಂದರೆ ಅಲ್ಲಾಹನು ಅವರ ಮೂಲಕ ಸತ್ಯ ಮತ್ತು ಮಿಥ್ಯದ ನಡುವೆ ವ್ಯತ್ಯಾಸವನ್ನು ಉಂಟುಮಾಡಿದ್ದಾನೆ.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಮತ್ತು ಎರಡನೇ ಖಲೀಫ ರಾಶಿದ ಹಝ್ರ್‌ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರ್‌ರತ್ ಆಯಿಶ(ರ) ಹೇಳುತ್ತಾರೆ, ಹಝ್ರ್‌ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದ್ದರು: ಅಲ್ಲಾಹುಮ್ಮ ಅಇಝ್ಝಿಲ್ ಇಸ್ಲಾಮ ಬಿಉಮರಿಬ್ನುಲ್ ಖತ್ತಾಬ್ ಖಾಸ್. ಎಂದರೆ, ವಿಶೇಷವಾಗಿ ಉಮರ್ ಬಿನ್ ಖತ್ತಾಬ್ ಮೂಲಕ ಇಸ್ಲಾಮಿಗೆ ಗೌರವವನ್ನು ನೀಡು.**

**ಹಝ್ರ್‌ರತ್ ಉಮರ್(ರ)ರವರಿಗೆ ಕುದುರೆ ಸವಾರಿ ಮತ್ತು ಕುಸ್ತಿ ಬಹಳ ಪ್ರಿಯವಾಗಿದ್ದುವು.**

**ಆರು ದಿವಂಗತರಾದ ಅಹ್ಮದ್ ಮುಹಮ್ಮದ್ ಉಸ್ಮಾನ್ ಶಬೂತಿ ಸಾಹಿಬ್, ಸನ್ಮಾನ್ಯ ಖುರೈಶಿ ಝುಕಾಉಲ್ಲಾಹ್ ಸಾಹಿಬ್, ಸನ್ಮಾನ್ಯ ಮಲಿಕ್ ಖ಼ಾಲಿಕ್ ದಾದ್ ಸಾಹಿಬ್, ಮುಹಮ್ಮದ್ ಸಲೀಂ ಸಾಹಿಬ್, ಸಾಹಿಬ್‌ಝಾ಼ದ ಮಹ್‌ದಿ ಲತೀಫ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ನಈಮ ಲತೀಫ್ ಸಾಹಿಬ ಮತ್ತು ಮುಹಮ್ಮದ್ ಶರೀಫ್ ಸಾಹಿಬ್‌ರ ಪತ್ನಿಯಾದ ಸಫಿಯ ಬೇಗಂ ಸಾಹಿಬರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

**ಹಝ್ರ್‌ರತ್ ಉಮರ್(ರ) ಇಸ್ಲಾಂ ಧರ್ಮವನ್ನು ಅಂಗೀಕರಿಸಲು ಕಾರಣವೇನೆಂಬುದರ ಕುರಿತು ಹಲವಾರು ಘಟನೆಗಳು ಮತ್ತು ವರದಿಗಳು ಹದೀಸ್ ಮತ್ತು ಚರಿತ್ರೆಯ ಗ್ರಂಥಗಳ ಪ್ರಸ್ತಾವನೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **23–04–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

إِيَّاكَ نَعْبُدُ وَإِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ ۔

ಇಂದು ನಾನು ಹಝ್ರ್‌ರತ್ ಉಮರ್ ಬಿನ್ ಖತ್ತಾಬ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಪ್ರಸ್ತಾಪಿಸುವೆನು. ಅವರು ಬನೂ ಅದ್ದೀ ಬಿನ್ ಕಅ್‌ಬ್ ಬಿನ್ ಲುಅ ಗೋತ್ರದವರಾಗಿದ್ದರು. ಅವರ ತಂದೆಯ ಹೆಸರು ಖ಼ತ್ತಾಬ್ ಬಿನ್ ನಫೀಲ್ ಎಂದಾಗಿತ್ತು ಮತ್ತು ಒಂದು ವರದಿಯ ಪ್ರಕಾರ ಅವರ ತಾಯಿಯ ಹೆಸರು ಹಂತಮ ಬಿನ್ತ್ ಹಾಶಿಂ ಎಂದಾಗಿತ್ತು. ಅದೇ ರೀತಿಯಲ್ಲಿ ಅವರ ತಾಯಿ ಅಬೂಜಹಲಿನ ಚಿಕ್ಕಪ್ಪನ ಮಗಳಾಗಿದ್ದರು. ಇನ್ನೊಂದು ಹೇಳಿಕೆ ಪ್ರಕಾರ ಅವರ ತಾಯಿಯ ಹೆಸರು ಹಂತಮ ಬಿನ್ತ್ ಹಿಶಾಂ ಎಂದಾಗಿತ್ತು. ಈ ರೀತಿಂಯಲ್ಲಿ ಅವರು ಅಬೂಜಹಲಿನ ಸಹೋದರಿಂಯಾಗುತ್ತಾರೆ. ಸಹೋದರಿಯಾಗಿದ್ದರು ಎಂಬ ವರದಿಯನ್ನು ಹೆಚ್ಚಾಗಿ ಸಮ್ಮತಿಸಲಾಗುವುದಿಲ್ಲ. ಹಝ್ರ್‌ರತ್ ಉಮರರ ತಾಯಿ ಅಬೂಜಹಲಿನ ಸಹೋದರಿಯಾಗಿದ್ದಳು ಎಂದು ಹೇಳುವವರು ತಪ್ಪಾಗಿ ಹೇಳುತ್ತಿದ್ದಾರೆ ಎಂದು ಅಬೂ ಉಮರ್ ಹೇಳುತ್ತಾರೆ. ಹೀಗೆ ಆಗಿದ್ದರೆ ಅವರು ಹಾರಿಸ್‌ನ ಸಹೋದರಿಯಾಗಿರಬೇಕಾಗುತ್ತದೆ. ಆದರೆ ಸತ್ಯ ಇದಲ್ಲ. ಅವರು ಅಬೂಜಹಲ್ ಮತ್ತು ಹಾರಿಸ್‌ರ ಚಿಕ್ಕಪ್ಪರ ಮಗಳಾಗಿದ್ದರು. ಅವರ ತಂದೆಯ ಹೆಸರು ಹಾಶಿಂ ಎಂದಾಗಿತ್ತು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–4, ಪುಟ–484, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005) (ಅಸದುಲ್‌ಗಾಬ ಸಂಪುಟ–4, ಪುಟ–138, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಹಝ್ರ್‌ರತ್ ಉಮರರ(ರ) ಜನನನ ತಾರೀಕಿನ ಬಗ್ಗೆ ವಿವಿಧ ವರದಿಗಳು ಬಂದಿವೆ. ಅದರ ಪ್ರಕಾರ ಹಝ್ರ್‌ರತ್ ಉಮರರ(ರ) ಜನನದ ವರ್ಷ ಬೇರೆ ಬೇರೆ ಆಗುತ್ತದೆ. ಉದಾಹರಣೆಗೆ, ಒಂದು ಅಭಿಪ್ರಾಯ ಪ್ರಕಾರ ಹಝ್ರ್‌ರತ್ ಉಮರ್(ರ) ದೊಡ್ಡ ಫುಜ್ಜಾರ್ ಯುದ್ಧಕ್ಕೆ ನಾಲ್ಕು ವರ್ಷಗಳಿಗೆ ಮುಂಚೆ ಅಥವಾ ಬೇರೊಂದು ಅಭಿಪ್ರಾಯ ಪ್ರಕಾರ ಆ ಯುದ್ಧದ ನಾಲ್ಕು ವರ್ಷಗಳ ನಂತರ ಜನಿಸಿದ್ದರು ಎಂದು ಇದೆ. ಈ ಯುದ್ಧವನ್ನು ಫುಜ್ಜಾರ್ ಯುದ್ಧ ಎಂದರೆ, ಪಾಪಕರವಾದ ಯುದ್ಧವೆಂದು ಹೇಳುವುದರ ಕಾರಣವೇನೆಂದರೆ, ಈ ಯುದ್ಧವು ಯುದ್ಧ ನಿಷಿದ್ಧಗೊಳಿಸಲಾದ ತಿಂಗಳಲ್ಲಿ ನಡೆದಿತ್ತು. ಅದು ಬಹಳ ಆಜ್ಞೋಲಂಘನೆ ಮತ್ತು ಪಾಪದ ಸಂಗತಿಯಾಗಿತ್ತು. ಈ ಯುದ್ಧ ನಾಲ್ಕು ಘಟ್ಟಗಳಾಗಿ ನಡೆದಿತ್ತು. ನಾಲ್ಕನೇ ಮತ್ತು ಕೊನೆಯ ಯುದ್ಧವನ್ನು **ಅಲ್‌ಫುಜ್ಜಾರುಲ್ ಅಅ್‌ಝುಮುಲ್ ಆಖಿರ್** ಎಂದೂ ಕರೆಯಲಾಗುತ್ತದೆ. ಈ ಯುದ್ಧ ಖುರೈಶ್ ಮತ್ತು ಬನೂಕನಾನ ಹಾಗೂ ಹವಾಝುನ್ ನಡುವೆ ನಡೆದಿತ್ತು. (ತಾರೀಖ್ ದಮಿಷ್ಕ್ ಲಿಇಬ್ನೆ ಅಸಾಕರ್ ಸಂಪುಟ–47, ಪುಟ–45, ಉಮರ್ ಬಿನ್ ಖತ್ತಾಬ್, ಮುದ್ರಣ ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 2001) (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–4, ಪುಟ–484, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005) (ಅಟ್ಲಸ್ ಸೀರತ್ ನಬವಿ(ಸ) ಪುಟ–75, ಮುದ್ರಣ ದಾರುಸ್ಸಲಾಮ್ ರಿಯಾಝ್ 1424ಹಿ)

ಒಂದು ವರದಿಯ ಪ್ರಕಾರ ಅವರ ಜನನದ ವರ್ಷ ಕಅ್‌ಬದ ಮೇಲೆ ದಾಳಿ ಮಾಡಲು ಅಬ್ರಹತ್ ಬಂದಿದ್ದ ಕ್ರಿ.ಶ. 570ರ ಹದಿಮೂರು ವರ್ಷಗಳ ನಂತರ ಎಂದರೆ ಕ್ರಿ.ಶ. 583 ಎಂದು ಸಹ ಬಂದಿದೆ. ಒಂದು ವರದಿಯ ಪ್ರಕಾರ ಹಝ್ರ್‌ರತ್ ಉಮರ್(ರ) ನಬವೀ ವರ್ಷ 6ರಲ್ಲಿ 26ನೇ ವಯಸ್ಸಿನಲ್ಲಿ ಇಸ್ಲಾಂ ಧರ್ಮ ಸ್ವೀಕರಿಸಿದ್ದರು ಎಂದಿದೆ.
(ಅತ್ತಬಖಾಅತುಲ್ ಕುಬ್ರ ಸಂಪುಟ–3, ಪುಟ–204, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990) (ಅಟ್ಲಸ್ ಸಈರತ್ ನಬವಿ(ಸ) ಪುಟ–75, ದಆರುಸ್ಸಲಾಮ್ ರಿಯಾಝ್ 1424ಹಿ)

ಇದರ ಪ್ರಕಾರ ಅವರ ಜನನದ ವರ್ಷ ಕ್ರಿ.ಶ. 590 ಆಗುತ್ತದೆ. ಮತ್ತೊಂದು ವರದಿಯಿದೆ; ಅದರ ಪ್ರಕಾರ ಹಝ್ರ್‌ರತ್ ಪೈಗಂಬರ್‌ರಿಗೆ(ಸ) 21 ವರ್ಷ ಪ್ರಾಯವಿದ್ದಾಗ ಹಝ್ರ್‌ರತ್ ಉಮರ್(ರ) ಜನಿಸಿದ್ದರು ಎಂದಿದೆ. (ತಾರೀಖ್ ಅಲ್‌ಖಮೀಸ್ ಫೀ ಅಹ್ವಾಲ್ ಅನ್‌ಫಸ್, ಭಾಗ–1, ಪುಟ–259, ಮುಅಸ್ಸಸ ಶಅ್‌ಬಾನ್ ಬೈರೂತ್)

ಹೇಗಿದ್ದರೂ ಇವು ವಿವಿಧ ಅಭಿಪ್ರಾಯಗಳಾಗಿವೆ.

ಸುಮಾರು 21ರಿಂದ 26ರ ಪ್ರಾಯದ ನಡುವೆ ಹಝ್ರ್‌ರತ್ ಉಮರ್ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಹಝ್ರ್‌ರತ್ ಉಮರರ(ರ) ಉಪನಾಮ ಅಬೂಹಫ್ಸ್ ಎಂದಾಗಿತ್ತು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–4, ಪುಟ–484, ದಆರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಹಝ್ರ್‌ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಹಝ್ರ್‌ರತ್ ಪೈಗಂಬರ್(ಸ) ಬದ್ರ್ ಯುದ್ಧದ ದಿನ ತಮ್ಮ ಸಹಾಬರೊಡನೆ ಹೇಳಿದರು: ಹಾಶಿಮ್‌ನ ಮಕ್ಕಳು ಮತ್ತು ಕೆಲವು ಇತರ ಜನರು ಖುರೈಶಿಗಳೊಂದಿಗೆ

ಯಾವುದೇ ನಿರ್ವಾಹವಿಲ್ಲದೇ ಬಂದಿರುವರು. ಅವರು ನಮ್ಮ ವಿರುದ್ಧ ಹೋರಾಡಲು ಬಯಸುತ್ತಿಲ್ಲ. ಆದ್ದರಿಂದ ನಿಮ್ಮಲ್ಲಿ ಯಾರಾದರೂ ಬನೂ ಹಾಶಿಮಿನ ಯಾವನಾದರೂ ವ್ಯಕ್ತಿಯನ್ನು ಕಂಡರೆ ಅವನನ್ನು ಕೊಲ್ಲಬೇಡಿರಿ ಮತ್ತು ಯಾರಾದರೂ ಅಬುಲ್‌ಬಖ್ತರಿಯನ್ನು ಕಂಡರೆ, ಅವನನ್ನು ಕೊಲ್ಲಬೇಡಿರಿ. ಯಾರಾದರೂ ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್‌ರನ್ನು ಕಂಡರೆ ಅವರನ್ನು ಸಹ ಕೊಲ್ಲಬೇಡಿರಿ. ಏಕೆಂದರೆ ಇವರೆಲ್ಲರೂ ಒತ್ತಾಯದ ಕಾರಣದಿಂದ ಖುರೈಶಿಗಳೊಂದಿಗೆ ಸೇರಿರುವರು. ಹಝ್ರ‌ತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಹಝ್ರ‌ತ್ ಅಬೂಹುಧೈಫ ಬಿನ್ ಉತ್‌ಬ ಹೇಳಿದರು: ನಾವು ನಮ್ಮ ತಂದೆಯವರನ್ನು, ಸಹೋದರರನ್ನು ಮತ್ತು ಸಂಬಂಧಿಕರನ್ನು ಕೊಂದು ಅಬ್ಬಾಸ್‌ರನ್ನು ಹೇಗೆ ಬಿಟ್ಟುಬಿಡುವುದು. ಅಲ್ಲಾಹನಾಣೆ, ನಾನು ಅವರನ್ನು ಕಂಡರೆ, ನಾನು ಅವರನ್ನು ಖಂಡಿತ ಕೊಲ್ಲುವೆನು. ವರದಿಗಾರ ಹೇಳುತ್ತಾರೆ: ಈ ಸುದ್ದಿ ಹಝ್ರ‌ತ್ ಪೈಗಂಬರ್‌ರಿಗೆ(ಸ) ತಲುಪಿದಾಗ, ಅವರು ಹಝ್ರ‌ತ್ ಉಮರ್ ಬಿನ್ ಖಿತ್ತಾಬ್‌ರೊಡನೆ ಹೇಳಿದರು: ಹೇ ಅಬೂ ಹಫ್ಸ್, ಹಝ್ರ‌ತ್ ಉಮರ್(ರ) ಹೇಳುತ್ತಾರೆ: ಅಲ್ಲಾಹನಾಣೆ, ಹಝ್ರ‌ತ್ ಪೈಗಂಬರ್(ಸ) ಅಂದು ಮೊದಲ ಬಾರಿಗೆ ನನ್ನನ್ನು ಅಬೂ ಹಫ್ಸ್ ಎಂಬ ಉಪನಾಮದೊಂದಿಗೆ ಕರೆದಿದ್ದರು. ಹಝ್ರ‌ತ್ ಪೈಗಂಬರ್(ಸ) ಹೇಳಿದರು: ಹೇ ಅಬೂಹಫ್ಸ್, ಏನು ರಸೂಲುಲ್ಲಾಹ್‌ರ ದೊಡ್ಡಪ್ಪರ ಮುಖದ ಮೇಲೆ ಖಡ್ಗದಿಂದ ಹಲ್ಲೆ ಮಾಡಲಾಗುವುದೇ? ಹಝ್ರ‌ತ್ ಉಮರ್(ರ) ಹೇಳಿದರು: ಯಾ ರಸೂಲಲ್ಲಾಹ್, ಹೀಗೆ ಹೇಳಿದವನ ತಲೆಯನ್ನು ಖಡ್ಗದಿಂದ ಕಡಿಯಲು ನನಗೆ ಅನುಮತಿ ಕೊಡಿರಿ. ಅಲ್ಲಾಹನಾಣೆ, ಅವನು ಎಂದರೆ, ಅಬೂ ಹುಧೈಫ ಕಾಪಟ್ಯವನ್ನು ತೋರಿಸಿದ್ದಾನೆ. ಹಝ್ರ‌ತ್ ಅಬೂಹುಧೈಫ ಅನಂತರ ಕಾಲದಲ್ಲಿ ಹೇಳುತ್ತಿದ್ದರು: ನಾನು ಅಂದು ಹೇಳಿದ ಈ ಮಾತಿನಿಂದ ನನಗೆ ಸಮಾಧಾನವಿರಲಿಲ್ಲ. ಶಹಾದತ್ ಮೂಲಕ ಇದರ ಪ್ರಾಯಶ್ಚಿತ್ತ ಆಗದಿದ್ದರೆ, ಈ ಮಾತಿನ ಕಾರಣದಿಂದ ದೇವಶಿಕ್ಷೆಗೆ ಗುರಿಪಡುವನೋ ಎಂದು ನಾನು ಯಾವಾಗಲೂ ಹೆದರುತ್ತಿದ್ದೆ. ಹಝ್ರ‌ತ್ ಅಬೂಹುಧೈಫ ಯಮಾಮ ಯುದ್ಧದಂದು ಶಹೀದ್ ಆಗಿದ್ದರು. ಹೀಗೆ ಈ ಶಹಾದತ್ ಅವರ ಆ ಮಾತಿಗೆ ಪ್ರಾಯಶ್ಚಿತವಾಯಿತು. (ಸೀರತ್ ಇಬ್ನೆ ಹಿಶ್ಶಾಮ್ ಪುಟ–429, ಬಾಬ್ ಗಝ್ವ ಎ ಬದರ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರ‌ತ್ ಆಇಶ(ರ) ಹೇಳುತ್ತಾರೆ: ಹಝ್ರ‌ತ್ ಉಮರ್‌ರಿಗೆ ಹಝ್ರ‌ತ್ ಪೈಗಂಬರ್(ಸ) **"ಫಾರೂಖ್"** ಎಂಬ ಶಿರೋನಾಮವನ್ನು ನೀಡಿದ್ದರು. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–4, ಪುಟ–143, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್)

ಈ ಬಿರುದು ನಾಮದ ಹಿನ್ನೆಲೆ ಏನಾಗಿತ್ತು ಎಂಬುದರ ಬಗ್ಗೆ ಹೀಗೆ ವರದಿ ಸಿಗುತ್ತದೆ. ಒಂದು ಬಾರಿ ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹುರೊಡನೆ ಹಝ್ರ‌ತ್ ಇಬ್ನು ಅಬ್ಬಾಸ್(ರ) ಕೇಳಿದರು: ನಮಗೆ **"ಫಾರೂಖ್"** ಎಂಬ ನಾಮ ಹೇಗೆ ಲಭಿಸಿತ್ತು? ಹಝ್ರ‌ತ್ ಉಮರ್(ರ) ಹೇಳಿದರು: ಹಝ್ರ‌ತ್ ಹಂಝ(ರ) ನನಗಿಂತ ಮೂರು ದಿನಗಳ ಮುಂಚೆ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದರು. ನಾನು ಮಸ್ಜಿದ್ ಹರಾಮ್‌ನ ಕಡೆಗೆ ಹೊರಟೆ. ಆಗ ಅಬೂಜಹಲ್ ಬೇಗನೇ ಹಝ್ರ‌ತ್ ಪೈಗಂಬರರ(ಸ) ಸಮೀಪದಿಂದ ಬೈಯ್ಯುತ್ತಾ ಹೋದರು. ಅನಂತರ ಅವರು ಈ ಎಲ್ಲ ಘಟನೆಯನ್ನು ಹಝ್ರ‌ತ್ ಹಂಝರಿಗೆ ಹೇಳಿಕೊಟ್ಟರು. ಹಝ್ರ‌ತ್ ಹಂಝರಿಗೆ ಇದು ಗೊತ್ತಾದಾಗ ಅವರು ಬಿಲ್ಲನ್ನು ತೆಗೆದುಕೊಂಡು ಕಅ್‌ಬ ಭವನದ ಕಡೆಗೆ ಹೋದರು. ಅಬೂಜಹಲ್ ಕುಳಿತುಕೊಂಡಿದ್ದ ಖುರೈಶಿಗಳ ಕೂಟದ ಮುಂದೆ ತನ್ನ ಬಿಲ್ಲಿನ ಆಸರೆಯನ್ನು ಪಡೆಯುತ್ತಾ ನಿಂತರು ಮತ್ತು ಅಬೂಜಹಲನ್ನು ನಿರಂತರವಾಗಿ ದಿಟ್ಟಿಸಿ ನೋಡಲು ತೊಡಗಿದರು. ಹಝ್ರ‌ತ್ ಹಂಝರ(ರ) ಮುಖದಲ್ಲಿ ಕೋಪವನ್ನು ಕಂಡು ಅಬೂಜಹಲ್ ಹೇಳಿದನು: ಹೇ ಅಬೂ ಅಮ್ಮಾರ, ಏನಾಯಿತು? ಇದು ಹಝ್ರ‌ತ್ ಹಂಝರ ಉಪನಾಮವಾಗಿತ್ತು. ಇದನ್ನು ಕೇಳಿದ ಕೂಡಲೇ ಹಝ್ರ‌ತ್ ಹಂಝ ತನ್ನ ಬಿಲ್ಲನ್ನು ಜೋರಾಗಿ ಅವರ ಕೆನ್ನೆಗೆ ಹೊಡೆದರು. ಕೆನ್ನೆ ಮುರಿದು ಅದರಿಂದ ರಕ್ತ ಸುರಿಯಲು ಶುರುವಾಯಿತು. ಅವರ ಕೋಪದ ಭಯದಿಂದ ಖುರೈಶಿಗಳು ಬೇಗನೇ ಜಗಳವನ್ನು ಕೊನೆಗೊಳಿಸಿದರು.

ಹಝ್ರ‌ತ್ ಉಮರ್(ರ) ಹೇಳುತ್ತಾರೆ: ಈ ಘಟನೆಯನ್ನು ನಾನು ನೋಡಿರಲಿಲ್ಲ. ಈ ಘಟನೆ ನಡೆದ ಮೂರನೇ ದಿನ ನಾನು ಮನೆಯಿಂದ ಹೊರಗೆ ಬಂದೆನು. ಮಾರ್ಗ ಮಧ್ಯೆ ಬನೂ ಮಖ್‌ಝೂಮ್‌ನ ಒಬ್ಬ ವ್ಯಕ್ತಿಯನ್ನು ಭೇಟಿಯಾದೆನು. ನೀನು ನಿನ್ನ ತಂದೆತಾಯಂದಿರ ಧರ್ಮವನ್ನು ಬಿಟ್ಟು ಮುಹಮ್ಮದ್‌ರ ದೀನನ್ನು ಸ್ವೀಕರಿಸಿದ್ದೀಯ ಎಂದು ನಾನು ಅವನೊಡನೆ ಕೇಳಿದೆ. ಅವನು ಹೇಳಿದನು: ನಾನು ಸ್ವೀಕರಿಸಿದರೆ ಅದು ಮಹಾ ಸಂಗತಿಯೇನಲ್ಲ. ನಿನಗೆ ಯಾರ ಮೇಲೆ ಹೆಚ್ಚು ಅಧಿಕಾರವಿದೆಯೋ ಅವರು ಸಹ ಸ್ವೀಕರಿಸಿರುವರು. ಅವರು ಯಾರೆಂದು ನಾನು ಪ್ರಶ್ನಿಸಿದೆ. "ನಿನ್ನ ಸಹೋದರಿ ಮತ್ತು ಭಾವ ಎಂದು ಅವನು ಹೇಳಿದನು. ಇದನ್ನು ಕೇಳಿ ನಾನು ನನ್ನ ಸಹೋದರಿಯ ಮನೆಗೆ ಹೋದಾಗ ಮನೆಯ ಬಾಗಿಲು ಮುಚ್ಚಲ್ಪಟ್ಟಿದ್ದುವು. ಅಲ್ಲಿ ಏನೋ ಮೆಲುಧ್ವನಿಯಲ್ಲಿ ಓದುತ್ತಿರುವುದಾಗಿ ನಾನು ಆಲಿಸಿದೆ. ನನಗಾಗಿ ಬಾಗಿಲುಗಳನ್ನು ತೆರೆಯಲಾಯಿತು. ನಾನು ಒಳಗೆ ಪ್ರವೇಶಿಸಿದೆ. ಮನೆಯಿಂದ ಬರುತ್ತಿದ್ದ ಶಬ್ದವೇನಾಗಿತ್ತು ಎಂದು ನಾನು ಕೇಳಿದೆ. ನೀನು ಏನನ್ನು ಆಲಿಸಿದ್ದೀಯ ಎಂದು ಅವರು ಸಹ ಕೇಳಿದರು. ಅಲ್ಲಿ ಮಾತುಕತೆ ಮುಂದುವರೆದಾಗ ನಾನು ನನ್ನ ಭಾವನ ತಲೆಯನ್ನು ಹಿಡಿದುಕೊಂಡು ಅವನನ್ನು ಹೊಡೆದು ರಕ್ತಸಿಕ್ತಗೊಳಿಸಿದೆ. ನನ್ನ ಸಹೋದರಿ ಎದ್ದು ನಿಂತಳು. ಅವಳು ನನ್ನ ತಲೆಯನ್ನು ಹಿಡಿದಳು. ಇದು ನನ್ನ ಇಚ್ಛೆಗೆ ವಿರುದ್ಧ ನಡೆದಿದೆ ಎಂದು ಅವಳು ಹೇಳಿದಳು. ಎಂದರೆ ಅವರ ಇಸ್ಲಾಂ ಸ್ವೀಕಾರ ನನ್ನ ಇಚ್ಛೆಗೆ ವಿರುದ್ಧವಾಗಿತ್ತು ಎಂದು ಹೇಳಿದಳು. ಮತ್ತೊಂದು ವರದಿಯಲ್ಲಿ ಸಹೋದರಿ ಗಾಯಗೊಂಡಿದ್ದಾಗಿ ಸಹ ಪ್ರಸ್ತಾಪ ಲಭಿಸುತ್ತದೆ.

ಹಝ್ರ‌ತ್ ಉಮರ್(ರ) ಹೇಳುತ್ತಾರೆ ಭಾವನ ಮತ್ತು ಸಹೋದರಿಯ ದೇಹದಿಂದ ರಕ್ತ ಸುರಿಯುತ್ತಿರುವುದನ್ನು ಕಂಡು ನಾನು ಲಜ್ಜಿತನಾದೆನು. ನಾನು ಕುಳಿತುಕೊಂಡೆನು. ನೀವು ಓದುತ್ತಿದ್ದ ಗ್ರಂಥವನ್ನು ನನಗೆ ತೋರಿಸುಕೊಡು ಎಂದು ನಾನು ಹೇಳಿದೆ. ಇದನ್ನು ಪರಿಶುದ್ಧರಾದವರು ಮಾತ್ರ ಮುಟ್ಟಬಹುದಾಗಿದೆ; ನೀನು ಸತ್ಯ ಹೇಳುತ್ತಿದ್ದೀಯ ಎಂದಾದರೆ, ಮೊದಲು ನೀನು ಸ್ನಾನ ಮಾಡು ಎಂದು ನನ್ನ ಸಹೋದರಿ ನನ್ನೊಡನೆ ಹೇಳಿದಳು. ನಾನು ಸ್ನಾನ ಮಾಡಿ ಬಂದಾಗ ಅವರು ನನಗಾಗಿ ಆ ಪುಟಗಳನ್ನು ತೆಗೆದರು. ಅದರಲ್ಲಿ **ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ** ಎಂದಿತ್ತು. ಇದು ಬಹಳ ಪರಿಶುದ್ಧವಾದ ಹೆಸರಾಗಿದೆ ಎಂದು ನಾನು ಹೇಳಿದೆ. ಅದರ ನಂತರ ಹೀಗಿತ್ತು: – **ತಾಹಾ. ಮಾ ಅನ್‌ಝಲ್‌ನಾ ಇಲೈಕಲ್ ಖುರ್‌ಆನ ಲಿತಶ್‌ಕ – ಎಂದಿತ್ತು**. ಅಲ್ಲಿಂದ – **ಲಹೂ ಅಸ್ಮಾಉಲ್ ಹುಸ್ನ** – ತನಕ ಓದಿದೆ. ಅವು ಸೂರಃ ತಾಹಾದ 2ರಿಂದ 9ರ ವರೆಗಿನ ವಚನಗಳಾಗಿದ್ದುವು. ಅದರ ಮಹಿಮೆಯ ಪ್ರಭಾವ ನನ್ನ ಹೃದಯದಲ್ಲಿ ಆಳವಾಗಿ ಉಂಟಾಯಿತು. ಖುರೈಶಿಗಳು ಇದರಿಂದ ಏಕೆ ಓಡಿಹೋಗುತ್ತಾರೆ ಎಂದು ನಾನು ಯೋಚಿಸಿದೆ. ನಾನು ಇಸ್ಲಾಂ ಧರ್ಮವನ್ನು ಸ್ವೀಕರಿಸಿದೆ ಮತ್ತು ರಸೂಲುಲ್ಲಾಹ್(ಸ) ಎಲ್ಲಿರುವರು ಎಂದು ಕೇಳಿದೆ. ಅವರು ದಾರುಲ್‌ಅರ್ಕಮ್‌ನಲ್ಲಿದ್ದಾರೆ ಎಂದು ನನ್ನ ಸಹೋದರಿ ಹೇಳಿದಳು. ನಾನು ಬೇಗನೇ ಅಲ್ಲಿಂದ ದಾರುಲ್‌ಅರ್ಖಮ್‌ಗೆ ಹೋದೆನು. ಬಾಗಿಲನ್ನು ತಟ್ಟಿದೆ. ಅಲ್ಲಿದ್ದ ಸಹಾಬಿಯರು ಒಟ್ಟುಗೂಡಿದರು. ನಿಮಗೆ ಏನಾಯಿತು ಎಂದು ಹಝ್ರ‌ತ್ ಹಂಝ ಕೇಳಿದರು. ಉಮರ್ ಬಂದಿರುವರು ಎಂದು ಅವರು ಹೇಳಿದರು. ಬಾಗಿಲ ಬಳಿ ನಿಂತಿರುವರು ಉಮರ್ ಆಗಿದ್ದರೂ ಪರವಾಗಿಲ್ಲ, ಬಾಗಿಲನ್ನು ತೆರೆಯಿರಿ ಎಂದು ಹಝ್ರ‌ತ್ ಹಂಝ ಹೇಳಿದರು. ಅವರು ಸದುದ್ದೇಶದಿಂದ ಬಂದಿರುವರು ಎಂದಾದರೆ, ನಾವು ಅವರನ್ನು ಸ್ವೀಕರಿಸುವೆವು. ಆದರೆ ಅವರು ದುರುದ್ದೇಶದಿಂದ ಬಂದಿರುವರು ಎಂದಾದರೆ ನಾವು ಅವರನ್ನು ಕೊಲ್ಲುವೆವು ಎಂದು ಹಝ್ರ‌ತ್ ಹಂಝ ಹೇಳಿದರು. ಈ ಮಾತುಗಳನ್ನು ಹಝ್ರ‌ತ್ ಪೈಗಂಬರ್(ಸ) ಸಹ ಕೇಳಿದರು. ಹಝ್ರ‌ತ್ ಪೈಗಂಬರ್(ಸ) ಹೊರಗೆ ಬಂದರು. ಆಗ ಹಝ್ರ‌ತ್ ಉಮರ್ ಶಹಾದತ್ ಕಲಿಮ ಉಚ್ಚರಿಸಿದರು. ಆಗ ಮನೆಯಲ್ಲಿದ್ದ ಎಲ್ಲ ಸಹಾಬಿಯರು **"ಅಲ್ಲಾಹು ಅಕ್ಬರ್"** ಎಂದು ಜೋರಾಗಿ ಹೇಳಿದರು. ಅದನ್ನು ಮಕ್ಕಾ ನಿವಾಸಿಗಳು ಕೇಳಿದರು. ಹಝ್ರ‌ತ್ ಉಮರ್(ರ) ಹಝ್ರ‌ತ್ ಪೈಗಂಬರ್‌ರೊಡನೆ(ಸ) ಕೇಳಿದರು: ಯಾ ರಸೂಲಲ್ಲಾಹ್, ನಾವು ಸತ್ಯದಲ್ಲಿ ಇಲ್ಲವೇ? ಏಕಿಲ್ಲ ಎಂದು ಹಝ್ರ‌ತ್ ಪೈಗಂಬರ್(ಸ) ಹೇಳಿದರು. ಹಾಗಾದರೆ, ಅಡಗಿ ಕುಳಿತುಕೊಳ್ಳುವ ಆವಶ್ಯಕತೆಯೇನು? ನಾವು ನಮ್ಮ ಧರ್ಮವನ್ನು ರಹಸ್ಯವಾಗಿ ಏಕೆ ಇಟ್ಟಿದ್ದೇವೆ? ಎಂದು ನಾನು ಕೇಳಿದೆ. ಅನಂತರ ನಾವು ಎರಡು ಪಂಕ್ತಿಗಳಲ್ಲಿ ಮಸ್ಜಿದ್ ಹರಾಮನ್ನು ಪ್ರವೇಶಿಸಿದೆವು. ಒಂದು ಪಂಕ್ತಿಯಲ್ಲಿ ನಾನಿದ್ದೆ, ಮತ್ತೊಂದು ಪಂಕ್ತಿಯಲ್ಲಿ ಹಝ್ರ‌ತ್ ಹಂಝ ಇದ್ದರು. ಖುರೈಶಿಯರು ನನ್ನನ್ನು ಮತ್ತು ಹಂಝ‌ರನ್ನು ಕಂಡಾಗ, ಅವರಿಗೆ ಹಿಂದೆಂದೂ ಉಂಟಾಗದಂತಹ ಅತಿಯಾದ ದುಃಖ ಮತ್ತು ನೋವು ಉಂಟಾಯಿತು. ಆ ದಿನದಂದು ಹಝ್ರ‌ತ್ ಪೈಗಂಬರ್(ಸ) ನನಗೆ **"ಫಾರೂಖ್"** ಎಂಬ ಹೆಸರು ಇರಿಸಿದರು. ಎಂದರೆ ಸತ್ಯ ಮತ್ತು ಅಸತ್ಯದ ನಡುವೆ ವ್ಯತ್ಯಾಸ ಉಂಟುಮಾಡುವವನು. ಏಕೆಂದರೆ ಅಂದಿನಿಂದ ಇಸ್ಲಾಮಿಗೆ ಹೆಚ್ಚಿನ ಶಕ್ತಿ ಲಭಿಸಿತ್ತು. ಸತ್ಯ ಮತ್ತು ಸುಳ್ಳಿನ ನಡುವೆ ಅಂತರ ಉಂಟಾಯಿತು. (ತಾರೀಖುಲ್ ಖುಲಫಾ, ಪುಟ–91–92, ದಾರುಲ್ ಕುತುಬುಲ್ ಅರಬಿ ಬೈರೂತ್ ಲೆಬನಾನ್ 1999)

ಅಯ್ಯೂಬ್ ಬಿನ್ ಮೂಸಾ ವರದಿ ಮಾಡುತ್ತಾರೆ: ನಿಸ್ಸಂಶಯವಾಗಿಯೂ ಅಲ್ಲಾಹನು ಸತ್ಯವನ್ನು ಉಮರರ ನಾಲಗೆ ಮತ್ತು ಹೃದಯದಲ್ಲಿ ಸ್ಥಿರಗೊಳಿಸಿದ್ದಾನೆ. ಅವರು ಫಾರೂಖ್ ಆಗಿರುವರು. ಏಕೆಂದರೆ ಅಲ್ಲಾಹನು ಅವರ ಮೂಲಕ ಸತ್ಯ ಮತ್ತು ಮಿಥ್ಯದ ನಡುವೆ ವ್ಯತ್ಯಾಸವನ್ನು ಉಂಟುಮಾಡಿದ್ದಾನೆ.

(ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–4, ಪುಟ–143, ದಾರುಲ್ ಕುತುಬ್ ಇಲ್ಮಿಯ ಬೈರೂತ್ ಲೆಬನಾನ್)

ಹಝ್ರತ್ ಉಮರ್(ರ) ಉದ್ದ ಮತ್ತು ಸುದೃಢ ಮೈಕಟ್ಟಿನ ವ್ಯಕ್ತಿಯಾಗಿದ್ದರು. ತಲೆಯ ಮುಂದಿನ ಭಾಗದಲ್ಲಿ ಕೂದಲು ಇರಲಿಲ್ಲ. ಚರ್ಮದ ಬಣ್ಣ ಅಲ್ಪ ಕೆಂಪಗೆ ಆಗಿತ್ತು. ಅವರ ಮುಖ ಮೃದುವಾಗಿತ್ತು.

ಇಸ್ಲಾಮಿಗೆ ಮುಂಚೆ ಅವರ ಅಭ್ಯಾಸಗಳ ಬಗ್ಗೆ ಹೀಗೆ ಪ್ರಸ್ತಾಪ ಸಿಗುತ್ತದೆ. ಕುದುರೆ ಸವಾರಿ ಮತ್ತು ಕುಸ್ತಿ ಅವರಿಗೆ ಬಹಳ ಪ್ರಿಯವಾಗಿದ್ದುವು. ಉಕ್ಕಾಝ್‌ನ ಮೇಳೆಯಲ್ಲಿ ನಡೆಯುವ ಕುಸ್ತಿಯ ಸ್ಪರ್ಧೆಯಲ್ಲಿ ಸಾಮಾನ್ಯವಾಗಿ ಹಝ್ರತ್ ಉಮರ್(ರ) ಜಯಿಸುತ್ತಿದ್ದರು. ಯೌವ್ವನದಲ್ಲಿ ಅರೇಬಿಯದ ಸಂಪ್ರದಾಯದ ಪ್ರಕಾರ ಅವರು ತಂದೆಯ ಒಂಟೆಗಳನ್ನು ಮೇಯಿಸುತ್ತಿದ್ದರು. ಇಸ್ಲಾಮಿಗೆ ಮುಂಚೆ ಅರೇಬಿಯದಲ್ಲಿ ಓದು ಬರಹ ರೂಢಿಯಲ್ಲಿರಲಿಲ್ಲ. ಹಝ್ರತ್ ಪೈಗಂಬರ್(ಸ) ಆಗಮಿಸಿದ ಸಮಯದಲ್ಲಿ ಖುರೈಶಿನ ಗೋತ್ರದಲ್ಲಿ ಕೇವಲ 17 ವ್ಯಕ್ತಿಗಳು ಓದು ಬರಹವನ್ನು ಕಲಿತಿದ್ದರು. ಹಝ್ರತ್ ಉಮರ್(ರ) ಆ ಸಮಯದಲ್ಲಿ ಓದಲು ಮತ್ತು ಬರೆಯಲು ಕಲಿತ್ತಿದ್ದರು. (ಸೈರುಸ್ಸಹಾಬ ಸಂಪುಟ–1, ಪುಟ–133, ದಾರುಲ್ ಇಶಾಅತ್ ಕರಾಚಿ 2004)

ಹಝ್ರತ್ ಉಮರ್ ಖುರೈಶಿಯರಲ್ಲಿ ಶ್ರೇಷ್ಠ ಜನರಲ್ಲಿ ಒಬ್ಬರಾಗಿದ್ದರು. ಇಸ್ಲಾಂ ಧರ್ಮ ಸ್ವೀಕಾರಕ್ಕೆ ಮುಂಚೆ ಖುರೈಶಿಗಳ ಪರವಾಗಿ ರಾಯಭಾರಿಯ ಹುದ್ದೆ ಅವರಿಗೆ ವಹಿಸಲಾಗಿತ್ತು. ಅವರ ಮತ್ತು ಇತರರ ಮಧ್ಯೆ ಯಾವುದಾದರೂ ಯುದ್ಧ ನಡೆದರೆ, ಖುರೈಶಿಗಳು ಸಾಮಾನ್ಯವಾಗಿ ಹಝ್ರತ್ ಉಮರರನ್ನು ಪ್ರತಿನಿಧಿಯಾಗಿ ಕಳುಹಿಸುತ್ತಿದ್ದರು. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–3, ಪುಟ–642, ದಾರುಲ್ ಫಿಕರ್ ಬೈರೂತ್ 2003)

ಅಬಿಸೀನಿಯಾಕ್ಕೆ ಕೆಲವು ಮುಸ್ಲಿಮರು ವಲಸೆ ಹೋದ ರಾತ್ರಿ, ಆ ಸಮಯದಲ್ಲಿ ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿರಲಿಲ್ಲ. ಅವರು ಕಠಿಣ ಸ್ವಭಾವದವರು ಆಗಿದ್ದರೂ, ಅವರ ಪರಿಚಿತರು ವಲಸೆ ಹೋಗುವುದನ್ನು ಅವರು ಕಂಡರು ಕೂಡ ಅವರೊಡನೆ ಅನುಕಂಪವನ್ನು ತೋರಿಸಿದ್ದರು. ಇದರ ಕುರಿತು ಹಝ್ರತ್ ಉಮ್ಮೇ ಅಬ್ದುಲ್ಲಾಹ್ ಬಿನ್ತ್ ಅಬೂಹಸ್ಮ ಹೇಳುತ್ತಾರೆ: ಅಲ್ಲಾಹನಾಣೆ, ನಾವು ಅಬಿಸೀನಿಯದ ಕಡೆಗೆ ರವಾನೆಯಾಗುವ ವೇಳೆ, ನನ್ನ ಪತಿ ಆಮಿರ್ ಬಿನ್ ರಬೀಅ ಯಾವುದೇ ಕೆಲಸದ ಕಾರಣದಿಂದ ಹೊರಗೆ ಹೋಗಿದ್ದರು. ಆ ಸಮಯದಲ್ಲಿ ಹಝ್ರತ್ ಉಮರ್ ಬಿನ್ ಖತ್ತಾಬ್ ಅಲ್ಲಿಗೆ ತಲುಪಿದ್ದರು. ನನ್ನ ಬಳಿ ನಿಂತರು. ಅವರು ಆಗಲೂ ಮುಶ್ರಿಕ್ ಆಗಿದ್ದರು. ನಮಗೆ ಅವರು ಹಲವು ರೀತಿಯ ತೊಂದರೆಗಳು ಮತ್ತು ಕಷ್ಟತೆಗಳನ್ನು ಕೊಡುತ್ತಿದ್ದರು. ಅವರು ನನ್ನೊಡನೆ ಕೇಳಿದರು: ಹೇ ಉಮ್ಮೇ ಅಬ್ದುಲ್ಲಾಹ್, ಎಲ್ಲಿಗೋ ರವಾನೆಯಾಗುವ ಉದ್ದೇಶವನ್ನು ಹೊಂದಿದ್ದೀರಿ ಎಂದು ಕಾಣುತ್ತಿದೆಯಲ್ಲವೇ? ನಾನು ಹೇಳಿದೆ: ಹೌದು, ಅಲ್ಲಾಹನಾಣೆ, ನಾವು ಅಲ್ಲಾಹನ ಭೂಮಿಗೆ ಹೋಗುವೆವು. ಎಲ್ಲಿಗಾದರೂ ಹೋಗುವೆವು. ಅಲ್ಲಾಹನ ಭೂಮಿ ವಿಶಾಲವಾಗಿದೆ. ನೀವಂತು ನಮಗೆ ಬಹಳ ಉಪದ್ರವನ್ನು ಕೊಟ್ಟಿದ್ದೀರಿ. ನಮ್ಮ ಮೇಲೆ ದೌರ್ಜನ್ಯವನ್ನು ಮಾಡಿದ್ದೀರಿ. ಈಗ ಅಲ್ಲಾಹನು ನಮಗಾಗಿ ಸ್ವತಂತ್ರದ ಮಾರ್ಗವನ್ನು ಉಂಟುಮಾಡಿದ್ದಾನೆ. ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನು ನಿಮ್ಮೊಂದಿಗೆ ಇರಲಿ. ಉಮ್ಮೇ ಅಬ್ದುಲ್ಲಾಹ್ ಹೇಳುತ್ತಾರೆ: ಅಂದು ಅವರಿಗೆ ಇದ್ದ ಅನುಕಂಪ ಮತ್ತು ದುಃಖ ಅದಕ್ಕಿಂತ ಮುಂಚೆ ನಾನು ನೋಡಿರಲಿಲ್ಲ. ಅನಂತರ ಅವರು ಅಲ್ಲಿಂದ ಹೊರಟುಹೋದರು. ನಾವು ಹೊರಟದ್ದು ಅವರ ದುಃಖಕ್ಕೆ ಕಾರಣವಾಗಿತ್ತು. ಉಮ್ಮೇ ಅಬ್ದುಲ್ಲಾಹ್ ಹೇಳುತ್ತಾರೆ; ಆಮಿರ್ ಬಿನ್ ಅಬ್ದುಲ್ಲಾಹ್ ತನ್ನ ಕೆಲಸದಿಂದ ಮರಳಿ ಬಂದಾಗ ನಾವು ಅವರೊಡನೆ ಹೇಳಿದೆ: ನೀನು ಉಮರರ ಸ್ಥಿತಿಯನ್ನು ನೋಡಿದ್ದರೆ ಎಷ್ಟು ಚೆನ್ನಾಗಿತ್ತು. ನಮಗಾಗಿ ಅವರಿಗೆ ಇದ್ದ ಅನುಕಂಪವನ್ನು ನೀನು ನೋಡಿರುತ್ತಿದ್ದರೆ! ಆಮಿರ್ ಬಿನ್ ರಬೀಅ ಕೇಳಿದರು: ಈ ಘಟನೆಯಿಂದ ಪ್ರಭಾವಿತಗೊಂಡು ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸುವರು ಎಂದು ನೀನು ಪ್ರತೀಕ್ಷಿಸುತ್ತೀಯಾ? ಹೌದೆಂದು ನಾನು ಹೇಳಿದೆ. ಆಗ ಆಮಿರ್ ಬಿನ್ ರಬೀಅ ಹೇಳಿದರು: ಅವರು ಎಂದಿಗೂ ಇಸ್ಲಾಂ ಧರ್ಮವನ್ನು ಸ್ವೀಕರಿಸಲಾರರು. ಉಮರರ ಕತ್ತೆ ಇಸ್ಲಾಂ ಸ್ವೀಕರಿಸಿದ್ದರೂ ಉಮರ್ ಖತ್ತಾಬ್ ಇಸ್ಲಾಂ ಸ್ವೀಕರಿಸಲಾರರು. (ಸೀರತ್ ಇಬ್ನೆ ಹಿಶ್ಯಾಮ್ ಪುಟ–159, ದಾರ್ ಇಬ್ನೆ ಹಝುಮ್ ಬೈರೂತ್ 2009)

ಇಸ್ಲಾಮಿನ ವಿರುದ್ಧ ಹಝ್ರತ್ ಉಮರ್‌ರಿಗೆ ಇದ್ದ ಕಠಿಣ ವಿರೋಧವನ್ನು ಕಂಡು ನಿರಾಶೆಗೊಂಡಿದ್ದ ಆಮಿರ್ ಬಿನ್ ಅಬ್ದುಲ್ಲಾಹ್ ಹೀಗೆ ಹೇಳಿದ್ದರು. ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ತನ್ನದಾದ ಶೈಲಿಯಲ್ಲಿ ಹೀಗೆ ವಿವರಿಸಿದ್ದಾರೆ: ಹಝ್ರತ್ ಉಮರ್‌ರಿಗೆ(ರ) ಇಸ್ಲಾಮ್‌ನೊಂದಿಗೆ ಕಠಿಣವಾದ ವಿರೋಧವಿತ್ತು. ಆದರೆ ಅವರಲ್ಲಿ ಆಧ್ಯಾತ್ಮಿಕ ಯೋಗ್ಯತೆ ಸಹ ಇತ್ತು. ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರಿಗೆ ಅವರು ತೊಂದರೆ ಕೊಡುತ್ತಿದ್ದರು ಕೂಡ ಅವರೊಳಗೆ ಅನುಕಂಪದ ಗುಣವಿತ್ತು. ಉದಾಹರಣೆಗೆ, ಕೆಲವು ಮುಸ್ಲಿಮರು ಅಬಿಸೀನಿಯಾಕ್ಕೆ ವಲಸೆ ಹೋಗಲಿಕ್ಕಾಗಿ, ಫಜ್ರ್ ನಮಾಝಿಗೆ ಮುಂಚೆ ತಯಾರಿ ಮಾಡುತ್ತಿದ್ದರು. ಮುಶ್ರಿಕರು ಅವರನ್ನು ತಡೆಯದಿರಲು ಮತ್ತು ಅವರಿಗೆ ತೊಂದರೆ ಕೊಡದಿರಲು ಅವರು ಆ ಸಮಯದಲ್ಲಿ ರವಾನೆಯಾಗುತ್ತಿದ್ದರು. ಕಳ್ಳತನ ಅಥವಾ ದರೋಡೆ ನಡೆಯದಂತೆ ನೋಡಲು ಕೆಲವು ನೇತಾರರು ಪಟ್ಟಣವನ್ನು ರಾತ್ರೆ ಸಮಯದಲ್ಲಿ ಸುತ್ತುವ ಒಂದು ರೀತಿ ಮಕ್ಕದಲ್ಲಿ ಇತ್ತು. ಇದೇ ರೂಢಿ ಪ್ರಕಾರ ಹಝ್ರತ್ ಉಮರ್(ರ) ಸಹ ರಾತ್ರಿ ಸಮಯದಲ್ಲಿ ಸುತ್ತುತ್ತಿದ್ದರು. ಮನೆಯ ಎಲ್ಲ ಸಾಮಾನುಗಳನ್ನು ಕಟ್ಟಿ ಇಟ್ಟಿರುವುದಾಗಿ ಅವರು ಒಂದು ಜಾಗದಲ್ಲಿ ಕಂಡರು. ಅವರು ಮುಂದಕ್ಕೆ ಧಾವಿಸಿದರು. ಸಹಾಬಿಯೋರ್ವಳು ಸಾಮಾನುಗಳ ಬಳಿ ನಿಂತಿದ್ದರು. ಆ ಸಹಾಬಿಯ ಪತಿ ಹಝ್ರತ್ ಉಮರರ ಸಂಬಂಧಿಯಾಗಿರಬೇಕು. ಆದ್ದರಿಂದ ಅವರು ಆ ಸಹಾಬಿಯನ್ನು ಸಂಬೋಧಿಸುತ್ತಾ ಕೇಳಿದರು: ಇದೇನು? ನೀನು ಯಾವುದೋ ದೀರ್ಘ ಯಾತ್ರೆಗೆ ಹೋಗುತ್ತಿರುವಂತೆ ಕಾಣುತ್ತಿದ್ದಿಯಲ್ಲವೇ? ಆ ಸಹಾಬಿ ಸ್ತ್ರೀಯ ಪತಿ ಅಲ್ಲಿ ಇರಲಿಲ್ಲ. ಅವರು ಅಲ್ಲಿದ್ದರೆ, ಮಕ್ಕಾ ಮುಶ್ರಿಕರ ಕಠಿನ ವಿರೋಧದ ಕಾರಣದಿಂದ ಹಝ್ರತ್ ಉಮರರ ಈ ಪ್ರಶ್ನೆಗೆ ಏನಾದರೂ ನೆಪ ಹೇಳಿಕೊಂಡು ಬಚಾವಾಗಲು ಶ್ರಮಿಸುತ್ತಿದ್ದರು. ಆದರೆ ಆ ಸ್ತ್ರೀಗೆ ಅದರ ಪರಿವೆ ಇರಲಿಲ್ಲ. ಅವರಿಗೆ ಅದರ ಆಲೋಚನೆ ಇರಲಿಲ್ಲ. ಬಹುಶಃ ಇರಲೂ ಬಹುದು. ಆದರೂ ಸತ್ಯವನ್ನು ನುಡಿದರು. ಆದ್ದರಿಂದ ಆ ಸಹಾಬಿ ಸ್ತ್ರೀ ಹೇಳಿದರು: ನಾವು ಮಕ್ಕವನ್ನು ಬಿಟ್ಟು ಹೋಗುತ್ತಿದ್ದೇವೆ. ಮಕ್ಕ ಬಿಟ್ಟು ಹೋಗುತ್ತಿದ್ದೀರಾ ಎಂದು ಹಝ್ರತ್ ಉಮರ್ ಕೇಳಿದರು. ಹೌದೆಂದು ಆ ಸ್ತ್ರೀ ಹೇಳಿದರು. ನೀವೇಕೆ ಮಕ್ಕ ಬಿಟ್ಟು ಹೋಗುತ್ತಿದ್ದೀರಿ ಎಂದು ಹಝ್ರತ್ ಉಮರ್(ರ) ಕೇಳಿದರು. ಆ ಸ್ತ್ರೀ ಹೇಳಿದರು: ಹೇ ಉಮರ್, ನಾವು ಇಲ್ಲಿರುವುದನ್ನು ನೀನು ಮತ್ತು ನಿನ್ನ ಸಹೋದರರು ಇಷ್ಟಪಡದ ಕಾರಣದಿಂದ ನಾವು ಊರು ಬಿಟ್ಟು ಹೋಗುತ್ತಿದ್ದೇವೆ. ಏಕದೇವನನ್ನು ಆರಾಧಿಸಲು ಇಲ್ಲಿ ನಮಗೆ ಸ್ವಾತಂತ್ರ್ಯವಿಲ್ಲ. ಹಝ್ರತ್ ಉಮರ್(ರ) ಆ ಸಮಯದಲ್ಲಿ ಇಸ್ಲಾಮಿನ ಕಠಿಣ ವಿರೋಧಿಯಾಗಿದ್ದರೂ, ಸ್ವತಃ ಮುಸ್ಲಿಮರನ್ನು ಕೊಲ್ಲಲು ತಯಾರಾಗಿ ನಿಲ್ಲುತ್ತಿದ್ದರು ಕೂಡ, ಈ ಉತ್ತರವನ್ನು ಆಲಿಸಿದಾಗ ಹಝ್ರತ್ ಉಮರರ(ರ) ಹೃದಯದಲ್ಲಿ ಎಷ್ಟು ಅನುಕಂಪ ಉಂಟಾಯಿತೆಂದರೆ, ಅವರು ತಮ್ಮ ಮುಖವನ್ನು ತಿರುಗಿಸುತ್ತಾ ಹೇಳಿದರು: 'ಸರಿ, ಹೋಗಿರಿ, ದೇವನು ನಿಮ್ಮ ಸಂರಕ್ಷಕನಾಗಿರಲಿ.' ಹೀಗೆ ಹೇಳಿಕೊಂಡು ಅವರು ಹೊರಟು ಹೋದರು. ಅಷ್ಟರಲ್ಲಿ ಆ ಸಹಾಬಿಯ ಸ್ತ್ರೀಯ ಪತಿ ಬಂದರು. ಇಸ್ಲಾಮಿನ ಕಠಿಣ ಶತ್ರುವೆಂದು ಅವರು ಭಾವಿಸುತ್ತಿದ್ದ ಉಮರ್ ಅಲ್ಲಿಂದ ಹೊರಟು ಹೋಗುತ್ತಿರುವುದನ್ನು ಕಂಡಾಗ, ಉಮರ್ ಅವರ ಯಾತ್ರೆಯನ್ನು ತಡೆಯುವರೇ ಎಂದು ಚಿಂತಿತರಾದರು. ಉಮರ್ ಇಲ್ಲಿಗೆ ಏಕೆ ಬಂದಿರುವರು ಎಂದು ಪತ್ನಿಯೊಡನೆ ಕೇಳಿದರು. ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎಂದು ತಿಳಿಯಲು ಬಂದಿದ್ದರು ಎಂದು ಆ ಸ್ತ್ರೀ ಹೇಳಿದರು. ಏನಾದರೂ ತೊಂದರೆ ಮಾಡುವರೇ ಎಂದು ಅವರ ಪತಿ ಕೇಳಿದರು. ಅವರ ಪತ್ನಿ ಹೇಳಿದರು: ಅವರು ಏನಾದರೂ ಉಪದ್ರ ಮಾಡುವರೇ ಎಂದು ನೀನು ಆಲೋಚಿಸುತ್ತಿದ್ದೀಯ. ಆದರೆ ಅವರು ಒಂದು ದಿನ ಮುಸ್ಲಿಮರಾಗುವರು ಎಂದು ನನಗೆ ಅನಿಸುತ್ತಿದೆ. (ತಫ್‌ಸೀರೆ ಕಬೀರ್ ಸಂಪುಟ–6, ಪುಟ–140–141)

ಹಝ್ರತ್ ಉಮರ್(ರ) ಇಸ್ಲಾಂ ಸ್ವೀಕರಿಸುವಂತೆ ಆಗಲು ಹಝ್ರತ್ ಪೈಗಂಬರ್(ಸ) ಈ ದುಆ ಸಹ ಮಾಡಿದ್ದರು: 'ಹೇ ಅಲ್ಲಾಹ್, ಇಬ್ಬರು ವ್ಯಕ್ತಿಗಳಲ್ಲಿ, ಎಂದರೆ ಅಬೂಜಹಲ್ ಮತ್ತು ಉಮರ್ ಬಿನ್ ಖತ್ತಾಬ್‌ರಲ್ಲಿ ನಿನಗೆ ಹೆಚ್ಚು ಪ್ರಿಯರಾದ ವ್ಯಕ್ತಿಯ ಮೂಲಕ ಇಸ್ಲಾಮಿಗೆ ಗೌರವ ನೀಡು'. ಇಬ್ನು ಉಮರ್(ರ) ಹೇಳುತ್ತಾರೆ: ಈ ಇಬ್ಬರಲ್ಲಿ ಅಲ್ಲಾಹನಿಗೆ ಹೆಚ್ಚು ಪ್ರಿಯರು ಹಝ್ರತ್ ಉಮರ್ ಆಗಿದ್ದರು. (ಸನನ್ ಅತ್ತಿರ್‌ಮಿಧಿ, ಅಬ್ವಾಬುಲ್ ಮನಾಖಿಬ್, ಹದೀಸ್–3681)

ಹಝ್ರತ್ ಇಬ್ನು ಉಮರ್ ವರದಿ ಮಾಡುತ್ತಾರೆ, ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದ್ದರು: **ಅಲ್ಲಾಹುಮ್ಮ ಅಯ್ಯದುದ್ದೀನ ಬಿಉಮರಿಬ್ನಿಲ್ ಖತ್ತಾಬ್**. ಹೇ ಅಲ್ಲಾಹ್, ಉಮರ್ ಬಿನ್ ಖತ್ತಾಬ್ ಮೂಲಕ ಧರ್ಮಕ್ಕೆ ನೆರವು ನೀಡು.

ಹಝ್ರತ್ ಆಯಿಶ(ರ) ಹೇಳುತ್ತಾರೆ, ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದ್ದರು: **ಅಲ್ಲಾಹುಮ್ಮ ಅಇಝ್ಝುಲ್ ಇಸ್ಲಾಮ ಬಿಉಮರಿಬ್ನಿಲ್ ಖತ್ತಾಬ್ ಖಾಸ್**. ಎಂದರೆ, ವಿಶೇಷವಾಗಿ ಉಮರ್ ಬಿನ್ ಖತ್ತಾಬ್ ಮೂಲಕ ಇಸ್ಲಾಮಿಗೆ ಗೌರವವನ್ನು ನೀಡು. (ಮುಸ್ತದ್ರಿಕ್ ಲಿಲ್‌ಹಾಕಿಮ್ ಅಲಸ್ಸಹೀಹೈನ್ ಸಂಪುಟ–3, ಪುಟ–89, ಕಿತಾಬ್ ಮಾರಿಫತಿಸ್ಸಹಾಬ, ಹದೀಸ್–4483–4485, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2002)

ಹಝ್ರತ್ ಉಮರ್(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸುವುದಕ್ಕೆ ಒಂದು ದಿನ ಮುಂಚೆ ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದ್ದರು: **ಅಲ್ಲಾಹುಮ್ಮ ಅಯ್ಯದುಲ್ ಇಸ್ಲಾಮ ಬಿಅಹುಬ್ಬುರ್ರಜುಲೈನಿ ಇಲೈಕ ಉಮರಿಬ್ನಿಲ್**

**ಖತ್ತಾಬ್ ಔ ಅಮ್ರ್ ಬಿನ್ ಹಿಶಾಂ**. ಎಂದರೆ, 'ಹೇ ಅಲ್ಲಾಹ್, ಇಬ್ಬರು ವ್ಯಕ್ತಿಗಳಲ್ಲಿ, ಎಂದರೆ ಉಮರ್ ಬಿನ್ ಖತ್ತಾಬ್ ಮತ್ತು ಉಮರ್ ಬಿನ್ ಹಿಶ್ಶಾಮ್‌ರಲ್ಲಿ ನಿನಗೆ ಹೆಚ್ಚು ಪ್ರಿಯರಾದ ವ್ಯಕ್ತಿಯ ಮೂಲಕ ಇಸ್ಲಾಮಿಗೆ ನೆರವು ನೀಡು'. ಹಝ್ರತ್ ಉಮರ್(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದಾಗ ಹಝ್ರತ್ ಜಿಬ್ರೀಲ್(ಅ) ಇಳಿದುಬಂದು ಹಝ್ರತ್ ಪೈಗಂಬರರನ್ನು(ಸ) ಸಂಬೋಧಿಸುತ್ತಾ ಹೇಳಿದರು: ಹೇ ಮುಹಮ್ಮದ್, ಹಝ್ರತ್ ಉಮರ್(ರ) ಇಸ್ಲಾಂ ಸ್ವೀಕರಿಸಿದ ಕಾರಣದಿಂದ ಆಕಾಶದವರು ಸಹ ಸಂತೋಷಗೊಂಡಿರುವರು. ಇದು ತಬ್‌ಖಾತುಲ್ ಕುಬ್ರದ ವರದಿಯಾಗಿದೆ. (ಅತ್ತಬಖಾತುಲ್ ಕುಬ್ರ ಲಿಇಬ್ನಿ ಸಅದ್ ಸಂಪುಟ–3, ಪುಟ–143, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ ಲೆಬನಾನ್ 1996)

ಹಝ್ರತ್ ಉಮರ್ ಇಸ್ಲಾಂ ಸ್ವೀರಿಸಿದರ ಬಗ್ಗೆ ಹೀಗೂ ಇದೆ ಧುಲ್‌ಹಜ್ಜ 6 ನಬವಿಯಲ್ಲಿ ಹಝ್ರತ್ ಉಮರ್(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. (ಅತ್ತಬಖಾತುಲ್ ಕುಬ್ರ ಸಂಪುಟ–3, ಪುಟ–204, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಉಮರ್(ರ) ಇಸ್ಲಾಂ ಧರ್ಮವನ್ನು ಅಂಗೀಕರಿಸಲು ಕಾರಣವೇನೆಂಬುದರ ಕುರಿತು ಹಲವಾರು ಘಟನೆಗಳು ಮತ್ತು ವರದಿಗಳು ಹದೀಸ್ ಮತ್ತು ಚರಿತ್ರೆಯ ಗ್ರಂಥಗಳಲ್ಲಿ ಬಂದಿವೆ. ಸೀರತುಲ್ ಹಲಬಿಯದ ಒಂದು ವರದಿ ಪ್ರಕಾರ, ಒಂದು ಬಾರಿ ಅಬೂಜಹಲ್ ಜನರೊಡನೆ ಹೇಳಿದರು: ಹೇ ಖುರೈಶಿ ಜನರೇ, ಮುಹಮ್ಮದ್ ನಮ್ಮ ಆರಾಧ್ಯರ ಬಗ್ಗೆ ಕೆಟ್ಟದ್ದಾಗಿ ಹೇಳುತ್ತಾರೆ. ನಿಮ್ಮನ್ನು ಮೂರ್ಖರೆಂದು ಹೇಳುತ್ತಾರೆ. ನಿಮ್ಮ ವಿಗ್ರಹಗಳು ನರಕ ಇಂಧನವೆಂದು ಹೇಳುತ್ತಾರೆ. ಆದ್ದರಿಂದ ನಾನು ಘೋಷಿಸುತ್ತೇನೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರನ್ನು ಕೊಲ್ಲುವ ವ್ಯಕ್ತಿಗೆ ನನ್ನ ವತಿಯಿಂದ ನೂರು ಕೆಂಪು ಮತ್ತು ಕಪ್ಪು ಒಂಟೆಗಳನ್ನು ಮತ್ತು ಒಂದು ಸಾವಿರ ಊಖಿಯ ಬೆಳ್ಳಿ ನಾಣ್ಯಗಳನ್ನು ಕೊಡುಗೆಯಾಗಿ ಕೊಡುತ್ತೇನೆ. ಇನ್ನೊಂದು ವರದಿಯ ಪ್ರಕಾರ, ಮುಹಮ್ಮದ ಪೈಗಂಬರರನ್ನು ಕೊಲ್ಲುವವರಿಗೆ ಚಿನ್ನ, ಬೆಳ್ಳಿ, ಸುಗಂಧ ದ್ರವ್ಯ ಮತ್ತು ಬೆಲೆಬಾಳುವ ಬಟ್ಟೆಗಳಲ್ಲದೆ ಇನ್ನಿತರ ಅನೇಕ ವಸ್ತುಗಳನ್ನು ನೀಡುವುದಾಗಿ ಅವರು ಘೋಷಿಸಿದ್ದರು ಎಂದಿದೆ. ಇದನ್ನು ಕೇಳಿಕೊಂಡು ಈ ಕೊಡುಗೆಯನ್ನು ನಾನು ಪಡೆಯುವೆನು ಎಂದು ಉಮರ್ ಹೇಳಿದರು. ನಿಸ್ಸಂಶಯವಾಗಿಯೂ ಈ ಕೊಡುಗೆ ನಿನಗೆ ಸಿಗುವುದು ಎಂದು ಜನರು ಸಹ ಹೇಳಿದರು. ಅನಂತರ ಹಝ್ರತ್ ಉಮರ್ ಇದರ ಕುರಿತು ಪ್ರತಿಜ್ಞೆ ಸಹ ಮಾಡಿದ್ದರು. ಹಝ್ರತ್ ಪೈಗಂಬರ್‌ರನ್ನು(ಸ) ಕೊಲ್ಲುವ ಉದ್ದೇಶದಿಂದ ಹಝ್ರತ್ ಉಮರ್(ರ) ತೆರೆದ ಖಡ್ಗದೊಂದಿಗೆ ಹೊರಟರು. ಮಾರ್ಗ ಮಧ್ಯೆ ಒಂದು ಕರುವನ್ನು ಕೊಯ್ಯುತ್ತಿರುವುದಾಗಿ ಅವರು ಕಂಡರು. ಅದರ ಹೊಟ್ಟೆಯಿಂದ ಹೀಗೆ ಶಬ್ದ ಬರುತ್ತಿತ್ತು: ಹೇ ಧರೀಹ್‌ನ ಜನರೇ, ಓರ್ವ ಕರೆ ನೀಡುವವನು ಅಲ್ಲಾಹನ ಏಕತ್ವ ಮತ್ತು ಹಝ್ರತ್ ಪೈಗಂಬರರ(ಸ) ಪ್ರವಾದಿತ್ವದ ಬಗ್ಗೆ ಸಾಕ್ಷ್ಯ ನೀಡಲು ಕರೆಯುತ್ತಿದ್ದಾನೆ." ಧರೀಹ್ ಎಂಬುದು ಆ ಆಕಳ ಹಸುವಿನ ಹೆಸರಾಗಿತ್ತು. ಇದು ನನ್ನ ಕಡೆಗೆ ಇರುವ ಸೂಚನೆಯಾಗಿದೆ ಎಂದು ಹಝ್ರತ್ ಉಮರ್(ರ) ಯೋಚಿಸಿದರು. (ಅಸ್ಸೀರತುಲ್ ಹಲಬೀಯ ಸಂಪುಟ–1, ಪುಟ–470, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ಲುಗಾತುಲ್ ಹದೀಸ್ ಸಂಪುಟ–4, ಪುಟ–527)

ಸೀರತುಲ್ ಹಲಬಿಯದ ಈ ವರದಿ ಸರಿಯೇ ಆಗಿದ್ದರೆ, ಅದು ಹಝ್ರತ್ ಉಮರ್(ರ) ಅಲ್ಲಿ ಆ ಸಂದರ್ಭದಲ್ಲಿ ಕಂಡ ಒಂದು ದಿವ್ಯದರ್ಶನವಾಗಿರಬಹುದು.

ಮತ್ತೊಂದು ವರದಿ ಹೀಗೆ ಬಂದಿದೆ: ಒಂದು ರಾತ್ರಿ ಮಸ್ಜಿದ್ ಹರಾಮ್‌ನಲ್ಲಿ ಹಝ್ರತ್ ಪೈಗಂಬರ್(ಸ) ನಮಾಝ್‌ನಲ್ಲಿ ಮಗ್ನರಾಗಿರುವುದನ್ನು ಹಝ್ರತ್ ಉಮರ್(ರ) ಕಂಡರು. ಹಝ್ರತ್ ಪೈಗಂಬರ್(ಸ) ಸಿರಿಯದ ಭಾಗಕ್ಕೆ ಮುಖ ಮಾಡಿಕೊಂಡು ಎಂದರೆ ಬೈತುಲ್‌ಮಖ್‌ದಸ್‌ನ ಕಡೆಗೆ ಮುಖಮಾಡಿಕೊಂಡು ನಮಾಝ್ ಮಾಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಏನು ಹೇಳುತ್ತಿದ್ದಾರೆ ಎಂದು ಕೇಳುವ ಉದ್ದೇಶವನ್ನು ಹಝ್ರತ್ ಉಮರ್(ರ) ಹೊಂದಿದ್ದರು. ಸಮೀಪಕ್ಕೆ ಹೋಗಿ ನಿಂತರೆ ಅವರಿಗೆ ಗೊತ್ತಾಗುವುದು ಎಂದು ಹಝ್ರತ್ ಉಮರ್(ರ) ಯೋಚಿಸಿದರು. ಆದ್ದರಿಂದ ಕಅ್‌ಬದ ಪರದೆಯ ಹಿಂದೆ ನಿಂತುಕೊಂಡು ಮೆಲ್ಲಮೆಲ್ಲನೆ ನಡೆಯಲು ಶುರುಮಾಡಿದರು. ಹಝ್ರತ್ ಪೈಗಂಬರ್(ಸ) ನಮಾಝ್‌ನಲ್ಲಿ ಮಗ್ನರಾಗಿದ್ದರು. ಹಝ್ರತ್ ಪೈಗಂಬರ್(ಸ) **'ಸೂರಃ ರಹ್ಮಾನ್'** ಪಾರಾಯಣ ಮಾಡುತ್ತಿದ್ದರು. ನಿಧಾನವಾಗಿ ಹಝ್ರತ್ ಉಮರ್(ರ) ಹಝ್ರತ್ ಪೈಗಂಬರರ(ಸ) ಮುಂದೆ ಬಂದರು. ಹಝ್ರತ್ ಪೈಗಂಬರರ(ಸ) ಮತ್ತು ಹಝ್ರತ್ ಉಮರರ(ರ) ಮಧ್ಯೆ ಈಗ ಕಅ್‌ಬದ ಪರದೆಯ ಮರೆ ಮಾತ್ರ ಬಾಕಿಯಿತ್ತು. ಹಝ್ರತ್ ಉಮರ್(ರ) ಹೇಳುತ್ತಾರೆ: ಪವಿತ್ರ ಖುರ್‌ಆನಿನ ವಚನಗಳನ್ನು ಆಲಿಸಿದ ಕಾರಣದಿಂದ ನನ್ನ ಹೃದಯ ಕರಗಿತು ಮತ್ತು ನಾನು ಅತ್ತುಬಿಟ್ಟೆ ಹಾಗೂ ನನ್ನೊಳಗೆ ಇಸ್ಲಾಂ ಧರ್ಮ ಪ್ರವೇಶಿಸಿತು. ನಾನು ಅದೇ ರೀತಿಯಲ್ಲಿ ನಿಂತೆ. ಅಷ್ಟರಲ್ಲಿ ಹಝ್ರತ್ ಪೈಗಂಬರ್(ಸ) ತನ್ನ ನಮಾಝನ್ನು ಪೂರ್ತಿ ಮಾಡಿದರು. ಅವರು ಅಲ್ಲಿಂದ ಹೊರಡುವಾಗ ನಾನು ಅವರನ್ನು ಹಿಂಬಾಲಿಸಿದೆ. ಹಝ್ರತ್ ಪೈಗಂಬರ್(ಸ) ನನ್ನ ಹೆಜ್ಜೆಯ ಸಪ್ಪಳವನ್ನು ಕೇಳಿದಾಗ, ಅವರಿಗೆ ಗೊತ್ತಾಯಿತು. ಅವರಿಗೆ ಏನಾದರೂ ತೊಂದರೆ ಕೊಡಲು ನಾನು ಬರುತ್ತಿದ್ದೇನೆ ಎಂದು ಅವರು ಭಾವಿಸಿದರು. ಅವರು ನನ್ನೊಡನೆ ಹೇಳಿದರು: ಹೇ ಉಮರ್, ಇಷ್ಟು ರಾತ್ರಿಯಾಯಿತು. ನೀನು ಯಾವ ಉದ್ದೇಶದಿಂದ ಬಂದಿದ್ದೀಯ? ನಾನು ಹೇಳಿದೆ: ನಾನು ಅಲ್ಲಾಹನನ್ನು ಮತ್ತು ಅವನ ಪ್ರವಾದಿಯನ್ನು ನಂಬಲು ಬಂದಿದ್ದೇನೆ.

ಇಂತಹದ್ದೇ ಒಂದು ವರದಿಯಲ್ಲಿ ಹಝ್ರತ್ ಉಮರ್(ರ) ಹೇಳುತ್ತಾರೆ: ಒಂದು ರಾತ್ರಿ ನನ್ನ ಸಹೋದರಿಗೆ ಪ್ರಸವ ವೇದನೆ ಉಂಟಾಯಿತು. ನಾನು ಪ್ರಾರ್ಥನೆ ಮಾಡಲಿಕ್ಕಾಗಿ ಕಅ್‌ಬದ ಪರದೆಗಳೊಂದಿಗೆ ಸೇರಿ ನಿಂತೆನು. ಆಗ ಹಝ್ರತ್ ಪೈಗಂಬರ್(ಸ) ನಮಾಝ್‌ನಲ್ಲಿ ಪವಿತ್ರ ಖುರ್‌ಆನ್ ವಚನಗಳನ್ನು ಓದುತ್ತಿರುವುದಾಗಿ ಕಂಡೆನು. ಆ ವಚನಗಳು ಹಝ್ರತ್ ಉಮರರ(ರ) ಹೃದಯದಲ್ಲಿ ಎಂತಹ ಪ್ರಭಾವ ಬೀರಿತ್ತೆಂದರೆ, ಹಝ್ರತ್ ಪೈಗಂಬರ್(ಸ) ಅಲ್ಲಿಂದ ಹೊರಟಾಗ, ಹಝ್ರತ್ ಉಮರ್(ರ) ಅವರನ್ನು ಹಿಂಬಾಲಿಸಲು ತೊಡಗಿದರು. ಹಝ್ರತ್ ಪೈಗಂಬರ್(ಸ) ಇದನ್ನು ಕಂಡಾಗ ಹೇಳಿದರು: ಹೇ ಉಮರ್, ನೀನು ನನ್ನನ್ನು ಹಗಲು – ರಾತ್ರಿ ಸತಾಯಿಸುತ್ತೀಯ. ಇದನ್ನು ಕೇಳಿದಾಗ, ಹಝ್ರತ್ ಪೈಗಂಬರ್(ಸ) ಅವರ ವಿರುದ್ಧ ಶಾಪ ಪ್ರಾರ್ಥನೆ ಮಾಡುವರೇ ಎಂದು ಅವರು ಹೆದರಿದರು. ಹೀಗೆ ಅವರು ಬೇಗನೇ ಶಹಾದತ್ ಕಲಿಮ ಉಚ್ಚರಿಸಿದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರರೊಡನೆ ಕೇಳಿದರು: ಹೇ ಉಮರ್, ನೀನು ನಿನ್ನ ಇಸ್ಲಾಂ ಸ್ವೀಕಾರವನ್ನು ರಹಸ್ಯವಾಗಿ ಇಡಲು ಬಯಸುತ್ತೀಯಾ? ಹಝ್ರತ್ ಉಮರ್(ರ) ಹೇಳಿದರು: ಇಲ್ಲ, ನಿಮ್ಮನ್ನು ಸತ್ಯಧರ್ಮದೊಂದಿಗೆ ಕಳುಹಿಸಿದ ಅಲ್ಲಾಹನಾಣೆ, ನಾನು ಶಿರ್ಕನ್ನು ಹಿಂದೆ ಪ್ರಚಾರ ಮಾಡುತ್ತಿದ್ದ ಹಾಗೆಯೇ ನಾನು ನನ್ನ ಇಸ್ಲಾಂ ಸ್ವೀಕಾರವನ್ನು ಘೋಷಿಸುವೆನು ಮತ್ತು ಪ್ರಚಾರ ಮಾಡುವೆನು. ಹಝ್ರತ್ ಪೈಗಂಬರ್(ಸ) ಅಲ್ಲಾಹನ ಸ್ತುತಿಕೀರ್ತನೆ ಮಾಡಿಕೊಂಡು ಹೇಳಿದರು: ಹೇ ಉಮರ್, ಅಲ್ಲಾಹನು ನಿನ್ನನ್ನು ಸನ್ಮಾರ್ಗದಲ್ಲಿ ನೆಲೆನಿಲ್ಲಿಸಲಿ. ಅನಂತರ ಅವರು ಹಝ್ರತ್ ಉಮರರ ಎದೆಯನ್ನು ತನ್ನ ಕೈಯಿಂದ ಸವರಿದರು. ನನ್ನ ಸ್ಥೈರ್ಯಕ್ಕಾಗಿ ದುಆ ಮಾಡಿದರು. ಅನಂತರ ಅವರು ಹಝ್ರತ್ ಪೈಗಂಬರರ(ಸ) ಬಳಿಯಿಂದ ಹೊರಟುಹೋಗಿ ಮನೆಗೆ ಹೋದರು. (ಅಸ್ಸೀರತುಲ್ ಹಲಬೀಯ ಸಂಪುಟ–1, ಪುಟ–470, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ಫರ್‌ಹಂಗ್ ಸೀರತ್ ಪುಟ–135)

ಇನ್ನೊಂದು ವರದಿಯಲ್ಲಿ ಹಝ್ರತ್ ಉಮರರ(ರ) ಇಸ್ಲಾಂ ಸ್ವೀಕಾರದ ಬಗ್ಗೆ ಹೀಗೆ ಬಂದಿದೆ: ಒಂದು ದಿನ ಹಝ್ರತ್ ಪೈಗಂಬರ್(ಸ) **'ಸೂರಃ ಅಲ್‌ಹಾಖ್ಖ'** ಪಾರಾಯಣ ಮಾಡುತ್ತಿರುವುದಾಗಿ ಹಝ್ರತ್ ಉಮರ್(ರ) ಆಲಿಸಿದರು. ಪವಿತ್ರ ಖುರ್‌ಆನಿನ ವಚನಗಳ ರಚನೆ ಮತ್ತು ವಿನ್ಯಾಸದಿಂದ ಆಶ್ಚರ್ಯಗೊಂಡು ಅವರು ಯೋಚಿಸಿದರು: ದೇವನಾಣೆ, ಇದಂತು ಒಬ್ಬ ಕವಿಯ ವಚನಗಳಾಗಿವೆ. ನಾನು ಹೀಗೆ ಯೋಚಿಸುತ್ತಿದ್ದಾಗ, ಹಝ್ರತ್ ಪೈಗಂಬರ್(ಸ) ಈ ವಚನಗಳನ್ನು ಓದಿದರು: **ಇನ್ನಹೂ ಲಖೌಲು ರಸೂಲಿನ್ ಕರೀಮಿನ್ ವಮಾ ಹುವ ಬಿಖೌಲಿ ಶಾಇರ್**. ಎಂದರೆ, 'ದಿಟವಾಗಿಯೂ, ಇದು ಓರ್ವ ಆದರಣೀಯ ಪ್ರವಾದಿಯ ವಚನವಾಗಿದೆ. ಇದು ಒಬ್ಬ ಕವಿಯ ವಚನವಲ್ಲ.' ಹಝ್ರತ್ ಉಮರ್(ರ) ಹೇಳುತ್ತಾರೆ: ಇವರು ಒಬ್ಬ ಕಣಿ ಹೇಳುವವ ಅಥವಾ ಜಾದೂಗಾರ ಎಂದು ನಾನು ಆಗ ಯೋಚಿಸಿದೆ. ಅಷ್ಟರಲ್ಲಿ ಹಝ್ರತ್ ಪೈಗಂಬರ್(ರ) ಹೀಗೆ ಓದಿದರು: **ವಲಾ ಬಿಖೌಲಿ ಕಾಹಿನಿನ್. ಖಲೀಲಮ್ಮಾ ತಧಕ್ಕರೂನ್**. ಎಂದರೆ, 'ಇದು ಒಬ್ಬ ಕಣಿ ಹೇಳುವವನ ಮಾತೂ ಅಲ್ಲ; ಆದರೆ ನೀವು ಉಪದೇಶವನ್ನು ಕಡೆಗಣಿಸುತ್ತೀರಿ.' ಹಝ್ರತ್ ಉಮರ್(ರ) ಹೇಳುತ್ತಾರೆ: ಅಂದಿನಿಂದ ಇಸ್ಲಾಂ ನನ್ನ ಹೃದಯದೊಳಗೆ ಪ್ರವೇಶಿಸಿತ್ತು. ಇತಿಹಾಸ ಮತ್ತು ಜೀವನ ಚರಿತ್ರೆಯ ಗ್ರಂಥಗಳಲ್ಲಿ ಅನೇಕ ತರದ ವರದಿಗಳು ಲಭಿಸುತ್ತಿವೆ. ಅವುಗಳಲ್ಲಿ ಪ್ರಬಲವೆಂದು ತಿಳಿಯಲಾದ ವರದಿಗಳನ್ನು ನಾನು ಇಲ್ಲಿ ವಿವರಿಸಿದ್ದೇನೆ. ಸಹೋದರಿ ಮತ್ತು ಅಳಿಯನ ಮನೆಗೆ ಹೋಗಿ, ಅಲ್ಲಿಂದ ಹಝ್ರತ್ ಉಮರ್(ರ) ದಾರೇ ಅರ್ಖಮ್‌ಗೆ ಹೋದ ಘಟನೆಯ ವರದಿಯನ್ನೇ ನಾವು ಸರಿ ಮತ್ತು ಪ್ರಬಲವೆಂದು ಭಾವಿಸುತ್ತೇವೆ. ಮೇಲೆ ಪ್ರಸ್ತಾಪಿಸಲಾದ ಎಲ್ಲ ವರದಿಗಳು ಅವುಗಳ ಸ್ಥಾನಗಳಲ್ಲಿ ಸರಿಯೇ ಆಗಿರಬಹುದು. ವಿವಿಧ ಸಂದರ್ಭಗಳಲ್ಲಿ ಹಝ್ರತ್ ಉಮರರ(ರ) ಹೃದಯದಲ್ಲಿ ಬದಲಾವಣೆಗಳು ಉಂಟಾಗಿದ್ದುವು ಎಂದು ಇವುಗಳಿಂದ ತಿಳಿಯಬಹುದಾಗಿದೆ. ಸಹೋದರಿಯ ಮನೆಯಲ್ಲಿ ಪವಿತ್ರ ಖುರ್‌ಆನ್ ವಚನಗಳನ್ನು ಆಲಿಸಿದ ನಂತರ ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದ ಘಟನೆ ಕೊನೆಯದಾಗಿರಬಹುದು.

ಹಝ್ರತ್ ಉಮರ್(ರ) ಬನೂ ಅದ್ದಿ ಗೋತ್ರದ ಸರದಾರರಾಗಿದ್ದರು. ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸುವ ವೇಳೆ ಖುರೈಶಿಯರ ರಾಯಭಾರಿಯ ಹುದ್ದೆಯನ್ನು ಸಹ ಅವರಿಗೆ ವಹಿಸಲಾಗಿತ್ತು. ಅವರು ಅತ್ಯಂತ ಪ್ರತಾಪವನ್ನು ಹೊಂದಿದವರೂ, ಬಲಾಢ್ಯರೂ ಧೈರ್ಯಶಾಲಿಯೂ ಆಗಿದ್ದರು. ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದಾಗ ಮುಸ್ಲಿಮರಿಗೆ ಬಹಳ ಶಕ್ತಿ ಲಭಿಸಿತ್ತು. ಅವರು ದಾರುಲ್ ಅರ್ಕಮ್‌ನಿಂದ ಹೊರಟು ಬಹಿರಂಗವಾಗಿ ಮಸ್ಜಿದ್ ಹರಾಮ್‌ನಲ್ಲಿ ನಮಾಝ್ ನಿರ್ವಹಿಸಿದರು. ವರದಿಯ ಪ್ರಕಾರ ದಾರುಲ್‌ಅರ್ಖಮ್‌ನಲ್ಲಿ ಇಸ್ಲಾಂ ಧರ್ಮ ಸ್ವೀಕರಿಸಿದ ಕೊನೆಯ ವ್ಯಕ್ತಿ ಹಝ್ರತ್ ಉಮರ್(ರ) ಆಗಿದ್ದರು. ಆ ಸಮಯದಲ್ಲಿ ಮಕ್ಕದಲ್ಲಿ ಮುಸ್ಲಿಮ್ ಪುರುಷರ ಸಂಖ್ಯೆ ನಲ್ವತ್ತಾಗಿತ್ತು. ಹಝ್ರತ್ ಉಮರರ(ರ) ಪ್ರಸ್ತಾಪ ಮುಂದುವರೆಯುವುದು. **ಇನ್ಶಾ ಅಲ್ಲಾಹ್.**

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝವನ್ನು ನಿರ್ವಹಿಸುವೆನು. ಅವರಲ್ಲಿ ಮೊದಲನೆಯವರು ಅಹ್ಮದ್ ಮುಹಮ್ಮದ್ ಉಸ್ಮಾನ್ ಶಬೂತಿ ಸಾಹಿಬ್‌ರದ್ದಾಗಿದೆ. ಅವರು ಯಮನಿನ ಮುಹಮ್ಮದ್ ಉಸ್ಮಾನ್ ಶಬೂತಿ ಸಾಹಿಬ್‌ರ ಮಗನಾಗಿದ್ದರು. ಎಪ್ರಿಲ್ 9, 2021ರಲ್ಲಿ 87ನೇ ವಯಸ್ಸಿನಲ್ಲಿ ಈಜಿಪ್ಟ್‌ನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಅಹ್ಮದ್ ಮುಹಮ್ಮದ್ ಉಸ್ಮಾನ್ ಶಬೂತಿ ಸಾಹಿಬ್‌ರ ಜನನ ಯಮನಿನ ಪಟ್ಟಣವಾದ ಅದನಿನಲ್ಲಿ ಆಗಿತ್ತು. ಸನ್ಮಾನ್ಯ ಗ್ಫುಲಾಂ ಅಹ್ಮದ್ ಸಾಹಿಬ್ ಮುಬಲ್ಲಿಗ್ ಅದನ್‌ಗೆ ಹೋದಾಗ ಶಬೂತಿ ಸಾಹಿಬ್‌ರು 14ನೇ ವಯಸ್ಸಿನಲ್ಲಿ ಬೈಅತ್ ಮಾಡಿದ್ದರು. ಅನಂತರ ಅವರಿಗೆ ಅಹ್ಮದಿಯಾ ಜಮಾಅತಿನಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುವ ಸೌಭಾಗ್ಯ ಸಿಕ್ಕಿತ್ತು ಮತ್ತು ಒಂದು ದೀರ್ಘ ಕಾಲದಿಂದ ಮರಣದ ವರೆಗೆ ಅಹ್ಮದಿಯಾ ಜಮಾಅತ್ ಯಮನಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆಯುತ್ತಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಅವರ ಸಹಾಬಿಯರಾದ ಹಾಜಿ ಮುಹಮ್ಮದ್ ದೀನ್ ಸಾಹಿಬ್ ದೆಹ್ಲವಿ ಮತ್ತು ಹಝ್ರತ್ ಹುಸೈನ ಬೀಬೀ ಸಾಹಿಬ್‌ರ ಮೊಮ್ಮಗಳೂ ಡಾಕ್ಟರ್ ಮುಹಮ್ಮದ್ ಅಹ್ಮದ್ ಅದನೀ ಸಾಹಿಬ್‌ರ ಮಗಳೂ ಆದ ಸನ್ಮಾನ್ಯ ವಸೀಮ ಮುಹಮ್ಮದ್ ಸಾಹಿಬರೊಡನೆ ಅವರ ವಿವಾಹ ಆಗಿತ್ತು. ಶಬೂನಿ ಸಾಹಿಬ್‌ರ ನಿಕಾಹ್ ಸಹ ರಬ್ವದಲ್ಲೇ ನಡೆದಿತ್ತು ಆದರೆ ಅವರು ಅದರಲ್ಲಿ ಉಪಸ್ಥಿತರಿರಲಿಲ್ಲ. ಅನಂತರ ಅವರಿಗೆ ಕೇಂದ್ರದೊಂದಿಗೆ ಸಂಬಂಧ ಉಂಟಾಯಿತು ಮತ್ತು ರಬ್ವಗೆ ಹೋಗಲು ಸೌಭಾಗ್ಯ ಸಿಕ್ಕಿತು. ಹಝ್ರತ್ ಮುಸ್ಲಿಹ್ ಮೌಊದ್‌ರನ್ನು(ರ) ಭೇಟಿಯಾಗಲು ಸಹ ಸೌಭಾಗ್ಯ ಸಿಕ್ಕಿತು. ಹಿರಿಯರನ್ನು ಮತ್ತು ಸಹಾಬರನ್ನು ಸಹ ಅಲ್ಲಿ ಭೇಟಿಯಾದರು. ಶಬೂತಿ ಸಾಹಿಬ್‌ರು ಬ್ರಿಟನಿನ ಹಲವಾರು ಯೂನಿವರ್ಸಿಟಿಗಳಿಂದ ನರ್ಸಿಂಗ್ ಮತ್ತು ಹೆಲ್ತ್ ಮೇನಜ್‌ಮೆಂಟಿನಲ್ಲಿ ಉನ್ನತ ಶಿಕ್ಷಣವನ್ನು ಪಡೆದರು ಮತ್ತು ಲೀವರ್‌ಪೂಲ್ ಯೂನಿವರ್ಸಿಟಿಯಿಂದ ಹೆಲ್ತ್ ಎಡ್‌ಮಿನಿಸ್ಟ್ರೇಶನಿನಲ್ಲಿ ಮಾಸ್ಟರ್ ಡಿಗ್ರಿ ಪಡೆದರು. ಯಮನಿನ ಸೆಂಟ್ರಲ್ ಹೆಲ್ತ್ ಇನ್ಸಿಟ್ಯೂಟ್‌ನ ಡೀನ್ ಹುದ್ದೆ ಸಮೇತ ಆರೋಗ್ಯ ವಿಭಾಗದಲ್ಲಿ ಸುಮಾರು 29 ವರ್ಷಗಳ ಕಾಲ ಹಲವಾರು ಹುದ್ದೆಗಳಲ್ಲಿ ಇದ್ದರು. ಮಿಡಲ್ ಈಸ್ಟಿನ ದೇಶಗಳಲ್ಲದೇ ಇತರ ಅನೇಕ ದೇಶಗಳಲ್ಲಿ ಅಂತರ್ರಾಷ್ಟ್ರೀಯ ಆರೋಗ್ಯ ಸಂಸ್ಥೆಯ ತಾತ್ಕಾಲಿಕ ಸಲಹೆಗಾರರಾಗಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದಿದ್ದರು. ಕೆಲವು ಕಾಲದಿಂದ ರೋಗಿಯಾಗಿದ್ದರು. ಕೆಲವು ತಿಂಗಳು ಈಜಿಪ್ಟಿಗೆ ಹೋಗಿದ್ದರು. ಯು.ಕೆ.ಗೆ ಬರಲು ಪ್ರಯತ್ನಿಸುತ್ತಿದ್ದರು. ಅಲ್ಲಿ ಚಿಕಿತ್ಸೆ ನಡೆಯುತ್ತಿತ್ತು. ರೋಗ ಹೆಚ್ಚಾದ ಕಾರಣ ಕೆಲವು ದಿನಗಳು ಆಸ್ಪತ್ರೆಯಲ್ಲಿ ಇದ್ದುಕೊಂಡು ಕೊನೆಗೆ ಎಪ್ರಿಲ್ 9ರಂದು ನಿಧನರಾದರು. ದಿವಂಗತರು ಮೂಸಿಯಾಗಿದ್ದರು. ದಿವಂಗತರು ಪತ್ನಿಯನಲ್ಲದೆ, ಅಮೇರಿಕದಲ್ಲಿ ಡಾಕ್ಟರ್ ಆಗಿರುವ ಮಗ ಮುಹಮ್ಮದ್ ಶಬೂತಿ ಸಾಹಿಬ್‌ರನ್ನು, ಮೂವರು ಹೆಣ್ಮಕ್ಕಳನ್ನು ಮತ್ತು ಮೊಮ್ಮಕ್ಕಳನ್ನು ಅಗಲಿರುವರು. ಹಿರಿಯ ಮಗಳು ಯಮನಿನಲ್ಲಿ ಇದ್ದಾಳೆ, ಒಬ್ಬಳು ಮಗಳು ಜರ್ಮನಿಯಲ್ಲಿ, ಮತ್ತೊಬ್ಬಳು ಮಗಳಾದ ಮರ್ವಾ ಶಬೂತಿ ಸಾಹಿಬ ಯು.ಕೆ.ಯ ಎಂ.ಟಿ.ಎ. ಅಲ್‌ಅರಬಿಯದಲ್ಲಿ ಸೇವೆ ಸಲ್ಲಿಸುತ್ತಿದ್ದಾಳೆ.

ಅವರ ಮಗಳಾದ ಮರ್ವಾ ಶಬೂತಿ ಸಾಹಿಬ ಹೇಳುತ್ತಾಳೆ: ಸ್ವರ್ಗ ತಾಯಿಯ ಪಾದದಡಿಯಲ್ಲಿದೆ ಇದೆ ಎಂಬುದು ಸರಿಯೇ ಆಗಿದೆ. ಆದರೆ ನಾನು ತಂದೆಯಿಂದಲೂ ತಾಯಿಯಂತಹ ವಾತ್ಸಲ್ಯವನ್ನು ಪಡೆದೆ. ನನಗೆ ನನ್ನ ತಾಯಿ ಮತ್ತು ತಂದೆಯ ಪ್ರೀತಿಯಲ್ಲಿ ಯಾವುದೇ ವ್ಯತ್ಯಾಸ ಕಾಣಲಿಲ್ಲ. ನನ್ನ ತಂದೆಯವರು ಮುತ್ತಖಿ, ಸಾತ್ವಿಕ, ಉನ್ನತ ಸ್ವಭಾವಗುಣದವರು ಮತ್ತು ಅತ್ಯಂತ ವಿನಯವಂತರಾಗಿದ್ದರು. ಸಹನೆ, ಸತ್ಯಸಂಧತೆ, ವಿಶ್ವಾಸದ ಮೂರ್ತೀಭಾವ, ಬಡವರ ಬಳಗ, ಎಲ್ಲರೊಂದಿಗೆ ಪ್ರೀತಿ ಮಾಡುವವರು ಆಗಿದ್ದರು. ಅವರ ಪರಿಚಿತರಾದ ಹಲವಾರು ಜನರು ಇವೇ ಸಂಗತಿಗಳನ್ನು ಇವರ ಕುರಿತು ಬರೆದಿರುವರು. ತಮ್ಮ ಕೆಲಸಗಳನ್ನು ಬಹಳ ಸೂಕ್ಷ್ಮವಾಗಿ ಮಾಡುತ್ತಿದ್ದರು, ಸಮಯಪಾಲನೆ ಮತ್ತು ವಾಗ್ದಾನಗಳನ್ನು ಈಡೇರಿಸುವವರಾಗಿದ್ದರು. ಹೆಚ್ಚಾಗಿ ಆರಾಧನೆ ಮತ್ತು ಐಚ್ಛಿಕ ನಮಾಝ್‌ಗಳನ್ನು ನಿರ್ವಹಿಸುವವರಾಗಿದ್ದರು. ಕಡ್ಡಾಯ ನಮಾಝ್‌ಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಅವರಿಗೂ ಅವರ ಪತ್ನಿಗೂ 2002ರಲ್ಲಿ ಹಜ್ಜ್ ಕರ್ಮಾನುಷ್ಠಾನ ಮಾಡುವ ಸೌಭಾಗ್ಯ ಸಹ ಲಭಿಸಿತ್ತು.

ಯಮನಿನ ಖಾಇಮ್ ಮಖಾಂ ಸದರ್ ಖಾಲಿದ್ ಅಲಿ ಬಸರಿ ಸಾಹಿಬರು ಹೇಳುತ್ತಾರೆ: ದಿವಂಗತರು ಇಳಿವಯಸ್ಸಿನಲ್ಲೂ ಬಹಳ ಪ್ರತಾಪವನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ಸಾತ್ವಿಕ, ಸದಾ ಮುಗುಳ್ನಗುವ ಉದಾರಿ ಮತ್ತು ಅತಿಥಿ ಸತ್ಕಾರಿಯಾಗಿದ್ದರು. ಪ್ರತಿಯೊಬ್ಬ ಅಹ್ಮದಿಯೊಂದಿಗೆ ಕರುಣಾಮಯಿ ತಂದೆಯಂತೆ ವರ್ತಿಸುತ್ತಿದ್ದರು. ಜಮಾಅತಿನ ಯಾವುದೇ ಆವಶ್ಯಕತೆಯಿದ್ದರೂ ತನ್ನ ಜೇಬುಖರ್ಚಿನಿಂದ ನೀಡುತ್ತಿದ್ದರು. ಜಮಾಅತಿಗೆ ಉಪಯೋಗಪ್ರದವಾದ ವಸ್ತುಗಳಾದ ಪ್ರಿಂಟರ್, ಫೇಕ್ಸ್ ಮಿಶನ್ ಇತ್ಯಾದಿಗಳು ಸ್ವತಃ ಖರೀದಿ ಮಾಡುತ್ತಿದ್ದರು. ಬಡವರು ಮತ್ತು ನಿರ್ಗತಿಕರಿಗೆ ಬಹಳ ದಯಾಳು ಮತ್ತು ಕರುಣಾಳು ವ್ಯಕ್ತಿಯಾಗಿದ್ದರು. ಪ್ರತಿಯೊಬ್ಬ ದರಿದ್ರ ಅಹ್ಮದಿಯರಿಗಾಗಿ ಮನಸ್ಸಾರೆ ಖರ್ಚು ಮಾಡುತ್ತಿದ್ದರು. ಅಹ್ಮದೀ ಅನಾಥರು ಮತ್ತು ವಿಧವೆಗಳ ಸಂರಕ್ಷಣೆ ಮಾಡುತ್ತಿದ್ದರು. ಯುದ್ಧದಿಂದ ಹಾನಿಗೊಳಗಾದ ಒಂದು ಕುಟುಂಬದ ಮನೆ ಬಾಡಿಗೆ ಸ್ವತಃ ತನ್ನ ಜೇಬುಖರ್ಚಿನಿಂದ ಕೊಡುತ್ತಿದ್ದರು. ಹಿರಿಯ ವಯಸ್ಸಿನವರಾಗಿದ್ದರೂ 2018ರಲ್ಲಿ, ಸೌದಿಯ ಆಕ್ರಮಣದ ಕಾರಣದಿಂದ ಅತ್ಯಂತ ಅಪಾಯಕರವಾದ ಮತ್ತು ಎಲ್ಲೆಡೆ ಚೆಕಿಂಗ್ ನಡೆಯುತ್ತಿದ್ದ ಕಾಲದಲ್ಲಿ ಅದನ್‌ನಿಂದ ಸನ್‌ಅದ ವರೆಗಿನ 20 ಗಂಟೆಯ ದೀರ್ಘ ಮತ್ತು ಕಷ್ಟಕರವಾದ ಯಾತ್ರೆಯನ್ನು ಅವರು ಮಾಡಿದ್ದರು. ವೃದ್ಧಾಪ್ಯದ ಕಾರಣದಿಂದ ಅವರಿಗೆ ನಡೆಯುವುದು ಕೂಡ ಕಷ್ಟವಾಗುತ್ತಿತ್ತು. ಸನ್‌ಅ ಜಮಾಅತಿನವರೊಂದಿಗೆ ಈದ್ ನಮಾಝ್ ನಿರ್ವಹಿಸಲು, ಬಡ ಕುಟುಂಬಗಳಿಗೆ ಧನಸಹಾಯ ಮಾಡಲು ಮತ್ತು ಅವರ ಸಂತೋಷದಲ್ಲಿ ಭಾಗಿಯಾಗುವ ಉದ್ದೇಶದಿಂದ ಮಾತ್ರ ಅವರು ಈ ಯಾತ್ರೆಯನ್ನು ಮಾಡಿದ್ದರು. ಜಮಾಅತಿನ ಎಲ್ಲರೂ ಅವರ ಆಗಮನದಿಂದ ಸಂತೋಷಗೊಂಡಿದ್ದರು.

ಮುಂದಿನ ಜನಾಝ ಜಲ್ಸ ಸಾಲಾನ ಆಫೀಸಿನ ಅಕೌಂಟೆಂಟ್ ಆಗಿದ್ದ ಸನ್ಮಾನ್ಯ ಖುರೈಶಿ ಝಕಾಉಲ್ಲಾಹ್ ಸಾಹಿಬ್‌ರದ್ದಾಗಿದೆ. ಇವರು ಎಪ್ರಿಲ್ 9ರಂದು 87ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಖುರೈಶಿ ಸಾಹಿಬ್‌ರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಾತ ಮತ್ತು ಅವರ ಪತ್ನಿಯ ತಾತರಾದ ಹಝ್ರತ್ ಖುರ್ಶಿದ್ ಅಲಿ ಸಾಹಿಬ್ ರಝಿಯಲ್ಲಾಹು ಅನ್‌ಹುರ ಮೂಲಕ ಪ್ರವೇಶಿಸಿತ್ತು. ಹಝ್ರತ್ ಮಸೀಹ್ ಮೌಊದ್(ಅ) ಸಿಯಾಲ್‌ಕೋಟಿಗೆ ಹೋದಾಗ ಹಝ್ರತ್ ಖುರ್ಶಿದ್ ಅಲಿ ಸಾಹಿಬ್‌ರಿಗೆ 16ನೇ ವಯಸ್ಸಿನಲ್ಲಿ ಹಝ್ರತ್ ಮಸೀಹ್ ಮೌಊದ್‌ರ(ಅ) ಕೈಯಲ್ಲಿ ಬೈಅತ್ ಮಾಡುವ ಸೌಭಾಗ್ಯವನ್ನು ಪಡೆದಿದ್ದರು. ಖುರೈಶಿ ಸಾಹಿಬ್‌ರ ಪತ್ನಿ ಮೊದಲೇ ಮೃತಪಟ್ಟಿರುವರು. ಇವರಿಗೆ ಐವರು ಪುತ್ರಿಯರು ಮತ್ತು ಒಬ್ಬ ಮಗನು ಇದ್ದಾರೆ. ಮಗನು ಖುರ್‌ಆನ್ ಹಾಫಿಝ್ ಆಗಿರುವರು. ಯು.ಕೆ.ಯಲ್ಲಿ ಇದ್ದಾರೆ. ಒಬ್ಬ ಮಗಳು ಪಿ.ಎಸ್. ರಬ್ವದ ನಮ್ಮ ಕಾರ್ಯಕರ್ತೆಯಾಗಿರುವರು. ಮತ್ತೊಬ್ಬ ಮಗಳು ಮಾಂಚೆಸ್ಟರ್‌ನಲ್ಲಿ ಇದ್ದಾರೆ. ಮತ್ತೊಬ್ಬ ಮಗಳು ಮೃತಪಟ್ಟಿದ್ದಾಳೆ.

1954ರಲ್ಲಿ ಅವರು ಜಮಾಅತಿನ ಸೇವೆಯನ್ನು ಪ್ರಾರಂಭಿಸಿದ್ದರು. ರಿಲೀವಿಂಗ್ ಕ್ಲರ್ಕ್ ಆಗಿ ಸದರ್ ನಿಗ್ರಾನ್ ಬೋರ್ಡ್ ಆಗಿದ್ದ ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರ ಅಧೀನದಲ್ಲಿ ಆರಂಭದಲ್ಲಿ ಕೆಲಸ ಮಾಡಿದ್ದರು. 58 ವರ್ಷಗಳಿಗಿಂತ ಹೆಚ್ಚು ಕಾಲ ಅವರು ಸದರ್ ಅಂಜುಮನ್ ಅಹ್ಮದಿಯಾ ರಬ್ವದಲ್ಲಿ ಸೇವೆ ಸಲ್ಲಿಸಿದರು. ಅವರ ಮಗನಾದ ಹಾಫಿಝ್ ಶಮ್ಸುಝ್ಝುಹಾ ಹೇಳುತ್ತಾರೆ: ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರೊಂದಿಗೆ ಅವರಿಗೆ ಕೆಲಸ ಮಾಡುವ ಸೌಭಾಗ್ಯ ಸಿಕ್ಕಿತ್ತು ಮತ್ತು ಹಝ್ರತ್ ಮಿಯಾ ಬಶೀರ್ ಅಹ್ಮದ್ ಸಾಹಿಬ್‌ರ ಮನೆಗೆ ಹೋಗುತ್ತಿದ್ದರು. ಮೊದಲ ದಿನದಂದು ಅವರ ಮನೆಗೆ ಹೋದಾಗ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರು ಅವರೊಡನೆ ಕುಳಿತುಕೊಳ್ಳಲು ಹೇಳಿದರು. ಹಝ್ರತ್ ಮಸೀಹ್ ಮೌಊದ್‌ರ ಮಕ್ಕಳ ಮುಂದೆ ನಾನು ಹೇಗೆ ಕುಳಿತುಕೊಳ್ಳುವುದು ಎಂದು ಇವರು ಕೇಳಿದರು. ಆಗ ಮಿಯಾ ಬಶೀರ್ ಅಹ್ಮದ್ ಸಾಹಿಬ್‌ರು ಹೇಳಿದರು: ಅಲ್ ಅಮ್‌ರು ಫೌಖುಲ್ ಅದಬ್. ಎಂದರೆ ಕುಳಿತುಕೊಳ್ಳು ಎಂಬ ಆಜ್ಞಾಪನೆಯನ್ನು ಅನುಸರಿಸುವುದು ಗೌರವಾದರಕ್ಕಿಂತ ಶ್ರೇಷ್ಠ. ಆಗ ಅವರು ಕುಳಿತುಕೊಂಡರು. ನನ್ನ ತಂದೆಯವರು ಬಹಳ ಮೌನ ಸ್ವಭಾವಿಯಾಗಿದ್ದರು. ಐದು ಹೊತ್ತಿನ ನಮಾಝ್ ಪಾಲಿಸುತ್ತಿದರು. ಅದರೊಂದಿಗೆ ತಹಜ್ಜುದ್ ಕಟ್ಟುನಿಟ್ಟಾಗಿ ಅನುಷ್ಠಿಸುತ್ತಿದ್ದರು. ದಿವಂಗತರ ಹೆಸರುಗಳಲ್ಲಿ ಚಂದಾಗಳನ್ನು ಪಾವತಿ ಮಾಡುತ್ತಿದ್ದರು. ಕುಟುಂಬದ ಹಿರಿಯರನ್ನು ತನ್ನ ಮನೆಯಲ್ಲಿ ಇರಿಸಿಕೊಂಡು ಅವರ ಸೇವೆ ಮಾಡುತ್ತಿದ್ದರು. ಮಗನು ಹೇಳುತ್ತಾರೆ: ಅವರಲ್ಲಿ ಕೆಲವರ ಮರಣ ಸಹ ನಮ್ಮ ಮನೆಯಲ್ಲಿ ನಡೆದಿತ್ತು. ಖಿಲಾಫತ್‌ನೊಂದಿಗೆ ಬಹಳ ನಿಷ್ಠೆ ಮತ್ತು ಪ್ರೀತಿಯ ಸಂಬಂಧ ಇತ್ತು. ನಮ್ಮಲ್ಲೂ

ಇದು ಉಂಟಾಗುವಂತೆ ಪ್ರಯತ್ನಿಸುತ್ತಿದ್ದರು. ಬಾಲ್ಯದಲ್ಲಿ ನಮಾಝ್‌ಗಾಗಿ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಖ಼ಲೀಫತುಲ್ ಮಸೀಹರು ನನ್ನನ್ನು ಎಂದಾದರೂ ಕೆಲಸಕ್ಕಾಗಿ ಕರೆದರೆ, ಅದಕ್ಕಾಗಿ ಸದಾ ತಯಾರಾಗಿ ಇರಬೇಕೆಂದು ಹೆಚ್ಚಾಗಿ ಹೇಳುತ್ತಿದ್ದರು. ಕೆಲವು ಬಡವರ ಮನೆಯ ಖರ್ಚನ್ನು ಸಹ ಅವರು ವಹಿಸುತ್ತಿದ್ದರು. ಅವರ ಮಗಳಾದ ಅಮತುಸ್ಸಲಾಂ ಹೇಳುತ್ತಾರೆ: ನನ್ನ ತಂದೆಯವರು ತನ್ನ ಸ್ವಂತ ಸೊತ್ತಿನಂದ ಒಂದು ಪ್ಲಾಟ್ ಮಹಲ್ಲ ನಸೀರಾಬಾದ್ ಸುಲ್ತಾನ್ ರಬ್ವದಲ್ಲಿ ಮಸೀದಿ ನಿರ್ಮಾಣಕ್ಕಾಗಿ ಸದರ್ ಅಂಜುಮನ್ ಅಹ್ಮದಿಯಗೆ ಕೊಟ್ಟಿದ್ದರು. ಒಂದು ತಿಂಗಳಲ್ಲಿ ಎರಡು ಬಾರಿ ಸಾಮಾನ್ಯವಾಗಿ ಪವಿತ್ರ ಖುರ್‌ಆನ್ ಓದಿ ಪೂರ್ತಿ ಮಾಡುತ್ತಿದ್ದರು. ಐವರು ಪುತ್ರಿಯರು ಮತ್ತು ಒಬ್ಬ ಪುತ್ರರನ್ನು ಅಗಲಿರುವರು. ಎಲ್ಲ ಸಹೋದರ ಸಹೋದರಿಯರಿಗೆ ವಿದ್ಯಾಭ್ಯಾಸ ಒದಗಿಸಿದ್ದರು ಮತ್ತು ಉತ್ತಮ ತರಬೇತಿ ನೀಡಿದ್ದರು.

ಮುಂದಿನ ಜನಾಝ಼ ಕೆನಡದ ಸನ್ಮಾನ್ಯ ಮಲಿಕ್ ಖ಼ಾಲಿಕ್ ದಾದ್ ಸಾಹಿಬ್‌ರದ್ದಾಗಿದೆ. 85ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ತಾತರಾದ ಹಝ್ರ಼ತ್ ಶೇಖ಼್ ನೂರುದ್ದೀನ್ ಸಾಹಿಬ್ ತಾಜಿರ್ ಹಝ್ರ಼ತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾಗಿದ್ದರು. ಅವರ ತಂದೆಯ ತಂದೆ ಸನ್ಮಾನ್ಯ ಮೌಲಾ ದಾದ್ ಸಾಹಿಬ್‌ರು ಹಝ್ರ಼ತ್ ಖ಼ಲೀಫತುಲ್ ಮಸೀಹ್ ಅವ್ವಲ್‌ರ ಕೈಯಲ್ಲಿ ಬೈಅತ್ ಮಾಡಿಕೊಂಡು ಅಹ್ಮದಿಯ್ಯತ್ ಪ್ರವೇಶಿಸುವ ಸೌಭಾಗ್ಯವನ್ನು ಪಡೆದಿದ್ದರು. ಮಲಿಕ್ ಸಾಹಿಬ್‌ರು ದೀರ್ಘ ಕಾಲದ ವರೆಗೆ ಹಲ್ಕ ಸದರ್ ಆಗಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದಿದ್ದರು. ಕೆನಡದಲ್ಲಿ ಜಮಾಅತಿನ ಆರ್ಥಿಕ ವಿಭಾಗದಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆಯುತ್ತಿದ್ದರು. ಉಪವಾಸ, ನಮಾಝ್ ಪಾಲನೆ, ಸಹಾನುಭೂತಿ ಹೊಂದಿದ್ದ, ಕೃಪಾಳು ಬಡವರಿಗೆ ನೆರವು ಮಾಡುವ ಸಾತ್ವಿಕ ಮತ್ತು ನಿಷ್ಠಾವಂತ ವ್ಯಕ್ತಿಯಾಗಿದ್ದರು. ಚಂದಾ ಪಾವತಿ ಮತ್ತು ಆರ್ಥಿಕ ಯೋಜನೆಗಳಲ್ಲಿ ಭಾಗಿಯಾಗಲು ಸದಾ ಮುಂದಿರುತ್ತಿದ್ದರು. ಖ಼ಿಲಾಫತ್‌ನೊಂದಿಗೆ ವಿಶ್ವಾಸ ಮತ್ತು ಆವೇಶದ ಸಂಬಂಧವಿತ್ತು. ಇದನ್ನು ನಾನು ಸಹ ಅವರಲ್ಲಿ ನೋಡಿದ್ದೇನೆ. ಖ಼ಿಲಾಫತ್‌ನೊಂದಿಗೆ ಅಸಾಮಾನ್ಯವಾದ ಸಂಬಂಧವಿತ್ತು. ದಿವಂಗತರು ಅಲ್ಲಾಹನ ಅನುಗ್ರಹದಿಂದ ಪ್ರಾರಂಭದ ಮೂಸಿಗಳಲ್ಲಿ ಸೇರಿದ್ದರು. ದಿವಂಗತರು ಪತ್ನಿಯನಲ್ಲದೆ ನಾಲ್ವರು ಪುತ್ರರನ್ನು ಮತ್ತು ಮೂವರು ಪುತ್ರಿಯರನ್ನು ಅಗಲಿರುವರು. ಒಬ್ಬ ಮಗನು ಕೆನಡದ ನ್ಯಾಶನಲ್ ಆಮಿಲದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮುಂದಿನ ಪ್ರಸ್ತಾಪ ನಝ಼ಾರತ್ ಉಮೂರೆ ಆಮ್ಮದ ಉದ್ಯೋಗಿಯಾದ ಮುಹಮ್ಮದ್ ಸಲೀಂ ಸಾಹಿಬ್‌ರದ್ದಾಗಿದೆ. ಮಾರ್ಚ್ 27ರಂದು 77ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಸಲೀಂ ಸಾಹಿಬ್‌ರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಂದೆಯಾದ ಸಹಾಬಿ ಹಝ್ರ಼ತ್ ಮಿಯಾ ನೂರ್ ಮುಹಮ್ಮದ್ ಸಾಹಿಬ್‌ರ ಮೂಲಕ ಪ್ರವೇಶಿಸಿತ್ತು. ಅವರ ತಂದೆ ಖಾದಿಯಾನಿನ ಸಮೀಪ ಗ್ರಾಮವಾದ ವಂಜ್‌ವಾನಿನ ನಿವಾಸಿಯಾಗಿದ್ದರು. 1903ರಲ್ಲಿ ಅವರು ಸ್ವತಃ ಖಾದಿಯಾನಿಗೆ ಹೋಗಿ ಹಝ್ರ಼ತ್ ಮಸೀಹ್ ಮೌಊದ್‌ರ ಕೈಯಲ್ಲಿ ಬೈಅತ್ ಮಾಡಿದ್ದರು. 1962ರಿಂದ ಸದರ್ ಅಂಜುಮನ್ ಅಹ್ಮದಿಯಾದಲ್ಲಿ ಅವರ ನೇಮಿತರಾದರು. ಅನಂತರ 1968ರಲ್ಲಿ ಪ್ರೈವೆಟ್ ಸೆಕ್ರಟರಿ ಆಫಿಸ್‌ಗೆ ಅವರ ಟ್ರಾನ್ಸ್‌ಫರ್ ಆಯಿತು. ಹಝ್ರ಼ತ್ ಖ಼ಲೀಫತುಲ್ ಮಸೀಹ್ ಸಾಲಿಸ್(ರಹ್) ಸ್ವತಃ ತಮ್ಮ ಆಫೀಸ್‌ಗಾಗಿ ಅವರನ್ನು ಆಯ್ಕೆ ಮಾಡಿದ್ದರು. ಅನಂತರ 1987ರಿಂದ 2006ರ ವರೆಗೆ ಉಮೂರೆ ಆಮ್ಮದಲ್ಲಿ ಅಕೌಂಟಂಟ್ ಆಗಿದ್ದರು. ಅವರ ಸೇವೆಯ ಕಾಲಾವಧಿ ಸುಮಾರು 59 ವರ್ಷಗಳು ಆಗುತ್ತದೆ.

ದಿವಂಗತರು ಮೂಸಿಯಾಗಿದ್ದರು. ಅವರ ಸಹೋದರ ಪುತ್ರ ಮತ್ತು ಅಳಿಯ ಹೇಳುತ್ತಾರೆ: ಅವರು ತಹಜ್ಜುದ್ ನಿರ್ವಹಿಸುವ ಅಭ್ಯಾಸವನ್ನು ಹೊಂದಿದ್ದರು. ನಮಾಝ್‌ಗಳಲ್ಲಿ ಸಾಮಾನ್ಯವಾಗಿ ತಹಜ್ಜುದ್‌ನಲ್ಲಿ ವಿಶೇಷವಾಗಿ ಬಹಳ ನೋವಿನಿಂದ ದುಆ ಮಾಡುತ್ತಿದ್ದರು. ಒಟ್ಟಿಗೆ ಕುಳಿತುಕೊಳ್ಳುತ್ತಿದ್ದ ವ್ಯಕ್ತಿಯ ಹೃದಯ ಸಹ ಕರಗಿಹೋಗುತ್ತಿತ್ತು. ಹೊಸ ಪೀಳಿಗೆಗೆ ಖ಼ಲೀಫತುಲ್ ಮಸೀಹ್‌ರ ಅನುಸರಣೆ ಮಾಡುವ ಪಾಠವನ್ನು ಹೇಳಿಕೊಡುತ್ತಿದ್ದರು. ತಮ್ಮ ಆಫೀಸ್ ಟೈಮ್ ಅಲ್ಲದೇ ಕೂಡ ಆಫೀಸ್ ಕೆಲಸ ಮಾಡುತ್ತಿದ್ದರು. ಜಮಾಅತಿನ ಇತರರ ದುಃಖವನ್ನು, ಕಷ್ಟತೆಗಳನ್ನು ಸ್ವಂತ ದುಃಖ ಮತ್ತು ಕಷ್ಟತೆಯೆಂದು ಭಾವಿಸುತ್ತಿದ್ದರು. ಜನರ ಸಮಸ್ಯೆಗಳನ್ನು ಖ಼ಲೀಫತುಲ್ ಮಸೀಹ್‌ರ ಅನುಸರಣೆ ಮತ್ತು ಜಮಾಅತಿನ ಅನುಸರಣೆಯನ್ನು ಮುಂದಿರಿಸಿಕೊಂಡು ಪರಿಹರಿಸುತ್ತಿದ್ದರು. ಯಾವಾಗಲೂ ದುರೂದ್ ಶರೀಫ್‌ನ ದುಆ ಮಾಡುತ್ತಿದ್ದರು ಮತ್ತು ಮೌನವಾಗಿ ಬಡವರ ಸಹಾಯ ಮಾಡುತ್ತಿದ್ದರು. ಅನೇಕ ಸ್ವಭಾವ ವೈಶಿಷ್ಟ್ಯಗಳನ್ನು ಹೊಂದಿದ್ದರು.

ಮುಂದಿನ ಪ್ರಸ್ತಾಪ ಅಮೇರಿಕದ ಸಾಹಿಬ್‌ಝ಼ಾದ ಮಹ್‌ದಿ ಲತೀಫ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ನಈಮ ಲತೀಫ್ ಸಾಹಿಬರದ್ದಾಗಿದೆ. ಮಾರ್ಚ್ 5ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಅವರ ಪತಿಯಾದ ಸಾಹಿಬ್‌ಝ಼ಾದ ಮಹ್‌ದಿ ಲತೀಫ್ ಸಾಹಿಬ್‌ರು ಹಝ್ರ಼ತ್ ಸಾಹಿಬ್‌ಝ಼ಾದ ಅಬ್ದುಲ್ಲತೀಫ್ ಸಾಹಿಬ್ ಶಹೀದ್‌ರ ಮೊಮ್ಮಗನಾಗಿದ್ದರು. ದಿವಂಗತರು 1969ರಲ್ಲಿ ಪಿಶಾವರ್ ಯೂನಿವರ್ಸಿಟಿಯಿಂದ ಬೋಟನಿಯಲ್ಲಿ ಮಾಸ್ಟರ್ ಡಿಗ್ರಿ ಪಡೆದಿದ್ದರು. ಅನಂತರ ರಿಸರ್ಚ್ ಇನ್ಸ್ಟಿಟ್ಯೂಟ್ ಪಿಶಾವರ್‌ನಿಂದ ಬಾಟನಿ ಡಿಪಾರ್ಟ್‌ಮೆಂಟ್‌ನಲ್ಲಿ ರಿಸರ್ಚ್ ಕೆಲಸ ಶುರುಮಾಡಿದ್ದರು. 1972ರ ತನಕ ಅದರಲ್ಲಿ ಇದ್ದರು. 1970ರಲ್ಲಿ ಹಝ್ರ಼ತ್ ಖ಼ಲೀಫತುಲ್ ಮಸೀಹ್ ಸಾಲಿಸ್‌ರ ಮನವಿ ಪ್ರಕಾರ ನುಸ್ರತ್ ಜಹಾಂ ಅಧೀನದಲ್ಲಿ ವಖ್ಫ್ ಮಾಡಿದ್ದರು. ಅವರ ಕಿರಿಯ ಸಹೋದರ ಮಲಿಕ್ ಸಾಹಿಬ್ ಸಹ ನೈಜೀರಿಯಕ್ಕೆ ರವಾನೆಯಾಗಿದ್ದರು. 1975ರ ತನಕ ಅಲ್ಲಿ ನೆಲೆಸಿದ್ದರು. ಆ ವೇಳೆ ಅವರು ವಿಮೆನ್ ಅರಬಿಕ್ ಟೀಚರ್ಸ್ ಕಾಲೇಜ್ ವಸೂವಿನ ಪ್ರಿನ್ಸಿಪಲ್ ಆಗಿ ಸೇವೆ ಸಲ್ಲಿಸಿದರು. ಅನಂತರ ಅಲ್ಲಿಂದ ಮೇರಿಲ್ಯಾಂಡ್‌ಗೆ ಹೋದರು. ಅಲ್ಲಿ ಮೇರಿಲ್ಯಾಂಡ್‌ನಲ್ಲಿ ನಿರಂತರವಾಗಿ ಲಜ್ನದಲ್ಲಿ ಸೇವೆ ಸಲ್ಲಿಸುವ ಸಂದರ್ಭವನ್ನು ಪಡೆದರು. ಅಮೇರಿಕದ ನಾಇಬ್ ಲಜ್ನ ಸದರ್ ಆಗಿಯೂ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. ವಾಶಿಂಗ್‌ಟನ್ ಲಜ್ನದ ಅಧ್ಯಕ್ಷತೆಯ ಕರ್ತವ್ಯವನ್ನು ಸಹ ನೆರವೇರಿಸಿದರು. ಬಹಳವಾಗಿ ಪ್ರೀತಿಸುವವರು, ಇತರರ ದುಃಖ ಮತ್ತು ನೋವಿನಲ್ಲಿ ಭಾಗಿಯಾಗುವ ಸ್ತ್ರೀಯಾಗಿದ್ದರು. ದಿವಂಗತರು ಮೂಸಿಯಾಗಿದ್ದರು. ಪತಿಯನ್ನಲ್ಲದೆ ನಾಲ್ವರು ಸಹೋದರರು ಮತ್ತು ಸಹೋದರಿಯರನ್ನು ಅಗಲಿರುವರು. ಅವರಿಗೆ ಮಕ್ಕಳಿಲ್ಲ. ಅವರ ಒಂದು ಸಹೋದರ ಅಮೇರಿಕದ ನಾಇಬ್ ಅಮೀರ್ ಆಗಿರುವರು. ಒಬ್ಬರು ಅಮೇರಿಕದ ದಾರುಲ್‌ಖಝ಼ಾದಲ್ಲಿ ಕೆಲಸ ಮಾಡುತ್ತಿದ್ದಾರೆ.

ಮುಂದಿನ ಜನಾಝ಼ ಕೆನಡದ ಮುಹಮ್ಮದ್ ಶರೀಫ್ ಸಾಹಿಬ್‌ರ ಪತ್ನಿಯಾದ ಸಫಿಯ ಬೇಗಂ ಸಾಹಿಬರದ್ದಾಗಿದೆ. ಮಾರ್ಚ್ 11ರಂದು 80ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಪಿಶಾವರ್‌ನ ಮಾಜಿ ಮುರಬ್ಬಿಯಾಗಿದ್ದ ಸನ್ಮಾನ್ಯ ಮೌಲವಿ ಚಿರಾಗ್‌ದೀನ್ ಸಾಹಿಬ್‌ರ ಮಗಳಾಗಿದ್ದರು. ವಾಹ್‌ಕೇಂಟ್‌ನಲ್ಲಿ ದೀರ್ಘಕಾಲದ ವರೆಗೆ ಸದರ್ ಲಜ್‌ನ ಆಗಿ ಸೇವೆ ಸಲ್ಲಿಸುತ್ತಿದ್ದರು. ಅವರ ಪತಿ 1993ರಲ್ಲಿ ಒಂದು ಅಪಘಾತದಲ್ಲಿ ನಿಧನರಾಗಿದ್ದರು. ಪತಿಯ ಮರಣದ ನಂತರ ಅವರು ಮಕ್ಕಳ ಉತ್ತಮ ತರಬೇತಿ ಮಾಡಿದರು ಉಪವಾಸ ನಮಾಝ್ ಪಾಲನೆ ಮಾಡುವವರು, ತಹಜ್ಜುದ್ ನಿರ್ವಹಿಸುವವರು ಮತ್ತು ಕೃತಜ್ಞತೆಯುಳ್ಳ ಸ್ತ್ರೀಯಾಗಿದ್ದರು. ಬಹಳ ಸ್ನೇಹಮಯಿಯಾಗಿದ್ದರು. ಸಹಾನುಭೂತಿ ಹೊಂದಿದ್ದ ಸ್ತ್ರೀಯಾಗಿದ್ದರು. ಮೂರನೇ ಒಂದು ಭಾಗದ ವಸಿಯ್ಯತ್ ಸಹ ಮಾಡಿದ್ದರು. ದಿವಂಗತರು ನಾಲ್ವರು ಪುತ್ರಿಯರನ್ನು ಮತ್ತು ಒಬ್ಬ ಮಗನನ್ನು ಅಗಲಿರುವರು. ಅವರ ಎಲ್ಲ ಮಕ್ಕಳು ಯಾವುದಾದರೊಂದು ರೀತಿಯಲ್ಲಿ ಜಮಾಅತಿನ ಸೇವೆ ಮಾಡುವ ಸೌಭಾಗ್ಯವನ್ನು ಪಡೆಯುತ್ತಿದ್ದಾರೆ. ಅಲ್ಲಾಹನು ಎಲ್ಲ ದಿವಂಗತರೊಂದಿಗೆ ಕ್ಷಮೆ ಮತ್ತು ಕಾರುಣ್ಯದಿಂದ ವರ್ತಿಸಲಿ ಮತ್ತು ಅವರ ಪದವಿಗಳನ್ನು ಉನ್ನತಗೊಳಿಸಲಿ.

****************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅಂದ ಹಾಗೆ ನಮ್ಮ ಭಾವನೆಯ ಪ್ರಕಾರ ಕೇವಲ ಕಥೆ ಕಾದಂಬರಿಗಳಿಂದ ಯಾರು ಆಧ್ಯಾತ್ಮಿಕ ಜ್ಞಾನದಲ್ಲಿ ಪ್ರಗತಿ ಸಾಧಿಸಲು ಸಾಧ್ಯವಿಲ್ಲ. ಸ್ವಯಂ ಪರಿಶ್ರಮವಹಿಸದೇ ನೋಡಲು ಸಾಧ್ಯವಿಲ್ಲ. ಅದಾಗ್ಯೂ ಈ ನಮ್ಮ ಮಾರ್ಗ ಅನುಸರಿಸದೇ ಪಡೆಯಲು ಅಸಾಧ್ಯ. ಈ ಮಾರ್ಗದಲ್ಲಿ ಹೆಚ್ಚಿನ ಆಪತ್ತುಗಳು ಮತ್ತು ಪರಿಶ್ರಮಪಡುವ ಅಗತ್ಯವಿಲ್ಲ. ಇಲ್ಲಿ ಹೃದಯವು ಮುಖ್ಯವಾಗಿದೆ. ಅಲ್ಲಾಹನ ದೃಷ್ಟಿ ಹೃದಯದ ಮೇಲಿರುತ್ತದೆ. ಯಾವನ ಹೃದಯದಲ್ಲಿ ಅಲ್ಲಾಹನ (ದೇವನ ಪ್ರೀತಿ ಮತ್ತು ಪ್ರೇಮವಿರುತ್ತದೆಯೋ ಅವನಿಗೆ ಮೂರ್ತಿ ಏಕೆ ಬೇಕು? ವಿಗ್ರಹ ಪೂಜೆಯಿಂದ ಎಂದೂ ಮನುಷ್ಯನು ಸರಿಯಾದ ಮತ್ತು ದೃಢವಾದ ಪರಿಣಾಮಗಳು ಕಾಣಲು ಸಾಧ್ಯವಿಲ್ಲ. **(ಮಲ್ಫೂಝ಼ಾತ್ ಸಂಪುಟ–1, ಪುಟ–292, ಮುದ್ರಣ ಖಾದೊಯಾನ್ 2018)**

**ವಿಶೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609** (ವ್ಯವಸ್ಥಾಪಕರು)

**ಇನ್ಸಾನಿಯತ್ ಝಿಂದಾಬಾದ್**

**ಮಾನವೀಯತೆ ಚಿರಕಾಲ ಬಾಳಲಿ**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ವ್ಯಕ್ತಿತ್ವದೆಡೆ ಸಂಕೇತಿಸುತ್ತದೆ. ಅಂದರೆ ಯಾವ ರೀತಿ ರಾಜರುಗಳಿಗೆ ರಕ್ಷಕದಳಗಳು ಇರುತ್ತವೆಯೋ ಅದೇ ರೀತಿ ಹಝ್ರತ್ ರಸೂಲುಲ್ಲಾಹ್(ಸ) ರವರ ಹಿಂದೆ ಮುಂದೆ "ಮುಅಖ್ಖಿಬಾತ್" (ರಕ್ಷಕರು) ಇರುತ್ತವೆ. ಈ ಅರ್ಥದ ಪುಷ್ಠಿ ಒಂದು ಹದೀಸಿನಿಂದಲೂ ದೊರೆಯುತ್ತದೆ. ಅಂದ ಹಾಗೆ ಅಬೂ ಸಯೀಮ್ ಅವರು "ಅದ್ದಲಾಮುಲ್" ನಲ್ಲಿ ಮತ್ತು ವೆಬ್ರಾನಿ ತನ್ನ "ಮಅಜಮ್ ಕಬೀರ್" ನಲ್ಲಿ ಬರೆಯುತ್ತಾರೆ. ಆಮಿರ್ ಇಬ್ನು ತುಫೇಲ್ ಮತ್ತು ಅರ್‌ಬದ್ ಇಬ್ನು ಖೇಸ್ ಇಬ್ಬರು ವ್ಯಕ್ತಿಗಳು ಹುಝೂರ್(ಸ) ರ ಬಳಿ ಬಂದರು. ಆಮಿರ್ ಹೇಳಿದರು. ನಾನು ಮುಸಲ್ಮಾನನಾದರೆ ಪಟ್ಟಾಧಿಕಾರ ವಿಷಯ ಬಂದಲ್ಲಿ, ತಮ್ಮ ನಂತರ ಖಿಲಾಫತ್ ನನಗೆ ದೊರೆಯಬಹುದೇ? ಹುಝೂರ್(ಸ) ಹೇಳಿದರು. ನಿಮ್ಮ ಈ ಶರತ್ತಿನ ಪರಿಣಾಮ ಏನಾಗುವುದೆಂದರೆ ನಿಮಗೆ ಮತ್ತು ನಿಮ್ಮ ಸಮುದಾಯಕ್ಕೆ ಖಿಲಾಫತ್ ಎಂದೂ ದೊರೆಯದು. ಆಗ ಅವರು ಈ ಮಾತಿನಿಂದ ಅಸತುಂಷ್ಟರಾಗಿ ಹೇಳಿದರು. ಹಾಗಾದರೆ ನಾನು ಎಂತಹ ಸವಾರರುಗಳನ್ನು ತರುವೆನೆಂದರೆ ನಿಮಗೆ ನೆನಪಿಡಬೇಕಾದೀತು. ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. ಅಲ್ಲಾಹನು ಆ ಶಕ್ತಿಯೇ ನಿಮಗೆ ನೀಡಲಿಕ್ಕಿಲ್ಲ. ಆಗ ಆ ಇಬ್ಬರು ಅಸಂತುಷ್ಟರಾಗಿ ಅಲ್ಲಿಂದ ಹೊರಟುಹೋದರು. ದಾರಿಯಲ್ಲಿ ಅರ್‌ಖದ್ ಬಂದು ಹೇಳಿದರು. ಬನ್ನಿ ಮತ್ತೆ ಮರಳಿ ಹೋಗೋಣ. ನಾನು ಮುಹಮ್ಮದ್(ಸ) ರವರನ್ನು ಮಾತುಗಳಲ್ಲಿ ತೊಡಗಿಸುತ್ತೇನೆ. ಹಿಂದಿನಿಂದ ಬಂದು ಖಡ್ಗದಿಂದ ನೀವು ಕೆಲಸ ಮುಗಿಸಿಬಿಡಿ. ಆಮಿರ್ ಹೇಳಿದರು. ಅದರಲ್ಲಿ ತುಂಬ ಅಪಾಯವಿದೆ. ಅವರ ಸಂಗಡಿಗರು ನಮ್ಮ ಹತ್ಯೆ ಮಾಡುವರು. ಅವನು ಉತ್ತರ ಕೊಟ್ಟನು. ಯಾವ ಅಪಾಯವಿಲ್ಲ. ನಾವು "ದೇತ್" ಕೊಡುವೆವು. ಅಂದ ಹಾಗೆ ಅವರಿಬ್ಬರು ಮರಳಿದರು. ಅರ್‌ಬದ್ ಹಝ್ರತ್ ರಸೂಲುಲ್ಲಾಹ್(ಸ) ರೊಡನೆ ಮಾತನಾಡತೊಡಗಿದರು. ಆಮೀರ್ ಹಿಂದಿನಿಂದ ಖಡ್ಗ ಎತ್ತಿದ. ಆದರೆ ಆಕ್ರಮಣ ಮಾಡಲಾಗಲಿಲ್ಲ. ಹದೀಸುಗಳಲ್ಲಿ ಬರುತ್ತದೆ. ಅವನ ಕೈ ಸೋತು ಹೋಯಿತು. ಕೆಲವು ಹದೀಸುಗಳಲ್ಲಿ ಹೀಗೂ ವಿವರವಿದೆ. ಅವನು ಸವಾರನಾಗಿ ಹೋದ ಕೈಯನ್ನು ಸಹ ಬಳಕೆ ಮಾಡಿದ ಅದರಿಂದ ತಿಳಿದುಬರುವುದೇನೆಂದರೆ ಕೈಸೋತು ಹೋಗಲಿಲ್ಲ. ಬದಲು ಅಲ್ಲಾಹನು ಅವನ ಹೃದಯದಲ್ಲಿ ಎಂತಹ ಭಯವನ್ನು ಹುಟ್ಟಿಸಿದನೆಂದರೆ ಅವನಿಗೆ ಆಕ್ರಮಣ ಮಾಡಲು ಧೈರ್ಯವೇ ಬರಲಿಲ್ಲ. ಹಝ್ರತ್ ರಸೂಲುಲ್ಲಾಹ್(ಸ) ರವರ ಪ್ರತಾಪದಿಂದ ಅವನ ಕೈ ನಿಂತ ಹಾಗೆಯೇ ನಿಂತು ಬಿಟ್ಟಿತು. ಅಷ್ಟರಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ತಿರುಗಿ ನೋಡುತ್ತಾರೆ. ಅವನು ಕೈಯಲ್ಲಿ ಖಡ್ಗ ಹಿಡಿದಿಟ್ಟುಕೊಂಡಿದ್ದನು. ಹುಝೂರ್(ಸ) ರಿಗೆ ಅವನ ಇಂಗಿತ ತಿಳಿಯಿತು. ಮತ್ತು ಅಲ್ಲಿಂದ ಹಿಂದೆ ಸರಿದರು. ಆದರೆ ಅವರಿಬ್ಬರೊಂದಿಗೆ ಏನೂ ಪ್ರಸ್ತಾಪಿಸಲಿಲ್ಲ. ಅನಂತರ ಅವರಿಬ್ಬರೂ ಅಲ್ಲಿಂದ ಹೊರಟು ಹೋದರು. ಅರ್‌ಖದ್ ಮೇಲೆ ರಸ್ತೆಯಲ್ಲಿ ಸಿಡಿಲು ಬಡಿಯಿತು. ಮತ್ತು ಆಮೀರ್ ಕಾರ್‌ಬಂಕಲಿನಿಂದ ಸತ್ತು ಹೋದನು. ಸಹಾಬರು ಹೇಳುತ್ತಾರೆ. ನಾವು ಇಂತಹ ಸಂದರ್ಭಗಳಲ್ಲಿ "ಲಹು ಎಂಬ ವಚನ ದೃಢಿಕರಿಸುತ್ತಿದ್ದೆ. ಈ (ರೂಹುಲ್ ಮಾಆನಿ) ಈ ವರದಿಯಿಂದ ತಿಳಿದುಬರುವುದೇನೆಂದರೆ ಸಹಾಬರು ಈ ವಚನವನ್ನು ಸಾಮನ್ಯವಲ್ಲದೇ ರಸೂಲೆ ಕರೀಂ(ಸ) ಅವರಿಗಾಗಿ ವಿಶಿಷ್ಠವಾದುದೆಂದು ಭಾವಿಸುತ್ತಿದ್ದರು.

ರಸೂಲೆ ಕರೀಂ(ಸ) ರವರ ಪ್ರವಾದಿತ್ವದ ಕಾಲವೆಲ್ಲ ಈ ರಕ್ಷಣಾ ಮಾದರಿಗೆ ಪುರಾವೆಯಾಗಿವೆ. ಅಂದ ಹಾಗೆ ಪವಿತ್ರ ಮಕ್ಕದಲ್ಲಿ ಅವರ ರಕ್ಷಣೆ ಮಲಕುಗಳೇ (ದೇವದೂತರೇ ಮಾಡುತ್ತಿದ್ದರು). ಇಲ್ಲದಿದ್ದರೆ ಅಷ್ಟೆಲ್ಲಾ ಶತ್ರುಗಳ ನಡುವೆ ಸುತ್ತುವರಿಯಲ್ಪಟ್ಟು ಅವರು ಜೀವಿಸಲು ಹೇಗೆ ಸಾಧ್ಯವಿತ್ತು. ಹೌದು ಮದೀನದಲ್ಲಿ ಎರಡೂ ರೀತಿಯ ರಕ್ಷಣೆ ಅವರಿಗೆ ಲಭ್ಯವಿತ್ತು. ದೈವಿಕ ಮಲಕುಗಳ ಮತ್ತು ಸಹಾಬರ.

ಬದರ್ ಯುದ್ಧವು ಈ ಬಾಹ್ಯ ಮತ್ತು ಆಂತರಿಕ ರಕ್ಷಣೆಗೆ ಉತ್ತಮ ಉದಾಹರಣೆಯಾಗಿದೆ. ಹುಝೂರ್(ಸ) ಮದೀನಕ್ಕೆ ಆಗಮಿಸುವಾಗ ಮದೀನದವರೊಂದಿಗೆ ಒಂದು ಒಡಂಬಡಿಕೆ ಮಾಡಿಕೊಂಡಿದ್ದರು. ಒಂದು ವೇಳೆ ನಾವು ಮದೀನದಿಂದ ಹೊರಗೆ ಹೋಗಿ ಯುದ್ಧ ಮಾಡಿದರೆ, ಮದೀನದವರು ನಮಗೆ ನೆರವು ನೀಡಲು ಬಾಧ್ಯಸ್ಥರಲ್ಲ, ಬದರ್ ಯುದ್ಧದಲ್ಲಿ ನಬಿ(ಸ) ಅನ್‌ಸಾರ್ ಮತ್ತು ಮಹಾಜಿರೀನ್ ಅವರಿಂದ ಯುದ್ಧದ ಸಲುವಾಗಿ ಸಲಹೆ ಕೇಳಿದರು. ಮುಹಾಜಿರೀನ್ ಪದೇ ಪದೇ ಮುಂದಾಗಿ ಯುದ್ಧಕ್ಕಾಗಿ ಒತ್ತುಕೊಡುತ್ತಿದ್ದರು. ಆದರೆ ಹುಝೂರ್ ಅವರ ಈ ಮಾತುಗಳನ್ನು ಕೇಳಿಯೂ ಮತ್ತೆ ಪ್ರಸ್ತಾಪಿಸುತ್ತಿದ್ದರು. ಓ ಜನರೇ ನನಗೆ ಸಲಹೆ ನೀಡಿ, ಆಗ ಒಬ್ಬ ಅನ್ಸಾರಿ (ಸಅದ್-ಬಿನ್ ಮುಆಝ್) ಹೇಳಿದರು. "ಹುಝೂರರ ಇಂಗಿತ ನಮ್ಮ ಕಡೆ ಇದೆಯೇ, ಹುಝೂರ್ ಹೇಳಿದರು. ಹೌದು. ಆಗ ಅವರು ಹೇಳಿದರು. ನಿಸ್ಸಂಶಯವಾಗಿಯೂ ನಾವು ಹುಝೂರರೊಡನೆ ಒಪ್ಪಂದ ಮಾಡಿಕೊಂಡಿದ್ದೇವೆ. ಹೊರಗೆ ಯುದ್ಧ ಮಾಡುವ ಸಂದರ್ಭ ಬಂದರೆ ನಾವು ತಮಗೆ ಸಹಕಾರ ಕೊಡಲು ಬಾಧ್ಯಸ್ಥರಲ್ಲ ಎಂದು, ಆದರೆ ಆ ಸಮಯ ಬೇರೆಯೇ ಆಗಿತ್ತು. ಇದೀಗ ನಾವು ಕಣ್ಣಾರೆ ನೋಡಿದ್ದೇವು. ನೀವು ಅಲ್ಲಾಹನ ಸತ್ಯ ಪ್ರವಾದಿಯಾಗಿದ್ದೀರಿ ಎಂದು, ಈಗ ಈ ಸಲಹೆ ಕೇಳುವ ಅಗತ್ಯವೇ ಇಲ್ಲ. ಹುಝೂರ್ ನಮಗೆ ಆಜ್ಞೆ ಮಾಡಿದರೆ ನಾವು ತಮ್ಮ ಕುದುರೆಗಳನ್ನು ಸಮುದ್ರಕ್ಕೆ ಹಾಕುವೆವು. ನಾವು ಮೂಸಾ(ಅ) ರವರ ಸಹಾಬರವರ ಹಾಗೆ ಹೇಳುವವರಲ್ಲ. 'ನೀನು ಮತ್ತು ನಿನ್ನ ದೇವನು ಹೋಗಿ ಯುದ್ಧ ಮಾಡಿರಿ, ನಾವು ಇಲ್ಲಿ ಕುಳಿತುಕೊಂಡಿರುತ್ತೇವೆ.' ಬದಲು ನಾವು ಹುಝೂರರ ಎಡ, ಬಲ, ಹಿಂದೆ ಮುಂದೆಯೂ ಹೋರಾಡುವೆವು, ಶತ್ರುಗಳು ನಮ್ಮ ಶವಗಳನ್ನು ತುಳಿದು ದಾಟಿ ಹೋಗುವವರೆಗೆ ನಿಮ್ಮತ್ತ ತಲುಪಲಾರರು.

ಈ ನಿಷ್ಠರನ್ನು ಕೂಡಾ ನನ್ನ ದೃಷ್ಟಿಯಲ್ಲಿ ಅಲ್ಲಾಹನು ಹುಝೂರರ ರಕ್ಷಣೆಗಾಗಿ ನಿಯೋಜಿಸಿದ್ದ ಆ ಮುಅಖ್ಖಿಬಾತಿನಲ್ಲಿ ಶಾಮೀಲಾದವರಾಗಿದ್ದ್ರು, ಓರ್ವ ಸಹಾಬಿ ಹೇಳುತ್ತಾರೆ. ನಾನು ಹಝ್ರತ್ ರಸೂಲುಲ್ಲಾಹ್(ಸ) ರವರ ಜೊತೆಯಲ್ಲಿ 13 ಯುದ್ಧಗಳಲ್ಲಿ ಪಾಲ್ಗೊಂಡಿರುತ್ತೇನೆ. ಆದರೆ ನನ್ನ ಮನಸ್ಸಿನಲ್ಲಿ ಈ ಅಭಿಲಾಷೆ ಉಕ್ಕಿಬರುತ್ತಿತ್ತು. ನಾನು ಇಷ್ಟೆಲ್ಲ ಯುದ್ಧಗಳಲ್ಲಿ ಭಾಗವಹಿಸುವ ಬದಲು ಸಅದ್ ಬಿನ್ ಮಾಆಝ್ ಹೇಳಿರುವಂತಹ ಆ ಮಾತುಗಳು ನನ್ನ ಬಾಯಿಯಿಂದ ಹೊರಡಬೇಕಿತ್ತು.

**(ತಫ್ಸೀರ್ ಕಬೀರ್ ಸಂ 3, ಪು, 391, ಮುದ್ರಣ ಖಾದಿಯಾನ್ 2010)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ನನಗೆ ಅರಬಿ ಏನೂ ತಿಳಿಯುವುದಿಲ್ಲ ಎಂದು ಭಾವಿಸಿಕೊಂಡಿದ್ದಾರೆ. ಹಾಗಿದ್ದರೆ ನನ್ನ ಎದುರಿಗೆ ಬಂದು ಸ್ಪರ್ಧಿಸಿ ತೋರಿಸಿದರೆ ತಂತಾನೇ ನನ್ನ ಬಲ್ಲ ವಾದಗಳಿಗೆ ವಿರಾಮ ಹಾಕಿದಂತಾಗುವುದು. ಆದರೆ ಶೇಖ್ ಸಾಹಿಬರು ಏಕೆ ಈ ಕಡೆ ಲಕ್ಷ್ಯವಹಿಸುತ್ತಿಲ್ಲ. ಯಾವ ತೊಂದರೆ ನಿಮಗೆ ಅಡ್ಡಿಯಾಗಿದೆ. ಅಂದ ಹಾಗೆ ಅವರ ಅರಬಿ ಭಾಷೆಯ ಅಜ್ಞಾನತೆಯೇ ಅವರಿಗೆ ಬಹುದೊಡ್ಡ ತೊಡಕಾಗಿದೆ. ಅದಕ್ಕೆ ಅವರು ಗೊಂದಲದಲ್ಲಿದ್ದಾರೆ. ಆದುದರಿಂದ ನನ್ನನ್ನು ಅವರು ಖಂಡಿತವಾಗಿಯೂ ಎದುರಿಸಲಾರರು. (ಸಿರ್‍ರುಲ್ ಖಿಲಾಫ್ ರೂಹಾನಿ ಖಝಾಯಿನ್ ಸಂಪುಟ 8, ಪುಟ 415).

**ನಾವು ಮುಹಮ್ಮದ್ ಹುಸೇನ್ ಅವರು ಸಿರ್‍ರುಲ್ ಖಿಲಾಫ್ ಗ್ರಂಥ ಎದುರಾಗಿ ಒಂದು ಗ್ರಂಥ ರಚಿಸಿ ತೋರಿಸಿದರೆ ಅವರಿಗೆ ಮಹಾಪಂಡಿತರು ಮತ್ತು ಸಾಹಸಿ ಎಂದು ಸ್ವೀಕರಿಸುವೆವು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಅತ್ಯಂತ ಶುಭವನ್ನು ಬಯಸುತ್ತ ಮತ್ತೊಮ್ಮೆ ಅಂತಿಮವಾಗಿ ನಿಮ್ಮನ್ನು ಆಹ್ವಾನಿಸುತ್ತೇನೆ. ಹಿಂದಿನ ಗ್ರಂಥಗಳ ಪೈಕಿ ನಿರಾಶೆಗೊಳ್ಳುತ್ತ 'ಸಿರ್‍ರುಲ್ ಖಿಲಾಫ್" ಗ್ರಂಥದೆಡೆ ಶೇಖ್ ಸಾಹಿಬರಿಗೆ ಕರೆ ನೀಡುತ್ತೇವೆ. ನಿಮಗಾಗಿ 27 ದಿನಗಳ ಕಾಲಾವಧಿ ಮತ್ತು 27 ರೂಪಾಯಿಗಳ ನಗದು ಬಹುಮಾನ ನಿಗದಿಪಡಿಸಿರುತ್ತೇನೆ. ಈ ರೂಪಾಯಿಗಳನ್ನು ನೀವು ಬಯಸಿದರೆ ನಿಮ್ಮ ಸುಪರ್ಧಿಗೆ ಒಪ್ಪಿಸಲು ನಾವು ಸಿದ್ಧನಿದ್ದೇವೆ. ನಾವು ಕೊಡದಿದ್ದರೆ ನಮ್ಮನ್ನು ಸುಳ್ಳುಗಾರರೆನ್ನಬಹುದು. ನೀವು ನಮ್ಮ ಕರ ಪತ್ರಕ್ಕೆದುರಾಗಿ 27 ದಿನಗಳಲ್ಲಿ ಒಂದು ಪತ್ರಿಕೆ ಬರೆದು ಮುದ್ರಿಸುವೆನು ಎಂದು ಪ್ರಮಾಣಿಕರಿಸಿದರೆ ನಾವು ಮುಂಚಿತವಾಗಿ ಸಹ ಹಣ ನೀಡಬಹುದಾಗಿದೆ. ನೀವು ನಿಗದಿತ ಅವಧಿಯ ಒಳಗೆ ಪತ್ರಿಕೆ ಬರೆದು ಪ್ರಕಟಪಡಿಸಿದರೆ ನಾವು ಕೇವಲ 27 ರೂಪಾಯಿ ಬಹುಮಾನ ನಿಮಗೆ ನೀಡುವುದಿಲ್ಲ. ಬದಲು ಸಾರ್ವಜನಿಕವಾಗಿ ಜಾಹೀರಾತು ಪ್ರಕಟಿಸುತ್ತೇವೆ. ನಾವು ಇಲ್ಲಿಯತನಕ ಅವರಿಗೆ ಬರೀ ಶೇಖ್ ಶೇಖ್ ಎಂದು ಕರೆದಿದ್ದೇವೆ. ಮೌಲ್ವಿ ಮುಹಮ್ಮದ್ ಹುಸೇನ್ ಎಂದು ಕರೆಯದಿದ್ದುದ್ದು ನಮ್ಮ ಘೋರವಾದ ತಪ್ಪಾಗಿದೆ, ಅವರು ನಿಜವಾಗಿಯೂ ಮಹಾಪಂಡಿತರಾಗಿದ್ದಾರೆ ಮತ್ತು ಸಾಹಿತಿಗಳಾಗಿದ್ದಾರೆ. ಅವರು ಯಾವ ಹದೀಸಿನ ಕುರಿತು ಏನು ಅರ್ಥ ಹೇಳುವರೋ ಅದನ್ನು ನಾವು ಸರಿ ಎಂದು ಸ್ವೀಕರಿಸುವೆವು. (ಸಿರ್‍ರುಲ್ ಖಿಲಾಫ್, ರೂಹಾನಿ ಖಝಾಯಿನ್ ಸಂಪುಟ-8, ಪುಟ-417)

**ಮುಸಲ್ಮಾನರಿಗೆ ಉಪದೇಶ ನೀಡುತ್ತಾ ಹೇಳಿದರು. ನೀವು ಮೌಲ್ವಿಗಳಿಗೆ ನೂರುಲ್ ಹಖ್ ಕರಾಮತುಸ್ಸಾದಿಖೀನ್ ಮತ್ತು ಸಿರ್‍ರುಲ್ ಖಿಲಾಫ್ ಬಗ್ಗೆ ಮತ್ತೆ ಮತ್ತೆ ಪ್ರಸ್ತಾಪಿಸಿ ಅವರಿಗೆ ಅವಮಾನಗೊಳಿಸಿರಿ.**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

ಮುಸಲ್ಮಾನರಿಗೆ ಅವಶ್ಯವಾದುದೇನೆಂದರೆ, ಆ ನಾಮಧಾರಿ ಮೌಲ್ವಿಗಳು ತಮ್ಮ ಭಾಷಣಗಳಿಂದ ಮತ್ತು ತಮ್ಮ ಪತ್ರಿಕೆಗಳಿಂದ ಜನರ ದಿಕ್ಕು ತಪ್ಪಿಸುವುದನ್ನು ಒಂದು ಕಸುಬನ್ನಾಗಿ ಮಾಡಿಕೊಂಡಿದ್ದಾರೆ. ಅವರನ್ನು ಸರಿಯಾಗಿ ಹಿಡಿದು ಕೇಳಿರಿ. ಅವರು ಎಂದಾದರೂ ಭಾಷಣ ಮಾಡಲಿಕ್ಕೆ ಬಂದರೆ ಅವರಲ್ಲಿ ವಿನಮ್ರದಿಂದ ಈ ಪ್ರಶ್ನೆಯನ್ನು ಕೇಳಿ. ನೀವು ನಿಜವಾಗಿಯೂ ಮೌಲ್ವಿಗಳೇ ಅಥವಾ ಹೊಟ್ಟೆಪಾಡಿಗಾಗಿ ಆದ ಮೌಲ್ವಿಗಳೇ ಎಂದು. ನೀವು ನೂರುಲ್ ಹಖ್ ಗ್ರಂಥಗಳಿಗೆ ಉತ್ತರ ಬರೆದಿರುವರೇ, ಕರಾಮತುಸ್ಸಾದಿಖೀನ್ ಗ್ರಂಥಕ್ಕೆ

ಉತ್ತರ ಬರೆದಿರುವಿರೋ, ಅಥವಾ ಸಿರ್‍ರ್ರುಲ್ ಖಿಲಾಫ್ ಎದುರಾಗಿ ಯಾವುದಾದರೂ ಪತ್ರಿಕೆ ಹೊರಡಿಸಿರುವಿರೋ, ನಿಶ್ಚಯವಾಗಿಯೂ ನೆನಪಿಡಿರಿ. ಇವರುಗಳು ಮೌಲ್ವಿಗಳಲ್ಲ, ಮುಸಲ್ಮಾನರಿಗೆ ಅವಶ್ಯವಾದುದೇನೆಂದರೆ ನೂರುಲ್ ಹಖ್ ಇತ್ಯಾದಿ ಗ್ರಂಥಗಳನ್ನು ತಮ್ಮ ಬಳಿ ಇರಿಸಿಕೊಳ್ಳಿ. ಪಾದರಿಗಳಿಗೆ ಮತ್ತು ಅದೇ ಜಾತಿಗೆ ಸೇರಿದವರಾದ ಮೌಲ್ವಿಗಳಿಗೆ ಆ ಮೂಲಕ ಅಪರಾದಿಯನ್ನಾಗಿ ಮಾಡುತ್ತೀರಿ ಮತ್ತು ಅವರ ರಹಸ್ಯ ಬಯಲು ಮಾಡಿ ಇಸ್ಲಾಮ್ ಧರ್ಮವನ್ನು ಅವರ ಪಿತೂರಿಯಿಂದ ರಕ್ಷಿಸಿರಿ. ಸರಿಯಾಗಿ ಯೋಚಿಸಿಕೊಳ್ಳಿ. ಅವರು ಮೌಲ್ವಿಯ ಹೆಸರಿನಿಂದ ಮೋಸಗೊಳಿಸಿ ನೂರಾರು ಮುಸಲ್ಮಾನರನ್ನು ಕಾಫಿರರನ್ನಾಗಿ ಮಾಡಿದ್ದಾರೆ ಮತ್ತು ಇಸ್ಲಾಮ್ ಧರ್ಮದಲ್ಲಿ ಒಂದು ಗೊಂದಲವನ್ನು ಸೃಷ್ಟಿಸಿದ್ದಾರೆ. (ಸಿರ್ರುಲ್ ಖಿಲಾಫ್, ರೂಹಾನಿ ಖಝಾಯಿನ್, ಸಂಪುಟ–8, ಪುಟ–418)

**ಎಲ್ಲ ವಿರೋಧಿಗಳಿಗೆ ಮತ್ತು ಶತ್ರು ಗುಂಪುಗಳಿಗೆ ತನ್ನ ಎದುರಾಗಿ ಅರಬಿ ಬರಹ ಹಾಗೂ ಗ್ರಂಥವನ್ನು ರಚಿಸಲು ಪಂಥಹ್ವಾನ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಮತ್ತೊಮ್ಮೆ ನಾನು ಅಲ್ಲಾಹನ ಆಜ್ಞೆಯನ್ವಯ ಎರಡು ಗ್ರಂಥಗಳು ಅರಬಿಯಲ್ಲಿ ಬರೆದಿರುತ್ತೇನೆ. ಮತ್ತು ನಾನು ಹೇಳುವೆನು. ಓ ನನ್ನ ಶತ್ರುಗಳೇ, ಓ ದೊಡ್ಡ ದೊಡ್ಡ ವಾದಗಳನ್ನು ಮಾಡುವರೇ, ಡಂಬಚಾರಿಗಳೇ, ನೀವು ನಿಜವಾಗಿ ಜ್ಞಾನಿಗಳು ಮತ್ತು ಸಾಹಿತಿಗಳಾಗಿದ್ದಲ್ಲಿ (ನಿಮ್ಮ ವಾದದಲ್ಲಿ ಸತ್ಯವಂತರಾಗಿದ್ದಲ್ಲಿ) ಈ ಗ್ರಂಥಗಳ ಪ್ರತಿಲಿಪಿ ಪ್ರಸ್ತುತಪಡಿಸಿರಿ ಎಂದಾಗ ಅವರೆಲ್ಲರೂ ಕುಳಿತುಕೊಂಡರು. ಎಲ್ಲ ಖರ್ಚಾದ ನಂತರ ಎಚ್ಚರಗೊಂಡವರ ಹಾಗೆ ಸಾಲದ ಹೊರೆ ಕೊರಳಲ್ಲಿ ಹಾಕಿಕೊಂಡು, ಸಾಲ ಕೊಟ್ಟವನು ಸಾಲ ಕೇಳಿದಾಗ ಸುಳ್ಳು ಮತುಗಳಲ್ಲದೇ ಏನೂ ಹೇಳಲು ಸಾಧ್ಯವಿಲ್ಲದವರಂತೆ, ಹೀಗೆ ಅಲ್ಲಾಹನು ಅಹಂಕಾರಪಡುವವರಿಗೆ ಅಪಮಾನಿಸುವನು. (ಸಿರ್‍ರ್ರುಲ್ ಖಿಲಾಫ ಸಂಪುಟ–8, ಪುಟ–323).

ಮೌಲ್ವಿಗಳಿಗೆ ಯಾವ ರೀತಿಯ ಅವಮಾನವಾಯಿತೆಂದರೆ ಅವರ ಮೌಲ್ವಿತನ ಹೆಸರಿಲ್ಲದಂತೆ ಅಳಿಸಿಹೋಯಿತು. ಮೌಲ್ವಿ ಅಬ್ದುಲ್ ಹಕ್‌ರವರ ಒಂದು ಆಕ್ಷೇಪದ ಉತ್ತರದಲ್ಲಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಇದೀಗ ಸ್ಪಷ್ಟವಾಗಿದೆ ನಾವು ಅದೇ 15 ತಿಂಗಳುಗಳ ಅವಧಿಯ ಒಳಗೆ ಎಲ್ಲ ಕಾಫಿರ್ ಎನ್ನುವ ಮೌಲ್ವಿಗಳಿಗೆ ಅವರ ಮೌಲ್ವಿತನ ಪರೀಕ್ಷಿಸಲು ತನ್ನ ಎದುರಿನಲ್ಲಿ ಅರಬಿ ಗ್ರಂಥ ಬರೆಯಲು ಸಂಬೋಧಿಸಿದ್ದೆ. ಏಕೆಂದರೆ ಅವರ ಮಾನ ಹೊರ ಬರಲಿ ಎಂದು. ಅಂದ ಹಾಗೆ ಅಲ್ಲಾಹನು ತನ್ನ ಅಭಯವನ್ನು ನೀಡಿ ಅದರಲ್ಲಿ ನನ್ನನ್ನು ವಿಜಯಿಯನ್ನಾಗಿ ಮಾಡಿದನು. ಪಾದರಿಗಳ ಹಾಗೆ ಈ ಮೌಲ್ವಿಗಳು ಸಹ ನೂರುಲ್ ಹಖ್, ಕರಾಮತುಸ್ಸಾದಿಖೀನ್ ಮತ್ತು ಸಿರ್ರುಲ್ ಖಿಲಾಫ್ ಗ್ರಂಥಗಳ ಉತ್ತರ ಬರೆಯಲು ವಿಫಲರಾದರು. ಅವರಿಗೆ ಯಾವ ರೀತಿಯ ಅವಮಾನವಾಯಿತೆಂದರೆ ಅವರ ಮೌಲ್ವಿತನದ ಹೆಸರು ಅಳಿಸಿ ಹೋದಂತಾಯಿತು. (ಅನ್ವಾರುಲ್ ಇಸ್ಲಾಮ್, ರೂಹಾನಿ ಖಝಾಯಿನ್, ಸಂಪುಟ–9, ಪುಟ–33).

ಮುಂದಿನ ಸಂಚಿಕೆಯಲ್ಲಿ ಇನ್‌ಶಾಅಲ್ಲಾಹ್ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಹ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಅಲ್ಲಾಹನ ಆಜ್ಞೆ ಪಾಲನೆ ಮಾಡುವವರಾಗಿದ್ದರಿಂದ ಸದಾ ಅಲ್ಲಾಹನ ಔದಾರ್ಯ ಮತ್ತು ಅನುಗ್ರಹ ಪಡೆಯುವವರಾಗುತ್ತಾರೆ. ಮತ್ತೆ ಅಲ್ಲಾಹನು ನುಡಿದನು. **ವಮೈಂ ಯುತಿಇಲ್ಲಾಹ ವರಸೂಲಹೂ ವಯಖ್‌ಶಲ್ಲಾಹ ವಯತ್ತಖ್‌ಹಿ ಫುಲಾಯಿಕ ಹುಮುಲ್ ಫಾಇಝೂನ್** (ಅನ್ನೂರ್:53) "ಯಾರೂ ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ವಿಧೇಯರಾಗಿದ್ದುಕೊಂಡು ಅಲ್ಲಾಹನ ಭಯವಿರಿಸಿ ಕೆಡಕುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಾರೋ ಅವರೇ ಯಶಸ್ಸು ಗಳಿಸುವರು." ಅವರು ತಮ್ಮ ಉದ್ದೇಶಗಳನ್ನು ಪಡೆಯುವವರು. ಆದುದರಿಂದ ವಿಜಯಿಗಳಾಗಬೇಕಾದರೆ, ತಮ್ಮ ಉದ್ದೇಶಗಳೆಡೆ ಸಫಲರಾಗಬೇಕಾದರೆ ಅಲ್ಲಾಹನ ಅನುಗ್ರಹಗಳಿಗೆ ಪಾತ್ರರಾಗಬೇಕಾದರೆ ಅಲ್ಲಾಹ್ ಮತ್ತು ಅವನ ಪ್ರವಾದಿಯ ಆಜ್ಞೆ ಪಾಲನೆ ಮಾಡುತ್ತಾ ಇರಬೇಕು ಮತ್ತು ಅವರ ಪ್ರತಿಯೊಂದು ಮಾತುಗಳನ್ನು ಆಲಿಸಿಕೊಂಡು ನಡೆಯಬೇಕು ಮತ್ತು ಅವರಿಂದಲೇ ಜಮಾಅತಿನ ಯಶಸ್ಸು ಹಾಗೂ ಪ್ರಗತಿ ಸಾಧ್ಯವಿದೆ. ಒಬ್ಬ ವ್ಯಕ್ತಿ ಅವನು ಪುರುಷನಾಗಲಿ, ಸ್ತ್ರೀಯಾಗಲಿ ಈ ಪ್ರತಿಜ್ಞೆ ಮಾಡಿರುತ್ತಾನೆ. ನಾನು ಕೇವಲ ತಾತ್ಕಾಲಿಕ ಹಾಗೂ ಲೌಕಿಕ ಲಾಭಗಳಿಗಾಗಿ ಮೋಹಿತನಾಗುವುದಿಲ್ಲ. ಬದಲು ನನ್ನ ಧರ್ಮ ನನಗೆ ಆಧ್ಯತೆಯಾಗಿರುತ್ತದೆ. ನಾನು ಜಮಾಅತಿನ ವ್ಯವಸ್ಥೆ ಹಾಗೂ ಅದರ ಪ್ರಗತಿಗಾಗಿ ಪ್ರಯತ್ನಪಡುವೆನು.

ಹುಝೂರ್ ಹೇಳಿದರು. ಆದುದರಿಂದ ಒಬ್ಬ ನಿಷ್ಠಾವಂತ ಅಹ್ಮದಿ ತುಂಬ ಪ್ರಯತ್ನ ಶೀಲನಾಗಿದ್ದುಕೊಂಡು ಅಲ್ಲಾಹ್ ಮತ್ತು ಅವನ ಪ್ರವಾದಿಯ ಆಜ್ಞೆಗಳ ಮೇಲೆ ದೃಷ್ಟಿಯಿಡಬೇಕಾಗಿದೆ. ಅದರಲ್ಲಿಯೇ ನಮ್ಮ ಜೀವನದ ಯಶಸ್ಸು ಹಾಗೂ ಸ್ಥಿರತೆ ಅಡಗಿದೆ. ಇಲ್ಲದಿದ್ದರೆ ನಮ್ಮ ಜೀವನವು ಅಂತ್ಯಗೊಳ್ಳುವುದು. ಇಹಲೋಕದ ಜೀವನವು ಕ್ಷಣಿಕವಾಗಿದೆ. ಅದಾದ ನಂತರ ಪರಿಣಾಮ ಭಯಂಕರವಾಗುವುದು. ಅಲ್ಲಾಹನು ಅದರಿಂದ ಎಲ್ಲರಿಗೂ ಕಾಪಾಡುವಂತಾಗಲಿ. ಅಲ್ಲಾಹನು ತನ್ನ ಆಜ್ಞೆಗಳ ಪಾಲನೆಗೋಸ್ಕರ ಒಂದೆಡೆ ಇಹಲೋಕದಲ್ಲಿಯೇ ಒಳಿತಿನ ಸಾಮಗ್ರಿಗಳನ್ನು ಒದಗಿಸಿದರೆ ಪರಲೋಕದಲ್ಲಿಯೂ ಅವನಿಗಾಗಿ ಪುಣ್ಯವು ದೊರಕಿಸಿಕೊಡುತ್ತಾನೆ.

ಹುಝೂರ್ ಹೇಳಿದರು. ಇಲ್ಲಿ ಪಾಲನೆ ಪೋಷಣೆ ಪಡೆದು ಬೆಳೆದ ಹುಡುಗಿಯರಿಗೂ ನಾನು ಹೇಳುತ್ತೇನೆ ಅಥವಾ ಪಾಕಿಸ್ತಾನದಿಂದ ಬಂದು ಇಲ್ಲಿಯ ಸಮಾಜದಲ್ಲಿ ಮಹಿಳೆಯರ ಹಕ್ಕುಗಳನ್ನು ಮತ್ತು ಸ್ವಾತಂತ್ರ ಇದೆ ಎಂದು ಭಾವಿಸುತ್ತಾರೆ. ಆ ಕಾರಣದಿಂದಲೆ ಇಲ್ಲಿ ಪ್ರಗತಿಯಿದೆ. ನೆನಪಿರಲಿ. ಇಲ್ಲಿ ಅವರಿಗೆ ಈ ಲೌಕಿಕ ಪ್ರಗತಿ ಲಭಿಸುತ್ತಿದೆ ಎಂದರೆ ಅದು ಅವರ ಶ್ರಮದ ಫಲವಾಗಿದೆ. ಮತ್ತು ಅವರ ಶಿಕ್ಷಣದಲ್ಲಿ ಪ್ರಗತಿಯ ಕಾರಣವಾಗಿದೆ. ಧರ್ಮ ಮತ್ತು ಆಧ್ಯಾತ್ಮಿಕದಲ್ಲಿ ಶೂನ್ಯವಿದೆ.. ಅವರಿಗೆ ಅಲ್ಲಾಹನ ಅಸ್ತಿತ್ವದ ಬಗ್ಗೆ ಯಾವ ಚಿಂತೆಯೂ ಇಲ್ಲ ಅಥವಾ ಅಲ್ಲಾಹನ ಆಜ್ಞೆಗಳ ಬಗ್ಗೆ ಮತ್ತು ಅದರಂತೆ ನಡೆಯುವ ಕುರಿತು ಚಿಂತೆಯಿಲ್ಲ. ಆದರೆ ಓರ್ವ ಸತ್ಯವಿಶ್ವಾಸಿಗಳಾದ ನೆಲೆಯಲ್ಲಿ, ನನ್ನ ಇಹಪರ ಸುಧಾರಣೆ ನೆಲೆಯಲ್ಲಿ ನೆನಪಿಡಿರಿ. ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಆಜ್ಞೆಗಳನ್ನು ಪಾಲಿಸುವುದು ಅನಿವಾರ್ಯವಾಗಿದೆ. ನೀವು ಅಲ್ಲಾಹನ ಆಜ್ಞೆಗಳನುಸಾರ ನಡೆದುಕೊಂಡರೆ, ವಿದ್ಯೆಯಲ್ಲಿ ಪ್ರಗತಿಹೊಂದಿದರೆ, ಈ ವಸ್ತುಗಳು ದೊರೆತೇ ದೊರೆಯುತ್ತದೆ. ಆದರೆ ಒಂದು ಪ್ರಮುಖ ಉದ್ದೇಶ, ಲೋಕವು ಅದರಿಂದ ವಂಚಿತವಾಗಿದೆ, ಅದು ಜೀವನದ ಉದ್ದೇಶವಾಗಿದೆ. ಅದನ್ನು ಪಡೆಯ ಬಯಸುವವರಾದರೆ, ಅಲ್ಲಾಹನ ಸಾಮಿಪ್ಯ ಪಡೆಯಬೇಕಾಗಿದೆ. ತನ್ನ ಪರಲೋಕವು ಸುಧಾರಿಸಿಕೊಳ್ಳಬೇಕಾಗಿದೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ) ರಿಗೆ ಅವರನ್ನು ಅನುಸರಿಸುವವರೊಂದಿಗೆ ಜ್ಞಾನ ಸುಜ್ಞಾನದಲ್ಲಿ ಪ್ರಗತಿ ಕೊಡುವ ಅಥವಾ ಮುನ್ನಡೆಸುವ ವಾಗ್ದಾನ ಮಾಡಿರುತ್ತಾನೆ. ಆದುದರಿಂದ ಈ ಧಾರ್ಮಿಕ ಮತ್ತು ಲೌಕಿಕ ಪ್ರಗತಿಗಳು ಅವರಿಗೆ ಸಿಗಬಹುದಾಗಿದೆ. ಅಥವಾ ನಮಗೆ ಸಿಗಬಹುದಾಗಿದೆ. ಆದರೆ ಯಾರು ಅಲ್ಲಾಹನ ಮತ್ತು ಅವನ ಪ್ರವಾದಿಯ ಆಜ್ಞೆಗಳೊಂದಿಗೆ ಸಂಬಂಧ ಹೊಂದುವರೋ ಅವರು ಅವನ ಅನುಗ್ರಹಗಳಿಗೆ ಪಾತ್ರರಾಗುವರು. ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ಬೈಅತ್ ಮಾಡುವ ದಾವೆ ಹೊಂದಿದವರಾದರೆ ನಮ್ಮ ಎಲ್ಲ ಕಾರ್ಯಗಳಲ್ಲಿ ಔದಾರ್ಯ, ಅನುಗ್ರಹ, ನಾವು ಇಹಲೋಕಕ್ಕೆ ಪ್ರಾಧಾನ್ಯತೆ ನೀಡದೆ ಧರ್ಮಕ್ಕೆ ಪ್ರಾಧಾನ್ಯತೆ ಕೊಟ್ಟಾಗ ಮಾತ್ರ ದೊರೆಯುವುದು. ಆಗ ಮಾತ್ರ ಇಹಲೋಕ ನಮ್ಮ ಸೇವಕಿಯಾಗಿ ಮುಂಬರುವುದು. ಇಹಲೋಕಗಳು ನಿಮ್ಮಿಂದ ಮಾರ್ಗದರ್ಶನ ಪಡೆಯುವರು. ಅಲ್ಲಾಹನ ವಾಗ್ದಾನಗಳ ಮೇಲೆ ವಿಶ್ವಾಸ ಹೊಂದುವವರು ಅನಿಸಿಕೊಳ್ಳುತ್ತಿರಬಹುದು ಇಷ್ಟು ಸಣ್ಣ ಜಮಾಅತ್ ಹೇಗೆ ಲೋಕಕ್ಕೆ ತನ್ನ ಹಿಂದೆ ಬರುವಂತೆ ಮಾಡಲು ಸಾಧ್ಯ? ಆದರೆ ಇಂದು ಅದರ ಕುರುಹುಗಳು ನಾವು ಕಾಣುತ್ತಿದ್ದೇವೆ. ಜರ್ಮನಿಯಲ್ಲಿಯೇ ನೋಡಿಕೊಳ್ಳಿರಿ. ಇಂದಿನಿಂದ ಹತ್ತು ವರ್ಷಗಳ ಹಿಂದೆ ಇದ್ದ ಜಮಾಅತಿನ ಗುರುತು ಅದರ ಹತ್ತು ಇಪ್ಪತ್ತು ಪಟ್ಟು ಹೆಚ್ಚಿಸಿಕೊಂಡಿದೆ. ವಿದ್ಯಾವಂತ ವರ್ಗದಲ್ಲಿರುವ ನಮ್ಮ ಸ್ಥಾನಮಾನ ಈಗ ಇದ್ದದ್ದು ಅದಕ್ಕಿಂತ ಹಿಂದೆ ನಮಗೆ ಊಹಿಸಲು ಸಾಧ್ಯವಿರಲಿಲ್ಲ. ಆದ್ದರಿಂದ ಸಮುದಾಯಗಳ ಪ್ರಗತಿ ಅದೇ ರೀತಿಯಲ್ಲಿ ಬೆಳವಣಿಗೆ ಹೊಂದುತ್ತವೆ. ಅಲ್ಲಾಹನು ಅನುಗ್ರಹದಿಂದ ಬರುವ ಪ್ರತಿಯೊಂದು ದಿನವು ಪ್ರಗತಿಯನ್ನು ಕಾಣಿಸುತ್ತಿದೆ. ಆದರೆ ನಮ್ಮ ಈ ಪ್ರಗತಿ ಧರ್ಮರಹಿತವಾಗಿರಬಾರದು. ಸದಾ ನೆನಪಿಡಿರಿ. ಧರ್ಮದ ಮೇಲೆ ದೃಢವಾಗಿ ನಿಲ್ಲುವುದೇ ನಮ್ಮ ವೈಶಿಷ್ಟ್ಯತೆಯಾಗಿರಬೇಕು.

ಹುಝೂರ್ ಹೇಳಿದರು: ಆದುದರಿಂದ ಕೀಳರಿಮೆ ಬೆಳೆಸಿಕೊಳ್ಳುವುದು ಬೇಡ. ಬದಲು ಅಲ್ಲಾಹ್ ಮತ್ತು ಅವನ ಪ್ರವಾದಿಯ ಅನುಸರಣೆ ನಮ್ಮ ಹಾಸಿಗೆಯನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಬೇಕಾಗಿದೆ. ಆಗ ಮಾತ್ರ ನಮಗೆ ಯಶಸ್ಸುಗಳು ದೊರೆಯುವುವು. ಯಾರೊಬ್ಬರಿಗೂ ಇಹಲೋಕದ ಆಡಂಬರ, ತಮಾಷೆ, ಸಂದರತೆಯೇ ಬೇಕಾಗಿದ್ದಲ್ಲಿ ನಿಸ್ಸಂಶಯವಾಗಿ ಅವರ ಹಿಂದೆ ಹೋಗಬಹುದು. ಅವರಿಗೆ ಈ ನಾಮಧಾರಿ ಸ್ವಾತಂತ್ರ್ಯ ದೊರೆಯುವುದು. ಆದರೆ ನೆನಪಡಿರಿ. ಈ ಸ್ವಾತಂತ್ರ್ಯಗಳ ಹಿಂದೆ ಅವರಲ್ಲಿ ಅಸಮಧಾನಗಳಿವೆ. ಅದನ್ನು ನಾವು ಕಾಣಬಹುದು. ಅವರಲ್ಲಿ ಮೇಲ್ನೋಟಕ್ಕೆ ಕಂಡು ಬರುತ್ತಿರುವ ಮಿಂಚು ಬರಿ ಮಿಥ್ಯವಾಗಿದೆ. ಅದರೊಳಗೆ ಏನೂ ಇಲ್ಲ. ಅವರ ತೋರಿಕೆಯ ನಗು, ಕುಣಿತ, ಕ್ಲಬ್, ಮಧ್ಯಸೇವನೆ ಅವರ ಅಸಮಾಧಾನಗಳನ್ನು ಮರೆಮಾಚುವ ಸಾಧನಗಳಾಗಿವೆ. ಆದರೆ ಅದು ಉದ್ದೇಶರಹಿತ ಮತ್ತು ಫಲವಿಲ್ಲದ್ದಾಗಿದೆ.

ಅವರ ಮನದಾಳ ತಿಳಿದುಕೊಳ್ಳುವವರಾದರೆ ಭಯಂಕರವಾದ ಕಂದಕಗಳನ್ನು ಕಾಣಬಹುದಾಗಿದೆ. ಅವರ ಈ ಅಸಮದಾನಗಳೇ ಅವರಿಗೆ ಕ್ಲಬ್‌ಗಳಲ್ಲಿ, ಮದ್ಯಸೇವನೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡುತ್ತದೆ. ಈ ಲೋಕವೇ ಎಲ್ಲದಕ್ಕೂ ಸೈ ಎಂದಾದರೆ, ಆರ್ಥಿಕ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಆತ್ಮಹತ್ಯೆಗಳ ಅಂಕಿ ಅಂಶಗಳು ಏಕೆ ಅವರ ವಾಸ್ತವಿಕತೆ ಬಿಚ್ಚಿಡುತ್ತಿದೆ. ಇದುವೇ ಅವರ ಅಸಮಾಧಾನಕ್ಕೆ ಸಾಕ್ಷ್ಯವಾಗಿದೆ. ಆದುದರಿಂದ ಈ ಅಸಮಾಧಾನಗಳನ್ನು ಹೋಗಲಾಡಿಸಬೇಕಾದರೆ, ಅಲ್ಲಾಹನು ತೋರಿಸಿದ ಮಾರ್ಗದಲ್ಲಿ ನಡೆಯುವ ಅವಶ್ಯಕತೆ ಇದೆ. ಅಲ್ಲಾಹನು ಹೇಳುತ್ತಾನೆ. **"ಅಲ್ಲದ್ವೀನ ಆಮಿನೂ ವ ತತ್‌ಮ ಇನ್ನಲ್ ಖುಲೂಬಿಹಿಮ್"** (ರಾದ್–29) "ಆಲಿಸಿರಿ! ಅಲ್ಲಾಹನ ಸ್ಮರಣೆಯಿಂದ ಮಾತ್ರ ಮನಶ್ಶಾಂತಿ ಪಡೆಯುವಿರಿ."

ಹುಝೂರ್ ಹೇಳಿದರು. ಆದುದರಿಂದ ಎಷ್ಟು ಹೆಚ್ಚಿಗೆ ಅಲ್ಲಾಹನೆಡೆ ಭಾಗುವಿರೋ ಅವರನ್ನು ಅನುರಿಸುವರೋ, ಅಷ್ಟೇ ನಿಮಗೆ ಮನಶ್ಯಾಂತಿ ದೊರೆಯುವುದು. ಮನುಷ್ಯನಿಗೆ ಮನಶ್ಯಾಂತಿ ದೊರೆಯಬೇಕಾದರೆ ಅಲ್ಲಾಹನೆಡೆಗೆ ಹೋಗಬೇಕಾದುದು ಅವನ ಸಹಜಗುಣವಾಗಿದೆ. ಲೌಕಿಕ ಮೋಹ ವಿಚಲಿತಗೊಳಿಸುತ್ತದೆ. ಅದರಿಂದ ಇನ್ನಷ್ಟು ಶಾಂತಿ ಕದಡುತ್ತದೆ. ಅಲ್ಲಾಹನು ಲೋಕವು ಈ ರಹಸ್ಯ ತಿಳಿಯುವಂತೆ ದಯಪಾಲಿಸಲಿ. ಆಗ ಮಾತ್ರ ಲೋಕದ ಈ ಜಂಜಾಟದಿಂದ ಹೊರ ಬರಲು ಸಾಧ್ಯವಾಗುತ್ತದೆ. ನಾವು ನಿಜವಾದ ಸ್ವಾತಂತ್ರ್ಯ ಲೋಕಕ್ಕೆ ನೀಡಬೇಕಾಗಿದೆ. ಅದು ಅಲ್ಲಾಹನ ಅಧೀನದಲ್ಲಿದೆ. ಅವನ ಅನುಸರಣೆಯಿಂದ ಮಾತ್ರ ಅದನ್ನು ಪಡೆಯಲು ಸಾಧ್ಯ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಪವಿತ್ರ ಖುರ್‌ಆನ್ ನಿಂದ ಅದೆ ತಿಳಿದು ಬರುತ್ತದೆ. ಅಲ್ಲಾಹನ ಸ್ಮರಣೆಯೇ ವ ತತ್‌ಮಿಯಿನ್ನ ಖುಲೂಬಿಹಿಮ್" (ಅರ್‌ಾದ್–29) ಆದುದರಿಂದ ಸಾಧ್ಯವಾದಷ್ಟು ಮಟ್ಟಿಗೆ ಅಲ್ಲಾಹನನ್ನು ಸ್ಮರಿಸುತ್ತೀರಿ. ಅದರಿಂದ ಮನಶ್ಯಾಂತಿ ದೊರೆಯುವುದು. ಹೌದು ಇದಕ್ಕಾಗಿ ತಾಳ್ಮೆ ಮತ್ತು ಶ್ರಮ ಅವಶ್ಯವಾಗಿದೆ. ಗಾಬರಿಗೊಂಡರೆ ಮತ್ತು ದಣಿದುಕೊಂಡರೆ ಈ ಮನಶ್ಯಾಂತಿ ದೊರೆಯುವುದಿಲ್ಲ. ಆದುದರಿಂದ ತಾಳ್ಮೆ ಮತ್ತು ಸ್ಥಿರತೆ ಅವಶ್ಯವಾಗಿದೆ.

ಮತ್ತೆ ಅವರು ನುಡಿದರು. "ಅಲ್ಲಾಹನ ಸ್ಮರಣೆಯಿಂದ ಮನಶ್ಯಾಂತಿ ದೊರೆಯುತ್ತದೆ. ಆದರೆ ಅದರ ವಾಸ್ತವ ತತ್ವವೇನೆಂದರೆ ಮನುಷ್ಯನು ಸತ್ಯನಿಷ್ಠೆಯಿಂದ ಮತ್ತು ಪೂರ್ಣಶ್ರದ್ದೆಯಿಂದ ಅಲ್ಲಾಹನನ್ನು ಸ್ಮರಿಸಿದರೆ ಮತ್ತು ಪೂರ್ಣ ವಿಶ್ವಾಸ ಹೊಂದಿದಾಗ ದೇವ ಭಕ್ತಿ ಹುಟ್ಟುತ್ತದೆ. ಅವನ ಭಯ ಮೋಹ ಮತ್ತು ದುರಾಚಾರಗಳಿಂದ ರಕ್ಷಿಸುತ್ತದೆ. ಹೀಗೆ ಮನುಷ್ಯನು ಭಯಭಕ್ತಿಯಲ್ಲಿ ಮತ್ತು ಪರಿಶುದ್ಧತೆಯಲ್ಲಿ ಪ್ರಗತಿ ಸಾಧಿಸುತ್ತಾನೆ."

ಮನುಷ್ಯನ ಜೀವನದ ಇದು ವಾಸ್ತವವಾಗಿದೆ ಮತ್ತು ಧ್ಯೇಯವಾಗಿದೆ. ಅಲ್ಲಾಹನೊಡನೆ ಸಂಬಂಧ ಹೊಂದಬೇಕು. ಅವನ ಆಜ್ಞೆಗಳನ್ನು ಪಾಲಿಸಬೇಕು. ಇದು ಅವನ ಸ್ಮರಣೆಯಿಂದಲೇ ಸಾಧ್ಯವಾಗುತ್ತದೆ. ಮತ್ತು ಮನಶ್ಯಾಂತಿ ದೊರೆಯುತ್ತದೆ. ಆದರೆ ಆಡಂಬರ ಅಭಿಲಾಷೆಗಳನ್ನು ಲೋಕವು ನಿಸ್ಸಂಶಯವಾಗಿ ಹೊಸ ಬೆಳಕು ಎಂದು ಭಾವಿಸುತ್ತದೆ. ಆದರೆ ಅಲ್ಲಾಹನ ದೃಷ್ಟಿಯಲ್ಲಿ ಅದು ವಿನಾಶದ ತಗ್ಗಾಗಿದೆ. ಅದರಿಂದ ಮನುಷ್ಯನು ದೂರವಿರಬೇಕು. ಅಲ್ಲಾಹನು ಯಾವ ಕೆಲಸ ಕಾರ್ಯಗಳಿಂದ ದೂರವಿರಲು ಪ್ರಸ್ತಾಪಿಸಿದ್ದಾನೆಯೋ ಅದರಿಂದ ಒಬ್ಬ ಸತ್ಯವಿಶ್ವಾಸಿ ದೂರ ಉಳಿಯಬೇಕಾಗಿದೆ. ಆದುದರಿಂದ ತಮ್ಮನ್ನು ತಾವು ಈ ಜಮಾಅತಿನಲ್ಲಿ ಗುರುತಿಸಿ ಕೊಳ್ಳಬೇಕಾಗಿದೆ. ಸತ್ಯ ವಾಸ್ತವ ಅಹ್ಮದಿಯರಲ್ಲಿ ಪರಿಗಣಿಸಿಕೊಳ್ಳಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಬಯಸಿದಂತೆ ನಡೆಯಬೇಕಾಗಿದೆ. ಬರೀ ಮಾತಿನಿಂದ ಅಲ್ಲ. ವಾಸ್ತವದಲ್ಲಿ ನಡೆಯಬೇಕು. ಈ ನಾಮಧಾರಿ ಸ್ವಾತಂತ್ರ್ಯ, ಮೋಹಗಳಿಂದ ದೂರವಾಗಿದ್ದು ನಿಜವಾದ ವಿಶ್ವಾಸಿಗಳಾಗಬೇಕು. ಅಂತೂ ತಾವು ನಿಜವಾದ ಸತ್ಯವಿಶ್ವಾಸಿಯಾಗ ಬಯಸುವುದಾದರೆ ತಮ್ಮನ್ನು ಕೆಡಕುಗಳಿಂದ ರಕ್ಷಿಸಿಕೊಳ್ಳುವುದೇ ಧ್ಯೇಯವಾಗಿರಬೇಕು.

ನಾನು ಇದನ್ನು ಹೇಳಬಯಸುತ್ತೇನೆ. ಈ ಮಾತುಗಳನ್ನು ಜ್ಞಾನ ಮಾತ್ರಕ್ಕಾಗಿ ಹೇಳುತ್ತಿಲ್ಲ. ಜಮಾಅತಿನಲ್ಲಿ ಹಲವರು ಈ ಸತ್ಯವನ್ನು ತಿಳಿದುಕೊಂಡವರಾಗಿದ್ದಾರೆ ಮತ್ತು ಮನಶ್ಯಾಂತಿ ಪಡೆದವರಾಗಿದ್ದಾರೆ. ಪಡೆಯುತ್ತಿದ್ದಾರೆ. ಇದು ಊಹೆ ಮಾತ್ರವಲ್ಲ. ಇಹಲೋಕದಲ್ಲಿಯೇ ಮುಳುಗಿದವರು, ಅಲ್ಲಾಹನ ಅನುಸರಣೆಯಿಂದ ಹೊರ ಬಂದವರು ಅಸಮಾಧಾನಗಳಿಗೆ ಗುರಿಯಾಗುತ್ತಾರೆ. ಬದಲು ಹಲವು ಪುರುಷರು ಹಾಗೂ ಮಹಿಳೆಯರು ನನಗೆ ಬರೆದದ್ದುಂಟು. ನಾವು ಇಹಲೋಕದ ಪ್ರಗತಿಯನ್ನು, ಸ್ವಾತಂತ್ರ್ಯವನ್ನು, ಮೋಹಜಾಲವನ್ನು, ಎಲ್ಲವೂ ಆಗಿದೆ ಎಂದು ಭಾವಿಸಿದ್ದೇವು. ಈಗ ನಮಗೆ ನಮ್ಮ ತಪ್ಪಿನ ಅರಿವು ಆಗುತ್ತಿದೆ. ಆದುದರಿಂದ ನಮ್ಮನ್ನು ಕ್ಷಮಿಸಬೇಕು ಮತ್ತು ಪುನ: ಜಮಾಅತಿನಲ್ಲಿ ಸೇರಿಸಿಕೊಳ್ಳಬೇಕು. ನಾವು ವಚನ ನೀಡುತ್ತೇವೆ. ನಾವು ಎಂದೂ ಅಲ್ಲಾಹನ ಮತ್ತು ಅವನ ಪ್ರವಾದಿಯ ಆಜ್ಞೆಗಳಿಂದ ಹೊರ ಹೋಗುವುದಿಲ್ಲ.

ಹುಝೂರ್ ಹೇಳಿದರು. ಆದುದರಿಂದ ಯಾವುದೇ ಕೀಳು ಭಾವನೆಗಳಿಗೆ ಆಸ್ಪದ ನೀಡುವುದು ಬೇಡ, ನಮಗೆ ನಮ್ಮ ಧರ್ಮ ಏನು ಬೋಧಿಸುತ್ತದೆ ಎಂಬುದನ್ನು ನೋಡಬೇಕಾಗಿದೆ. ಯಾರಾದರೂ ಮನೆಗಳಲ್ಲಿ ಸಮಸ್ಯೆಗಳಿದ್ದರೆ ಅದು ಅವರ ವೈಯಕ್ತಿಕ ಸಮಸ್ಯೆಗಳಾಗಿವೆ. ಅಥವಾ ತಂದೆ ತಾಯಿಯರ ಅಜ್ಞಾನದಿಂದಾಗಿವೆ. ಅದರಿಂದ ಕೆಲವು ಘಟನೆಗಳು ಘಟಿಸುತ್ತವೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ. ಸ್ತ್ರೀಯರೊಡನೆ ಒಳ್ಳೆಯದಾಗಿ ವ್ಯವಹರಿಸಿರಿ. ಅವರ ಭಾವನೆಗಳನ್ನು ಗೌರವಿಸಿರಿ, ನ್ಯಾಯ ಸಮಾನತೆಗಳಿಂದ ವರ್ತಿಸಿರಿ. ವಿವಾಹದಲ್ಲಿ ಮಹರ್ (ವಿವಾಹ ದಕ್ಷಿಣೆ) ಮಹಿಳೆಯ ಸುರಕ್ಷತೆಗಾಗಿ ಇಡಲಾಗಿದೆ. ತಲಾಖ್ ಆದ ಸಂದರ್ಭದಲ್ಲಿ ಮಹಿಳೆಯರಿಗೆ ಕೊಟ್ಟ ಸಂಪತ್ತು ಹಿಂಪಡೆಯುವುದು ನಿಷಿದ್ಧವಾಗಿದೆ. ಸತ್ಕರ್ಮಗಳ ಪುಣ್ಯಗಳಲ್ಲಿ ಸ್ತ್ರೀ ಪುರುಷ ಸಮಾನರಾಗಿದ್ದಾರೆ. ಯಾವ ವಿಶೇಷತೆ ಇಲ್ಲ. ಮಹಿಳೆಯರ ಆದಾಯದಲ್ಲಿ ಪುರುಷನ ಹಕ್ಕಿರುವುದಿಲ್ಲ. ಮನೆ ನಿರ್ವಹಣೆಯ ಜವಾಬ್ದಾರಿ ಪುರುಷನ ಮೇಲೆ ಇದೆಯೇ ಹೊರತು ಸ್ತ್ರೀಯರಿಗೆ ಅಲ್ಲ. ಹಿಂದಿನ ಕಾಲದಲ್ಲಿ ಮತ್ತು ಕೆಲವು ಜಾಗದಲ್ಲಿ ಇಂದು ಹೆಣ್ಣಿನ ಜನನದ ಸಂದರ್ಭದಲ್ಲಿ ಪುರುಷರ ಮತ್ತು ಅವರ ಕುಟುಂಬದವರಿಂದ ಅನುಚಿತ ವರ್ತನೆಗಳು ಕಂಡು ಬರುತ್ತವೆ. ಇಸ್ಲಾಂ ಅದನ್ನು ಬಲವಾಗಿ ಖಂಡಿಸುತ್ತದೆ. ಇದರ ಬಗ್ಗೆ ಅಸಂಖ್ಯಾತ ಆದೇಶಗಳಿವೆ. ಆದುದರಿಂದ ಇಲ್ಲಿ ನಾವು ಸ್ವಾತಂತ್ರ್ಯವನ್ನು ನೋಡಿ ಹುಚ್ಚರಾಗುವ ಬದಲಾಗಿ ಇಸ್ಲಾಂ ನಮಗೆ ಎಷ್ಟು ಸ್ವಾತಂತ್ರ್ಯ ನೀಡಿದೆ ಎಂಬುದು ನೋಡಬೇಕಾಗಿದೆ. ಮನ: ಪೂರ್ವಕವಾಗಿ ಯೋಚಿಸಿ ನೋಡಿ. ಅಲ್ಲಾಹನ ಆಜ್ಞೆಗಳಲ್ಲಿ ನಮಗೆ ಎಷ್ಟು ಪ್ರಯೋಜನಗಳಿವೆ. ಆದುದರಿಂದ ಅಲ್ಲಾಹನ ಆಜ್ಞನುಸಾರ ಅಲ್ಲಾಹನ ಆರಾಧಿಸುವ ಹಾಗೂ ವಿಧೇಯರಾಗುವ ಸ್ತ್ರೀಯರಾಗಬೇಕು. ಅನಸುರಣೆ ಮಾಡುವ ಸ್ತ್ರೀಯರಾಗಬೇಕು ಮತ್ತು ಧರ್ಮವನ್ನು ಲೌಕಿಕತೆಯ ಮೇಲೆ ಪ್ರಧಾನ್ಯತೆ ನೀಡುವ ಸ್ತ್ರೀಯರಾಗಬೇಕು. ತನ್ನ ಖಲೀಫರ ಕಾರ್ಯಗಳಲ್ಲಿ ಸಹಾಯಕರಾಗಲು ಪ್ರಯತ್ನಿಸಬೇಕು. ಅಲ್ಲಾಹನ ಅನುಗ್ರಹಳಿಗೆ ಪಾತ್ರರಾಗುವಂತಾಗಬೇಕು. ಅಲ್ಲಾಹನು ನಿಮಗೆಲ್ಲರಿಗೂ ಈ ಭಾಗ್ಯ ದಯಪಾಲಿಸಲಿ ಈಗ ದುಆ ಮಾಡೋಣ.

(ಹುಝೂರರ ಸಂಪೂರ್ಣ ಬೋಧನೆ ಇನ್‌ಶಾಅಲ್ಲಾಹ್ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು)

**(ಮುಂದುವರಿಯುವುದು)**

## ತಹ್ರೀಕ್ ಜದೀದ್ ಸಂಪೂರ್ಣ ಚಂದಾ ಪಾವತಿಸಲು ಗಮನವಹಿಸಿ

ಜಮಾಅತ್ ಬಾಂಧವರಿಗೆ ತಿಳಿದಿರುವಂತೆ ತಹ್ರೀಕ್ ಜದೀದ್‌ನ ಹೊಸ ವರ್ಷ ಪ್ರಾರಂಭಗೊಂಡು ಆರು ತಿಂಗಳಿಗಿಂತ ಹೆಚ್ಚು ಅವಧಿ ಕಳೆದುಹೋಗಿದೆ. ವಕಾಲತ್ ಮಾಲ್‌ನ ಮಾಹಿತಿ ಪ್ರಕಾರ ಇನ್ನು ಬಹಳಷ್ಟು ವಾಗ್ದಾನ ಮಾಡಿರುವವರು ಚಂದ ನೀಡಬೇಕಾಗಿದೆ. ಭಾರತದ ಎಲ್ಲ ಜಿಲ್ಲಾ ಅಮೀರುಗಳು, ಸ್ಥಳೀಯ ಅಮಿರರು, ಅಧ್ಯಕ್ಷರುಗಳು, ತಹ್ರೀಕ್ ಜದೀದ್ ಕಾರ್ಯದರ್ಶಿಗಳೊಂದಿಗೆ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಸ್ಥಳೀಯ ಮುಬಲ್ಲಿಗೀನ್ ಅಥವಾ ಮುಅಲ್ಲಿಮೀನ್ ಅವರ ಸಹಯೋಗದೊಂದಿಗೆ ತಹ್ರೀಕ್ ಜದೀದ್ ಚಂದ ಪಾವತಿಯ ಕುರಿತು "ತಹ್ರೀಕ್ ಜದಿದ್ ಹಫ್ತಮಾಲ್" ಆಚರಿಸಬೇಕು. ಏಕೆಂದರೆ ಸಯ್ಯದ್‌ನಾ ಹುಝೂರೆ ಅನ್ವರ್ (ಅಬಅ) ರವರು ನಿಗದಿಪಡಿಸಿದ ಗುರಿಯ ಪ್ರಕಾರ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಗುರಿ ಸಾಧಿಸುವ ಭಾಗ್ಯ ನಮ್ಮದಾಗಲಿ. ಆಮೀನ್!

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿದರು. "ತಹ್ರೀಕ್ ಜದೀದ್ ನನ್ನ ಕರೆಯಾಗಿದೆ ಎಂದು ಭಾವಿಸಬೇಡಿರಿ. ಬದಲು ಅದರ ಒಂದೊಂದು ಪದ ನಾನು ಪವಿತ್ರ ಖುರ್‌ಆನ್‌ನಿಂದ ಸಾಬೀತು ಪಡಿಸುವೆನು. ಮತ್ತು ಅದರ ಒಂದೊಂದು ಆಜ್ಞೆಯು ಸಹ ರಸೂಲೆ ಕರೀಂ(ಸ) ರವರ ನುಡಿಗಳಿಂದ ತೋರಿಸಬಲ್ಲೆನು. ಆದರೆ ಯೋಚಿಸಲು ಮಿದುಳು ಮತ್ತು ವಿಶ್ವಾಸ ಹೊಂದಿದ ಹೃದಯದ ಅಗತ್ಯವಿದೆ. ಆದುದರಿಂದ ಅದನ್ನು ನಾನು ಹೇಳುತ್ತಿದ್ದೇನೆ ಎಂದೂ ಭಾವಿಸಬೇಡಿರಿ, ನನ್ನ ಕಡೆಯಿಂದ ಎಂದೂ ಭಾವಿಸಬೇಡಿರಿ. ಬದಲು ಯಾರ ಕೈಯಲ್ಲಿ ನಿಮ್ಮ ಜೀವವಿದೆಯೇ ಅದು ಅವನ ಮಾತಾಗಿದೆ. ನಾನು ತೀರಿಹೋದರೂ ಅವನು ಇತರರಿಂದಲೂ ಅದೇ ಹೇಳಿಸುವನು, ಅವರು ತೀರಿಹೋದರೆ ಅವರ ನಂತರ ಬೇರೆಯವರಿಂದಲೂ.... ಅಂತೂ ನೀವು ಅದನ್ನು ಪಾಲಿಸುವವರೆಗೆ ಅವನು ಬಿಡಲಾರನು. (ಖುತ್‌ಬ ಜುಮುಅ 13 ಡಿಸೆಂಬರ್ 1935, ಅಲ್‌ಫಝಲ್ 21 ಡಿಸೆಂಬರ್ 1935)

ಅಲ್ಲಾಹನು ಎಲ್ಲಾ ತಹ್ರೀಕ್ ಜದೀದ್ ಚಂದಾದಾರರ ಸಂಪತ್ತುಗಳಲ್ಲಿ ಮತ್ತು ಆತ್ಮಗಳಲ್ಲಿ ಅಸಾಮಾನ್ಯ ಅನುಗ್ರಹ ದಯಪಾಲಿಸಲಿ. ಆಮೀನ್.

**(ವಕೀಲುಲ್ ಮಾಲ್ ತಹ್ರೀಕ್ ಜದೀದ್ ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 27 May 2021, Issue No. 21

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)


## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 20ರ ವರದಿಯ ಉಳಿದ ಭಾಗ)**

**6 ಜೂನ್ 2015 ಶನಿವಾರ,**

**ಮಹಿಳಾ ಜಲ್ಸ ಸ್ಥಳದಿಂದ ಹುಝೂರರ ಭಾಷಣ**

ತಶಹ್ಹುದ್ ತವೂಝ್ ಮತ್ತು ಸೂರ ಫಾತಿಹಾ ಪಠಿಸಿದ ನಂತರ ಹುಝೂರ್ ಹೇಳಿದರು. ಇಲ್ಲಿ ನಾನು ಪಠಿಸಿದ ವಚನಗಳಿಂದ ತಿಳಿದುಬರುವುದೇನೆಂದರೆ, ನೀವು ಸತ್ಯವಿಶ್ವಾಸಿಗಳಾಗ ಬಯಸುವುದಾದರೆ ಅಥವಾ ದಾವೆ ಮಾಡುವವರಾದರೆ, ಅಲ್ಲಾಹ್ ಮತ್ತು ಅವನ ಪ್ರವಾದಿಯನ್ನು ಅನುಸರಿಸಿರಿ.

**ಯಾ ಅಯ್ಯುಹಲ್ಲಝೀನ ಆಮನೂ ಅತೀಉಲ್ಲಾಹ ವರಸೂಲಹೂ ವಲಾ ತವಲ್ಲೌ ಅನ್‌ಹು ವ ಅನ್‌ತುಮ್ ತಸ್ಮೂನ್** (ಅಲ್‌ಅನ್‌ಫಾಲ್:21) “ಎಲ್ಲೈ ಸತ್ಯವಿಶ್ವಾಸಿಗಳೇ ನೀವು ಅಲ್ಲಾಹನು ಅವನ ಸಂದೇಶವಾಹಕನನ್ನು ಅನುಸರಿಸಿರಿ. (ಅವರು ಆದೇಶಿಸುವುದನ್ನು ಕೇಳುತ್ತಿದ್ದು, ಅವರಿಂದ ಮುಖ ತಿರುಗಿಸಬೇಡಿರಿ. ಈ ಆದೇಶವೆಲ್ಲ ನಿಮಗೆ ತಲುಪಿಸುತ್ತಿದ್ದೇವೆ. ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಮಾತುಗಳನ್ನು ನಿಮ್ಮಲ್ಲಿಗೆ ತಲುಪಿಸುತ್ತಿದ್ದೇವೆ. ಈ ಅನಸುರಣೆಯ ಪಾಠ ಮತ್ತು ಆಜ್ಞೆ ಏಕೆ ಕೊಡುತ್ತಿದ್ದೇವೆ? ಈ ಮೂಲಕ ನಿವು ತಮ್ಮ ಸ್ಥಿತಿಗತಿಗಳನ್ನು ಸುಧಾರಿಸಿಕೊಂಡು ವೈಯಕ್ತಿಕವಾಗಿಯೂ, ಸಾಮೂಹಿಕವಾಗಿಯೂ ನಿಮಗೆ ಯಶಸ್ಸುಗಳು, ಪ್ರಗತಿಯೂ ದೊರೆಯುವಂತಾಗಬೇಕೆಂದಾಗಿದೆ.

ಹುಝೂರ್ ಹೇಳಿದರು. ನಮ್ಮ ಮೇಲೆ ಅಲ್ಲಾಹನ ಬಹು ದೊಡ್ಡ ಉಪಕಾರವಿದೆ. ಅವನು ತಮ್ಮ ಆಜ್ಞೆಗಳನ್ನು ಪವಿತ್ರ ಖುರ್‌ಆನ್‌ನಲ್ಲಿ ಅವತರಿಸಿಕೊಟ್ಟು ಇಲ್ಲಿಯತನಕ ಸುರಕ್ಷಿತವಾಗಿರಿಸಿದ್ದಾನೆ. ಮತ್ತು ಉಪದೇಶಗಳನ್ನು ಸರ್ವಕಾಲಕ್ಕಾಗಿರುವುದು ಎಂದು ಹೇಳಿದ್ದಾನೆ. ಮತ್ತೆ ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರನ್ನು ಕಳುಹಿಸಿ. ಈ ಆಜ್ಞೆಗಳನ್ನು ಬಿಡಿಸಿಟ್ಟು ಎಲ್ಲ ಮಾರ್ಗಗಳನ್ನು ತೆರೆದಿದ್ದಾನೆ. ಮತ್ತು ಅಹ್ಮದಿಯಾ ಖಿಲಾಫತ್ ದಯಪಾಲಿಸಿ ನಮಗೆ ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಆಜ್ಞೆಗಳ ಮೇಲೆ ನಡೆಯಲು ಗಮನ ಸೆಳೆದಿದ್ದಾನೆ. ಅಲ್ಲದೇ ಆ ಮೂಲಕ ನೀವು ಸದಾ ಖಿಲಾಫತ್ ಅನುಗ್ರಹದಿಂದ ಅನುಗ್ರಹಿತರಾಗಿರುವರು ಎಂದಿದ್ದಾನೆ. ನಿಮ್ಮ ಒಗ್ಗಟ್ಟು ಮತ್ತು ಶಕ್ತಿಯು ಖಾಯಂ ಆಗಿರುವುದು ಹಾಗೂ ಅಲ್ಲಾಹನ ಅನುಗ್ರಹಗಳನ್ನು ಪಡೆಯುವವರಾಗುವಿರಿ. ಆದುದರಿಂದ ಯಾರೇ ಆದರೂ ನಾನು ಈ ಜಮಾಅತಿನ ಸದಸ್ಯನಾಗಿದ್ದೆನೆ ಎಂದುಕೊಂಡರೆ, ಅಹ್ಮದಿಯಾ ಜಮಾಅತಿನಲ್ಲಿ ಸೇರಿಕೊಂಡವನಾಗಿದ್ದೆನೆ. ಖಿಲಾಫತ್ ಅಹ್ಮದಿಯಾ ನಂಬುವವನಾಗಿದ್ದೇನೆ ಎಂದುಕೊಂಡರೆ ಮತ್ತು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಕಾದಿಯಾನಿ(ಅ) ರನ್ನು ಮಸೀಹ್ ಮೌಊದ್, ಮಹದಿ ಮೌಊದ್ ಭಾವಿಸುತ್ತೇನೆ ಎಂದಾದರೆ ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಪರಿಪೂರ್ಣ ಅನುಸರಣೆಯ ಭಾರ ಹೊತ್ತುಕೊಳ್ಳಬೇಕಾಗಿದೆ. ಸಂಪೂರ್ಣ ಅನುಸರಣೆಯಲ್ಲಿ ತನ್ನನ್ನು ಪ್ರಸ್ತುತಪಡಿಸಬೇಕಾಗಿದೆ.

ಹುಝೂರ್ ಹೇಳಿದರು. ಅಹ್ಮದಿಯವರು ಯಾರೇ ಆಗಿರಲಿ. ಅಲ್ಲಾಹನ ಮತ್ತು ಅವನ ಪ್ರವಾದಿಯ ಆಜ್ಞೆಗಳಿಂದ ಬೇಕೆಂದೆ ಹೊರ ನಡೆಯುವವರಾದರೆ, ಅವರು ಅಹ್ಮದಿಯರೇ ಅಲ್ಲ. ಕೆಲವು ತಪ್ಪುಗಳಾಗುತ್ತವೆ. ನ್ಯೂನತೆಗಳಿರುತ್ತವೆ. ದುರ್ಬಲತೆಗಳಿರುತ್ತವೆ. ಆದರೆ ಬೇಕಂತಲೇ ತಿಳಿದು ಹೊರನಡೆಯುವವರಾದರೆ ಅದರ ಅರ್ಥ ಅವರು ತನ್ನನ್ನು ತಾನು ಈ ಸಂಘಟನೆಯಿಂದ ಹೊರ ನಡೆಯಲು ಪ್ರಯತ್ನಿಸುತ್ತಿದ್ದಾರೆ ಎನ್ನಬಹುದು. ಆದುದರಿಂದ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಬೈಅತ್ತಿನ ಶರತ್ತುಗಳಲ್ಲಿ ಈ ಶರತ್ತನ್ನು ಬರೆದರು. ದುರಾಚಾರ ಮತ್ತು ಕೆಟ್ಟ ಅಭಿಲಾಷೆಗಳಿಂದ ದೂರವಿದ್ದು ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಶಿರಬಾಗಿ ಸ್ವೀಕರಿಸುವೆನು ಮತ್ತು ಅಲ್ಲಾಹನ ವಚನಗಳನ್ನು ಮುಹಮ್ಮದ್ ರಸೂಲುಲ್ಲಾಹ್ (ಸ) ರ ನುಡಿಗಳನ್ನು ನಿತ್ಯ ಕೃತ್ಯಗಳಿಗೆ ಮಾರ್ಗಸೂಚಿಯನ್ನಾಗಿ ಮಾಡಿಕೊಳ್ಳುವೆನು.

ಅಂದರೆ ಓರ್ವ ಅಹ್ಮದಿ ದುರಾಚಾರಗಳ ಹಿಂದೆ ಬೀಳುವವನಲ್ಲ, ಕೆಟ್ಟ ಅಭಿಲಾಷೆಗಳನ್ನು, ಲೌಕಿಕ ಆಶೆ ಆಕಾಂಕ್ಷೆಗಳನ್ನು ಹೊಂದುವವನಾಗುವುದಿಲ್ಲ. ತಪ್ಪು ಮಾತುಗಳ ಹಿಂದೆ ಬೀಳುವವನಲ್ಲ, ಪವಿತ್ರ ಖುರ್‌ಆನ್‌ನ ಎಲ್ಲ ಆಜ್ಞೆಗಳನ್ನು ಶಿರಬಾಗಿ ಪಾಲಿಸುವವನಾಗುವನು ಮತ್ತು ಅಲ್ಲಾಹನು ಹಾಗೂ ಅವನ ಪ್ರವಾದಿ ತೋರಿದ ತತ್ವಗಳಂತೆ ತನ್ನ ಜೀವನ ನಡೆಸುವ ಪ್ರಯತ್ನ ಮಾಡುವವನಾಗುತ್ತಾನೆ.

ಹುಝೂರ್ ಹೇಳಿದರು. ಆದುದರಿಂದ ಆ ಶರತ್ತುಗಳಲ್ಲಿ ಇದು ಒಂದಾಗಿದೆ. ಅದರ ಮೇಲೆ ಒಬ್ಬ ಅಹ್ಮದಿ ಹಝ್ರತ್ ಮಸೀಹ್ ಮೌಊದ್(ಅ) ರವರ ಬೈಅತ್‌ನಲ್ಲಿರುವುದಾಗಿ ವಾದ ಮಾಡುತ್ತಾನೆ. ಪುರುಷನಾಗಿರಲಿ, ಸ್ತ್ರೀಯಾಗಿರಲಿ, ಇಬ್ಬರಿಗೂ ಇದು ಅನಿವಾರ್ಯವಾಗಿದೆ. ಯಾರೇ ಆಗಿರಲಿ, ದುರಾಚಾರಗಳ ಮೇಲೆ ನಡೆಯುವವರಾದರೆ, ಸಮಾಜದ ತಪ್ಪು ವಿಧಾನಗಳು ತನ್ನೆಡೆ ಸೆಳೆದುಕೊಳ್ಳುವವರಾದರೆ ಅವರು ಬೈಅತ್ತಿನ ಹಕ್ಕನ್ನು ಪಾಲಿಸಿದಂತಾಗುವುದಿಲ್ಲ. ಲೌಕಿಕ ಲೋಭೆ ಮತ್ತು ಸಮಾಜದ ಪ್ರಭಾವ ಅವನನ್ನು ಧರ್ಮದ ಮಾತುಗಳ ಮೇಲೆ ನಡೆಯಲು ಬಿಡುವುದಿಲ್ಲವಾದರೆ ಈ ದುರ್ಬಲತೆ ಅವನಿಗೆ ಬೈಅತ್ತಿನ ಹಕ್ಕು ಪಾಲಿಸುವುದರಿಂದ ದೂರ ಮಾಡುವಂತಾಬಹುದು. ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಪಾಲಿಸಲು ಅಸಮರ್ಥರಾದರೆ ಅವನು ಬೈಅತ್ತಿನ ಹಕ್ಕು ಪಾಲಿಸಲಾಗುತ್ತಿಲ್ಲ ಮತ್ತು ಇಸ್ಲಾಮಿನಲ್ಲಿಯೂ ಅವನ ಏಳಿಗೆ ಸಾಧ್ಯವಾಗುವುದಿಲ್ಲ. ಅಲ್ಲಾಹನ ಮತ್ತು ಅವನ ಪ್ರವಾದಿಯ ಮಾತುಗಳ ಮೇಲೆ ನಡೆಯುವ ಪಾಪಿ ಸಾರಿದರೂ ಅವನ ಈ ದಾವೆ ಸುಳ್ಳಾಗಿದೆ. ಅಹ್ಮದಿಅತ್ ಹೆಸರೇ ಅಲ್ಲಾಹನ ಮತ್ತು ಅವನ ಪ್ರವಾದಿಯ ಆಜ್ಞೆಯನುಸಾರ ನಡೆಯುವುದೇ ಆಗಿದೆ. ಇದು ಅಲ್ಲಾಹನ ಬಹುದೊಡ್ಡ ಉಪಕಾರ ನಮ್ಮ ಮೇಲೆ ಆಗಿದೆ. ಅವನು ನಮಗೆ ಹಝ್ರತ್ ಮಸೀಹ್ ಮೌಊದ್(ಅ) ರನ್ನು ನಂಬಿ ಖಿಲಾಫತ್‌ನೊಂದಿಗೆ ಜೋಡಿಸಿದ್ದಾನೆ. ಆ ಮೂಲಕ ಜಮಾಅತ್ ಬಾಂಧವರನ್ನು ಪುರುಷ ಸ್ತ್ರೀ, ಯುವಕ, ವೃದ್ಧರನ್ನು, ಪದೇ ಪದೇ ಅಲ್ಲಾಹನ ಮತ್ತು ಅವನ ಪ್ರವಾದಿಯ ಅನುಸರಣೆಯತ್ತ ಗಮನ ಸೆಳೆದಿದ್ದಾನೆ. ಅದೇ ರೀತಿ ಅದೇ ಕೆಲಸಕ್ಕಾಗಿ ಜಮಾಅತಿನ ವ್ಯವಸ್ಥೆ ಇದೆ. ಜಮಾಅತಿನ ಅಧಿಕಾರಿಗಳು ಅದೇ ಕೆಲಸಕ್ಕಾಗಿ ನಿಯುಕ್ತರಾಗಿರುತ್ತಾರೆ. ಅವರು ಭಯಭಕ್ತಿಯಿಂದ ನಡೆಯಬೇಕಾಗಿದೆ. ಯಾರಾದರೂ ಈ ಮಾತುಗಳ ಕಡೆ ಲಕ್ಷವಹಿಸುವುದಿಲ್ಲವಾದರೆ ಅವರು ಪುರುಷರಾಗಲಿ, ಸ್ತ್ರೀಯರಾಗಲಿ ತಮ್ಮ ವಿಶ್ವಾಸವನ್ನು ವ್ಯರ್ಥಗೊಳಿಸುತ್ತಿದ್ದಾರೆ ಎಂದೇ ಅರ್ಥೈಸಲಾಗುವುದು. ಅವನು ಜಮಾಅತಿನ ಸಾಂಘಿಕ ಶಕ್ತಿಯನ್ನು ದುರ್ಬಲಗೊಳಿಸುತ್ತಿದ್ದಾನೆಂದೇ ಅರ್ಥ. ಅವನು ತನ್ನ ತಪ್ಪು ನಡವಳಿಕೆಗಳಿಂದ ಲೋಕದ ಮುಂದೆ ತಪ್ಪು ಚಿತ್ರಣ ನೀಡುವವನಾಗುತ್ತಾನೆ.

ಹುಝೂರ್ ಹೇಳಿದರು. ಪ್ರತಿಯೊಬ್ಬ ಸ್ತ್ರೀ, ಪುರುಷ ಅಹ್ಮದಿಯ ಕರ್ತವ್ಯವೆಂದರೆ. ಅವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ನಾವು ಎಷ್ಟರಮಟ್ಟಿಗೆ ‘ಅತಿವುಲ್ಲಾಹ್’ ಮತ್ತು ‘ಅತಿವೂರ್ರಸೂಲ್’ ಮೇಲೆ ನಡೆಯುವ ಪ್ರಯತ್ನ ಮಾಡುತ್ತಿದೇವೆ ಎಂದು. ಇಸ್ಲಾಮ್ ಅಸಂಬದ್ಧ ಆಜ್ಞೆಗಳು ನೀಡುವ ಧರ್ಮವಲ್ಲ, ಮಾನವನನ್ನು ಸಮಾಜವನ್ನು ನಿಷ್ಫಲಗೊಳಿಸುವ ಧರ್ಮವಲ್ಲ, ಅಥವಾ ಅಲ್ಲಾಹನು ಮತ್ತು ಅವನ ಪ್ರವಾದಿ ಕೇವಲ ಮನುಷ್ಯರ ಮಟ್ಟಿಗೆ ಆಜ್ಞೆ ನೀಡುವ ಧರ್ಮವಲ್ಲ, ಅಲ್ಲಾಹನಿಗೆ ನಮ್ಮ ಮೇಲೆ ಯಾವುದೇ ರೀತಿಯ ನಿಷೇಧ ಹೇರುವ ಅಗತ್ಯವಿಲ್ಲ. ಬದಲು ಅವನ ಆಜ್ಞೆಗಳೆಲ್ಲ ನಮ್ಮ ಹಿತಕ್ಕಾಗಿವೆ. ನಮ್ಮ ಜೀವನ ಸುಗಮಗೊಳಿಸಲಿಕ್ಕಾಗಿದೆ. ಅಲ್ಲಾಹನ ಸಂತೃಪ್ತಿ ಗಳಿಸಲಿಕ್ಕಾಗಿದೆ. ಅಲ್ಲಾಹನು ಒಂದೆಡೆ ಹೀಗೆ ನುಡಿಯುವನು, ಸತ್ಯವಿಶ್ವಾಸಿಗಳಿಗೆ ಅಲ್ಲಾಹ್ ಮತ್ತು ಅವನ ಪ್ರವಾದಿಯ ಕಡೆಗೆ ಕರೆ ನೀಡುವಾಗ ಹೇಳುವರು. “ಸಮಿಅನ ವ ಅತಅನ” ನಾವು ಕೇಳಿದೆವು. ಮತ್ತು ಅನಸುರಿಸುವೆವು. ಹೇಳಿದನು. ಅವರೇ ವಿಜಯಿಗಳಾಗುವರು. ಆಲಿಸಿ ಅನುಸರಿಸುವವರೇ ಸಫಲತೆ ಪಡೆಯುವವರು. ಅವರಿಗೆ ಅನುಗ್ರಹಿಸಲಾಗುವುದು, ಅವರು ವಿಜಯಿಗಳಾಗುವರು. ಅವರು ತಾವು ಬಯಸಿದ ಉತ್ತಮ ಅಭಿಲಾಷೆಗಳನ್ನು ಪಡೆಯುವರು. ನಿಶ್ಚಯವಾಗಿಯೂ ಸತ್ಯವಿಶ್ವಾಸಿಗಳ ಅಭಿಲಾಷೆಗಳು ಶುಭಕರವಾಗಿರುತ್ತವೆ. ಅವನು ಅನರ್ಥ ಅಭಿಲಾಷೆ ಹೊಂದಿದವನಾಗಿರುವುದಿಲ್ಲ. ಅವರು ಸಂತಸ ಮತ್ತು ಸದ್ಗತಿ ಪಡೆಯುವವರಾಗಿರುತ್ತಾರೆ. ಇಂತಹ ಜನರಿಗೆ ಸಂತೋಷವು ಲಭಿಸುತ್ತದೆ ಮತ್ತು ಅವರ ಸ್ಥಿತಿ ಉತ್ತಮವಾಗಿರುತ್ತದೆ. ಅವರು ಅಲ್ಲಾಹನ ಸಂರಕ್ಷಣೆ ಹೊಂದುವರು.

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*


**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**


Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.